॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ ........ 2
ಸಂಪಾದಕೀಯ ........ 3
ವಕಾಲತ್ ........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಶ್ರೀಧರ ಸ್ಮರಣೆ ........ 7
ಶ್ರೀರಾಮ ಕಥಾಸಾರ ........ 8
ಸಂಪ್ರದಾಯ ........ 9
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 10
ಮಹಾಕ್ಷತ್ರಿಯ ........ 10
ಬದುಕಲೊಂದಿಷ್ಟು ಆಪ್ತಮಾತುಗಳು ........ 13
ಧರೆಗಿಳಿದ ದಿವ್ಯತೇಜ ........ 13
ಕವನ – ಬಿಸಿಲ ಸರಿಸಿ ಮಳೆಯ ಸುರಿಸಿ ........ 16
ಕಗ್ಗದ ಬೆಳಕಿನಲ್ಲಿ ........ 17
ಕವನ – ಕ್ಷೇತ್ರ ಸಂಸ್ಥಾಪಕರ ದಿನ ........ 18
ವಚನಭಾಗವತ ........ 19
ಆನೋ ಭದ್ರಾಃ ಕೃತವೋಯಂತು ವಿಶ್ವತಃ ........ 19
ಔಷಧೀಯ ಸಸ್ಯ ಸಂಪತ್ತು ........ 20
ಸುಂದರಕಾಂಡದ ಸೌಂದರ್ಯ ........ 21
ಕವನ – ಸಂದೇಶ ........ 22
ನಾಲಿಗೆ ವಶದಲ್ಲಿದ್ದರೆ ಲೋಕವೇ ವಶ ........ 23
ಪದಬಂಧ-41 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**



ಗೂಗಲ್ ಕಂಪನಿಯ ಸಿಇಓ – ಸುಂದರ್ ಪಿಚೈ

# ದೇಹದಿಂದ ದೇವತ್ವ ಸಾಧನೆ



ಈ ಜಗತ್ತಿನಲ್ಲಿ ಭಗವಂತನ ಅನುಗ್ರಹಕ್ಕಾಗಿ, ಸಾಕ್ಷಾತ್ಕಾರಕ್ಕಾಗಿ, ಸಾನ್ನಿಧ್ಯಕ್ಕಾಗಿ ಸಾಧಕನು ಹತ್ತು ಹಲವು ಪ್ರಯತ್ನವನ್ನು ಮಾಡುತ್ತಿರುತ್ತಾನೆ. ಇಂತಹ ಪ್ರಯತ್ನದಲ್ಲಿ ಮೂರ್ತಿಪೂಜೆಯೊಂದಿಗೆ ಸಾಧನೆ ಒಂದು ಭಾಗವಾದರೆ, ನಿರಾಕಾರ, ನಿರ್ಗುಣ ಉಪಾಸನೆ ಇನ್ನೊಂದು ಭಾಗವಾಗಿದೆ.

ನಮ್ಮ ದೇಹವೇ ಭಗವಂತನ ಆಲಯವೆಂದು ಮೈತ್ರೇಯಿ ಉಪನಿಷತ್ತು ಹೇಳುವಂತೆ; ಕಠೋಪನಿಷತ್ತು ಇದನ್ನೇ ಸುಂದರವಾಗಿ ವಿವರಿಸುವುದು; 'ಆತ್ಮನನ್ನು ರಥಿಯೆಂದು, ದೇಹವನ್ನು ರಥವೆಂದೂ ತಿಳಿ'. ದೇವರನ್ನು ಅಗ್ನಿ, ಗಿಡ, ಕಲ್ಲು, ನೀರು, ಪ್ರಾಣಿ, ಪ್ರತಿಮೆ ಮುಂತಾದವುಗಳಲ್ಲಿ ಪೂಜಿಸುವುದರ ಬದಲು ಅವನನ್ನು ಮನುಷ್ಯ ದೇಹದ ಪ್ರತಿಮೆಯಲ್ಲಿ ಪೂಜಿಸಬಹುದು. ಸರ್ವವ್ಯಾಪಿಯಾದ ಭಗವಂತನನ್ನು ಪಿಂಡಾಂಡದಲ್ಲಿ ಪೂಜಿಸುವುದರ ಮೂಲಕ ಬ್ರಹ್ಮಾಂಡದಲ್ಲಿಯೂ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಪಿಂಡಾಂಡವು ಬ್ರಹ್ಮಾಂಡದ ಪಡಿಯಚ್ಚಿದ್ದಂತೆ. ಆದರೆ ಭಗವತ್ತತ್ತ್ವದ ಬದಲು ಪ್ರತೀಕ ರೂಪ ಅಥವಾ ವ್ಯಕ್ತಿತ್ವ ಇವೇ ಹೆಚ್ಚು ಪ್ರಧಾನವಾಗಿಬಿಟ್ಟರೆ ಪೂಜೆ ತನ್ನ ಆಧ್ಯಾತ್ಮಿಕ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಪೂಜೆ ಪ್ರಾರ್ಥನೆಗಳ ಮೂಲಕ ಪ್ರಯೋಜನವನ್ನು ಪಡೆಯಬೇಕಾದರೆ ನಾವು ಸರಿಯಾದ ಭಾವವನ್ನು ಮತ್ತು ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಸರಿಯಾದ ಭಾವವನ್ನು ಹೇಗೆ ಸೃಷ್ಟಿಸುವುದು? ನಮ್ಮ ಯೋಚನಾಸ್ತರಗಳನ್ನು ನಿಗ್ರಹಿಸಿ ನಮ್ಮ ಉನ್ನತ ಆಧ್ಯಾತ್ಮಿಕ ಸಾಧ್ಯತೆಗಳನ್ನು ಹಂತಹಂತವಾಗಿ ಅರಿತುಕೊಳ್ಳುವುದರ ಮೂಲಕ ಇದು ಸಾಧ್ಯವೆಂದು ತಂತ್ರಶಾಸ್ತ್ರ ಹೇಳುತ್ತದೆ. ಆರು ಯೌಗಿಕ ಚಕ್ರಗಳಿಗೆ ಸಂಬಂಧಿಸಿದ ವಿವಿಧ ಯೋಚನಾಸ್ತರಗಳು ಮತ್ತು ಏಳನೇಯದಾದ ಸಹಸ್ರಾರ– ಇವುಗಳನ್ನು ಸೋಪಾನ ಪಂಕ್ತಿಗಳಿರುವ ಕಟ್ಟಡದ ವಿವಿಧ ಮಾಳಿಗೆಗಳಿಗೆ ಹೋಲಿಸಬಹುದು. ಈ ಚಕ್ರಗಳು ನಾವು ಮತ್ತು ವಿವಿಧ ಪ್ರಜ್ಞಾಸ್ತರಗಳು ಸಂಪರ್ಕಿಸುವ ಬಿಂದು. ಪ್ರಜ್ಞೆಯನ್ನು ಕೆಳಗಿನ ಕೇಂದ್ರದಿಂದ ಮೇಲೇರಿಸಿ ಉನ್ನತ ಕೇಂದ್ರಕ್ಕೆ ಕೊಂಡೊಯ್ಯುವ ಆಧ್ಯಾತ್ಮಿಕ ಸಾಧನೆ ಅತ್ಯಂತ ಕಠಿಣ. ಆದರೆ ಧ್ಯಾನಮಾರ್ಗವನ್ನು ಅನುಸರಿಸಬಯಸುವ ಪ್ರತಿಯೊಬ್ಬ ಸಾಧಕನೂ ತನ್ನ ಪ್ರಜ್ಞಾಕೇಂದ್ರವನ್ನು ಕೊನೆಯ ಪಕ್ಷ ತನ್ನ ಹೃದಯ ಕೇಂದ್ರದವರೆಗಾದರೂ ಏರಿಸಬೇಕು. ಈ ಕೇಂದ್ರವನ್ನು ಅಂತರಾಕಾಶವೆಂದು ಹೇಳಬಹುದು. ಕೆಲವರಿಗೆ ಹೃದಯವನ್ನು ಪ್ರಜ್ಞಾಕೇಂದ್ರವಾಗಿ ಇಟ್ಟುಕೊಳ್ಳುವುದು ಸುಲಭವೆನಿಸುತ್ತದೆ, ಕೆಲವರಿಗೆ ಭ್ರೂಮಧ್ಯಪ್ರದೇಶವು ಸುಲಭವೆನಿಸುತ್ತದೆ.

ಯಾರಿಗೆ ಯಾವ ಪ್ರತೀಕ ಅಥವಾ ಮೂರ್ತಿಯ ಕಡೆಯೂ ಆಕರ್ಷಣೆಯಿಲ್ಲದಿದ್ದರೆ ಅವರು ಯಾವುದಾದರೂ ಉನ್ನತ ಪ್ರಜ್ಞಾಕೇಂದ್ರದಲ್ಲಿ ಸರ್ವವ್ಯಾಪಿಯಾದ ದಿವ್ಯಜ್ಯೋತಿಯ ಮೇಲೆ ಧ್ಯಾನ ಮಾಡಬಹುದು. ರೂಪವಿಲ್ಲದೇ ಧ್ಯಾನ ಮಾಡಲಾಗದಿದ್ದರೆ ಜ್ಯೋತಿರ್ಮಯ ರೂಪದ ಮೇಲೆ ಧ್ಯಾನ ಮಾಡಬಹುದು. ಅದು ಮುಂದೆ ರೂಪರಹಿತವಾದ ಎಲ್ಲವನ್ನೂ ಬೆಳಗುವ ಪರಂಜ್ಯೋತಿಯೆಡೆಗೆ ಒಯ್ಯುವುದು.

ಜೀವಾತ್ಮವು ಕಾರಣಶರೀರದಿಂದ ಆವೃತವಾಗಿದೆ, ಇದು ಸೂಕ್ಷ್ಮಶರೀರದಿಂದಲೂ ಮತ್ತು ಸೂಕ್ಷ್ಮಶರೀರ ಸ್ಥೂಲಶರೀರದಿಂದಲೂ ಆವೃತವಾಗಿದೆ. ಈ ಮೂರೂ ಶರೀರಗಳು ಕಲುಷಿತವಾಗಿವೆ. ಕಾರಣಶರೀರವು ಮೂಲ ಅವಿದ್ಯೆಯಿಂದ ದೂಷಿತವಾಗಿದೆ, ಸೂಕ್ಷ್ಮಶರೀರವು ಸಂಸ್ಕಾರ ಭಾವೋದ್ವೇಗದಿಂದ ದೂಷಿತವಾಗಿದೆ. ಸ್ಥೂಲ ಮತ್ತು ಸೂಕ್ಷ್ಮಶರೀರಗಳೆರಡೂ ಸ್ವಾರ್ಥ, ಆಸೆಗಳಿಂದ ಕೂಡಿದ ಅಸಮನ್ವಯ ಅಹಂಕಾರದಿಂದ ದೂಷಿತವಾಗಿದೆ. ಈ ಅಸಮನ್ವಯ ಅಹಂಕಾರ ಮನಸ್ಸನ್ನು ಕೆಡಿಸುತ್ತದೆ, ಮತ್ತು ಇವೆರಡೂ ದೈಹಿಕಕ್ರಿಯೆಗಳನ್ನು ಅಸ್ತವ್ಯಸ್ತಗೊಳಿಸುತ್ತದೆ. ಆದರೆ ಈ ಅಸಮನ್ವಯತೆಯ ಪರಿಹಾರಕ್ಕೆ ದಾರಿಯೆಂದರೆ; ಈ ಸ್ಥೂಲ ಸೂಕ್ಷ್ಮಗಳೆರಡನ್ನೂ ಅವು ಯಾವುದರಿಂದ ಬಂದಿದೆಯೋ ಆ ಮೂಲಕ್ಕೆ ತೆಗೆದುಕೊಂಡು ಹೋಗಬೇಕು. ನಾವು ದೇವರಲ್ಲಿ ವಾಸಿಸುತ್ತೇವೆ. ದೇವರು ನಮ್ಮಲ್ಲಿ ವಾಸಿಸುತ್ತಿರುವನು ಎಂಬ ಪರಮಸತ್ಯವನ್ನು ನಾವು ಅರಿಯಬೇಕು. ಎಲ್ಲವೂ ಭಗವಂತನಿಗೆ ಸಂಬಂಧಿಸಿದ್ದು ಎಂದು ಅವನಿಗೇ ಸಮರ್ಪಿಸಬೇಕು. ಹೀಗೆ ಧ್ಯಾನದ ಮೂಲಕ ಕೆಳಕೇಂದ್ರದಿಂದ ಮೇಲಿನ ಕೇಂದ್ರದೆಡೆಗೆ ಮುಂದುವರಿದು ಕೊನೆಯಲ್ಲಿ ಜೀವಾತ್ಮನು ಪರಮಾತ್ಮನೊಂದಿಗೆ ಒಂದಾಗಬಹುದು. ಇದಕ್ಕೆ ನಿರಂತರ ಸಾಧನೆ ಬೇಕು. ಆದರೆ ನಿಧಾನವಾಗಿ ಇಚ್ಛಾಶಕ್ತಿಯ ಮೂಲಕ ಪ್ರಜ್ಞೆಯನ್ನು ಮೇಲೇರಿಸುತ್ತ ಹೋಗಿ ಉನ್ನತ ಸತ್ಯದ ದರ್ಶನವನ್ನು ಪಡೆಯಬಹುದು. ಆಗ ಆ ದಿವ್ಯ ಚೈತನ್ಯವು ನಮ್ಮಲ್ಲಿಯೂ ಇರುವುದರ ಅರಿವು ನಮಗಾಗುವುದು. ಆ ದಿವ್ಯ ಚೈತನ್ಯದ ಸಂವೇದನೆ ನಮಗುಂಟಾದರೆ ಆಗ ನವ ಶಕ್ತಿ ನಮ್ಮಲ್ಲಿ ಜಾಗೃತವಾಗುವುದು. ನಮ್ಮ ಜೀವನ ವಿಧಾನದಲ್ಲಿ, ಸೇವೆಯ ಗುಣಮಟ್ಟದಲ್ಲಿ, ನಮ್ಮ ಚಿಂತನೆ ಆಲೋಚನೆಗಳಲ್ಲಿ ಬದಲಾವಣೆ ಕಂಡು ಬರುವುದು. ನಮ್ಮ ಬಗ್ಗೆ ಮತ್ತು ಇತರರ ಬಗ್ಗೆ ನಮ್ಮ ದೃಷ್ಟಿಕೋನವೇ ಬದಲಾಗುವುದು. ಹೀಗೆ ಜಪ ಮತ್ತು ಧ್ಯಾನದ ಮೂಲಕವೂ ಆಂತರಿಕ ಸತ್ಯದ ಸಾಕ್ಷಾತ್ಕಾರವನ್ನು ಪಡೆಯಬಹುದು. ಈ ವಿಧಾನದಿಂದ ಪ್ರಜ್ಞಾತೀತ ಅವಸ್ಥೆಯನ್ನು ಮುಟ್ಟಲು ಕೆಲವೇ ಮಂದಿ ಸಮರ್ಥರಾಗಬಲ್ಲರು. ಅಂಥಹ ಸಾಧಕರು ಕೆಲವೇ ಮಂದಿಯಾದರೂ ಇಚ್ಛಾಶಕ್ತಿಯೊಂದಿಗೆ ಕೆಲವರಲ್ಲಿ ನಾವೂ ಸಾಧಕರಾಗಲು ಪ್ರಯತ್ನಿಸೋಣ.

**ಶ್ರೀ ರಾಮಸ್ಮರಣಂ**
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
**ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**



ಮೈಕ್ರೊಸಾಫ್ಟ್ ಕಂಪನಿಯ ಸಿಇಓ – ಸತ್ಯ ನಡೆಲ್ಲಾ

# ಗುಣ

ಸತ್–ಗುಣವೇ ಜೀವನ
ಆಗಬಹುದು ನಂದನವನ

ಗುಣಾಃ ಪೂಜಾಸ್ಥಾನಂ। ಗುಣಿಷು ನ ಚ ಲಿಂಗಂ ನ ಚ ವಯಃ॥ –ಭಾರವಿಃ

ಕವಿ ಭಾರವಿ ಗುಣದ ಕುರಿತಾಗಿ ನುಡಿಯುವ ಮಾತಿದು. ಅಂದರೆ ಗುಣಕ್ಕೆ ಪೂಜ್ಯಸ್ಥಾನವಿದೆ. ಲಿಂಗಭೇದವಿಲ್ಲದೆ, ವಯಸ್ಸಿನ ಭೇದವಿಲ್ಲದೆ ಗುಣವು ಸದಾ ಪೂಜ್ಯಸ್ಥಾನ ಹೊಂದಿದೆ. ಅಂದರೆ ಹೆಣ್ಣು–ಗಂಡು ಎನ್ನುವ ಭೇದವಿಲ್ಲದೆ ಗುಣವಂತರನ್ನು ಗೌರವಿಸುತ್ತಾರೆ. ಚಿಕ್ಕ ಬಾಲಕನೇ ಇರಲಿ, ವಯಸ್ಸಿನಲ್ಲಿ ವೃದ್ಧನೇ ಇರಲಿ ಉತ್ತಮ ಗುಣ ಹೊಂದಿದ್ದರೆ ಅಂತವರನ್ನು ಗೌರವಿಸುತ್ತಾರೆ. ಹೀಗೆ ಒಳ್ಳೆಯ ಗುಣ ಸದಾ ಗೌರವಾಸ್ಪದವಾದದ್ದು.

ಸದ್ಗುಣ–ದುರ್ಗುಣ ಗುಣಗಳಲ್ಲಿ ಗುರುತಿಸಲ್ಪಡುತ್ತದೆ. ಉತ್ತಮ ನಡತೆ–ಸ್ವಭಾವಗಳಿಂದ ಕೂಡಿದ ವ್ಯಕ್ತಿಯನ್ನು ಸದ್ಗುಣವಂತ ಎಂದರೆ, ಕೆಟ್ಟ ನಡತೆ–ಸ್ವಭಾವದಿಂದ ಕೂಡಿದರೆ ದುರ್ಗುಣಿ ಎಂದು ನಿಂದಿಸಲ್ಪಡುತ್ತಾನೆ. ಸದ್ಗುಣಿಯ ಸಂಗ ಅನ್ಯರಿಗೆ ಬೇಕೆನಿಸಿದರೆ ದುರ್ಗುಣಿ ಅಗೌರವದಿಂದ ಕೂಡಿದ ಸರ್ವರಿಂದ ದೂರವಿರುವುದು ಅನಿವಾರ್ಯವಾಗುತ್ತದೆ. ಹೀಗೆ ಬದುಕಿನಲ್ಲಿ ಸದ್ಗುಣ–ದುರ್ಗುಣ ವ್ಯಕ್ತಿತ್ವವನ್ನು ರೂಪಿಸುತ್ತದೆ. ಸದ್ಗುಣಗಳಿಂದ ಧರ್ಮರಾಜ ಸುಖ್ಯಾತನಾದ, ದುರ್ಗುಣಗಳಿಂದ ರಾವಣ ದುರ್ಯೋದನಾದಿಗಳು ಕುಖ್ಯಾತರಾದರು.

ಗುಣವು ಬದುಕಿನಲ್ಲಿ ಸಂಸ್ಕಾರದಿಂದ ಬರುತ್ತದೆ, ಸಜ್ಜನ ಸಂಗದಿಂದ ಬರುತ್ತದೆ, ಅಥವಾ ತಂದೆ–ತಾಯಿ–ಬಂಧು ಬಳಗದವರ ಸನ್ನಡತೆಯಿಂದ ಅಂತರ್ಗತವಾಗುತ್ತದೆ. ಅಂದರೆ ಅದು ಮೇಲ್ನೋಟಕ್ಕೆ ಕಾಣುವ ತೋರಣವಲ್ಲ, ಅಲಂಕಾರವಲ್ಲ. ಅಂತರ್ಗತವಾಗಿ ಹೃದಯಾಂತರಾಳದಲ್ಲಿರುವ ಸಚ್ಚಿಂತನೆಯ ಸ್ವರೂಪವಾಗಿ ಮಾತಿನ ಮೂಲಕ, ಕೃತಿಯ ಮೂಲಕ, ಅನ್ಯರ ಆಶೋತ್ತರಗಳಿಗೆ ಸತ್‌ಸ್ಪಂದನೆ ನೀಡುವ ಮೂಲಕ ಪ್ರಕಟಗೊಳ್ಳುತ್ತದೆ. ಜಾತಿ, ಭೇದ–ಭಾವ ಯಾವುದೂ ಇಲ್ಲದೆ ವಯಸ್ಸಿನ ನಿರ್ಬಂಧವಿಲ್ಲದೆ ತನ್ನಿಂದ ತಾನೇ ಸರ್ವರ ಪ್ರೀತಿಗೆ ಪಾತ್ರವಾಗುತ್ತದೆ. ಹೀಗೆ ಗುಣವೆನ್ನುವುದು ತನ್ನಿಂದ ತಾನೇ ಪ್ರಕಟಗೊಳ್ಳುತ್ತದೆ. ಸಂಸ್ಕೃತ ಸುಭಾಷಿತ ನುಡಿಯುವಂತೆ,

ಗುಣಾಃ ಸಂತಿ ನರಾಣಾಂ ಚೇದ್‌ವಿಕಸಂತ್ಯೇವ ತೇ ಸ್ವಯಂ।
ನ ಹಿ ಕಸ್ತೂರಿಕಾಮೋದಃ ಶಪಥೇನ ವಿಭಾವ್ಯತೇ॥

ಕಸ್ತೂರಿ ಪರಿಮಳ ಇಲ್ಲಿ ಇದೆ ಎನ್ನುವ ಘೋಷಣೆ ಅವಶ್ಯಕತೆ ಇರುವುದಿಲ್ಲ. ಪರಿಮಳದ ಆ ಘಾಟು ತನ್ನಿಂದ ತಾನೆ ಇದೆ ಇರುವುದನ್ನು ದೃಢಪಡಿಸುತ್ತದೆ. ಹಾಗೆ ಮನುಷ್ಯನ ಸದ್ಗುಣ ಆತನ ನಡತೆ, ಮಾತು, ಭಾವನೆ, ಚಿಂತನೆ, ಅವನ ಇರುವಿಕೆ, ಆತನ ಒಳ್ಳೆಯತನಕ್ಕೆ ಯಾವ ದೃಢೀಕರಣದ ಅವಶ್ಯಕತೆ ಇಲ್ಲದೆ ತನ್ನಿಂದ ತಾನೇ ಪ್ರಕಟಗೊಳ್ಳುತ್ತದೆ. ಸಜ್ಜನಿಕೆಯ ಸತ್ಪಾತ್ರತೆ ಅಂತರಂಗದ ಬೇರಾಗಿ ಒಳಿತನ್ನು ಕಂಡು, ಕಾಣಿಸುವ ಕನ್ನಡಿಯಾಗುತ್ತದೆ. ಒಳ್ಳೆಯದನ್ನೇ ಮಾಡಬೇಕೆನ್ನುವ ತುಡಿತ ತೃಪ್ತಿಗೊಳ್ಳದೆ, ಮುದುಡದೇ ಮೈದೆರೆದು ಮೂರ್ತಿವೆತ್ತ ರೂಪವಾಗಿ ಅಂತರಂಗಕ್ಕೆ ಐಸಿರಿಯಾಗಿ ತೆರೆದುಕೊಳ್ಳುತ್ತದೆ.

ಸದ್ಗುಣವಿಭೂಷಿತನಾದವನು ಕೇವಲ ತನ್ನ ಕ್ಷೇತ್ರ ಮಾತ್ರವಲ್ಲ ಎಲ್ಲೆಲ್ಲೂ ಎಂದೆಂದೂ ಗೌರವಾರ್ಹ. ಉತ್ತಮ ಗುಣಗಳಿಂದ ಶ್ರೇಷ್ಠರೆಲ್ಲ ಜಗತ್ತಿನ ಮಣಿಗಳಾಗಿ ಬೆಳಕ ಚೆಲ್ಲಿದರು. ದುರ್ಗುಣದಿಂದ ಕೂಡಿದವರಾರೂ ಹೆಚ್ಚು ಕಾಲ ಬೆಳಗಲಿಲ್ಲ, ಬದುಕಲಿಲ್ಲ. ಆದ್ದರಿಂದ ಸದ್ಗುಣಗಳ ಗಣಿಯಾದರೆ ಮಾತ್ರ ಬದುಕು ಬದುಕಾಗುತ್ತದೆ.

ನಿಜ ಬದುಕಿನ ಅಂತರಂಗವೇ ಗುಣ
ಸಹಜವಾಗಿ ಸಂಪನ್ನಗೊಂಡು ದೂರವಾಗಿಸುತ ದುರ್ಗುಣ।
ಜನಮೆಚ್ಚಿ ಜಗಮೆಚ್ಚಿ ತಾನಾಗುವುದು ಬಂಗಾರ
ಸದ್ಗುಣವೇ ಸರ್ವರೊಲುಮೆಗೆ ಜೀವನದ ಆಧಾರ॥

ಸದ್ಗುಣಗಳನ್ನು ಸಂಪಾದಿಸುತ್ತ ಸಾರ್ಥಕ ಬದುಕಿನತ್ತ ಸಹಜ ಹೆಜ್ಜೆಗಳನ್ನಿಡುತ್ತ, ಅನ್ಯರ ಆನಂದದಲ್ಲಿ ಸುಖ–ಸಂತೋಷ ಕಾಣುತ್ತಾ ಬದುಕಿ, ಅನ್ಯರನ್ನೂ ಬದುಕಿಸಿ, ಬೊಗಸೆಯಲ್ಲಿ ಮೊಗೆಯುವ ಮಾಘ ಮಾಸವನ್ನು ಸ್ವಾಗತಿಸೋಣವೇ?

ಸಂಪಾದಕೀಯ.

**ಹೇಮಪುರ ಪತ್ರಿಕೆಯ ಚಂದಾವಿವರ**

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–
* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮಪುರ ಮಾಸಪತ್ರಿಕೆ. ಫೋನ್ ನಂ: 08387–268333,268545,268544.



ನೋಕಿಯಾ ಕಂಪನಿಯ ಸಿಇಓ – ರಾಜೀವ್ ಸುರಿ

ವಕಾಲತ

# ನ್ಯಾಯಾಧೀಶ ಬೆಳಕನ್ನು ನೀಡಬೇಕೇ ವಿನಃ ಬಿಸಿಯನ್ನಲ್ಲ

ಲೇ॥ ನ್ಯಾಯವಾದಿ ನಾಗರಾಜ ನಾಯಕ

ನ್ಯಾಯಾಧೀಶ ಬೆಳಕನ್ನು ನೀಡಬೇಕೇ ವಿನಃ ಬಿಸಿಯನ್ನಲ್ಲ ಎಂದು ತೀರ್ಮಾನವೊಂದರಲ್ಲೇ ಹೇಳಲಾಗಿದೆ. ಹೌದು. ನ್ಯಾಯಾಲಯದ ಬಾಗಿಲನ್ನು ಬಡಿಯುವುದು ನ್ಯಾಯಕ್ಕಾಗಿ, ಆ ಮೂಲಕ ನೊಂದ ಮನಕ್ಕೆ ಸಾಂತ್ವನಕ್ಕಾಗಿ. ಅದಕ್ಕಾಗಿ ನ್ಯಾಯಲಯವನ್ನು ತಾಯಿಗೆ ಹೋಲಿಸಲಾಗಿದೆ. ನ್ಯಾಯಾಲಯದ ಉದ್ದೇಶ ಕೇವಲ ಶಿಕ್ಷೆ ನೀಡುವುದಕ್ಕಾಗಿ ಅಲ್ಲ, ಬದಲಿಗೆ ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಒಳಗಾದವರ ಕಣ್ಣೀರು ಒರೆಸಲಿಕ್ಕೆ. ನ್ಯಾಯ ಕೇಳಲು ಬಂದರೆ ಕೇವಲ ಬಿಸಿಯೇ ದೊರೆತರೆ ಮತ್ತೆ ಬೆಳಕು ನೀಡುವವರಾರು?

ನ್ಯಾಯಾಧೀಶರಿಗೆ ಮೊದಲು ಇರಬೇಕಾಗಿರುವದೇ ತಾಳ್ಮೆ. ತಾಳ್ಮೆಯನ್ನು ಶಾಂತತೆಯ ಸಹೋದರಿ ಎಂದೂ ಕರೆಯಲಾಗಿದೆ. ಶಾಂತತೆಯು ನ್ಯಾಯಾಧೀಶರಿಗೆ ಅತಿ ಅವಶ್ಯಕವಾಗಿದ್ದು ಇದನ್ನು ನಿರ್ಭಯ ಮತ್ತು ಪ್ರಾಮಾಣಿಕತೆಯಷ್ಟೇ ಮಹತ್ವವುಳ್ಳದ್ದು ಎಂದೂ ಹೇಳಲಾಗಿದೆ. ತಾಳ್ಮೆಯ ಪ್ರತಿಯೊಂದು ಕಾರ್ಯಗಳಿಗೆ ಪರಿಹಾರ ಎಂದು ವರ್ಣಿಸಲಾಗಿದೆ. ಬೈಬಲ್ ಒಂದೆಡೆ ಹೇಳುತ್ತದೆ. “Patience or Silence be good for the wise, how much the better for others-unwise or not so wise” ತಾಳ್ಮೆಯು ಬುದ್ಧಿವಂತರಿಗೆ ಇರಲೇ ಬೇಕಾದದ್ದು ಮತ್ತು ತಾಳ್ಮೆಯು ಹಲವು ಸಮಸ್ಯೆಗಳನ್ನು ನಿವಾರಿಸುತ್ತದೆ. ನ್ಯಾಯಾಧೀಶನ ಬುದ್ಧಿವಂತಿಕೆಗೆ ಐದು ಅಂಶಗಳು ಪ್ರಧಾನವಾದದ್ದು. ಒಂದು ತಾಳ್ಮೆ, ಎರಡು ಆಲಿಸುವುದು, ಮೂರು ಅರ್ಥಮಾಡಿಕೊಳ್ಳುವುದು, ನಾಲ್ಕು ಎಚ್ಚರಿಕೆಯಿಂದ ಪರಿಗಣಿಸುವುದು ಮತ್ತು ಕೊನೆಯದಾಗಿ ಆಚರಣೆ. ನ್ಯಾಯಾಧೀಶನ ಬುದ್ಧಿವಂತಿಕೆಗೆ ಪ್ರಧಾನವಾದ ಐದು ಅಂಶಗಳಲ್ಲಿ ತಾಳ್ಮೆಗೇ ಮೊದಲನೇ ಸ್ಥಾನ ಮತ್ತು ಇನ್ನುಳಿದ ಅಂಶಗಳಿಗೆ ಅದೇ ಸೋಪಾನ. ತಾಳ್ಮೆಯನ್ನು ರೂಢಿಸಿಕೊಳ್ಳುವುದರಲ್ಲಿ ಸಿಟ್ಟಿಗೆ ಕಟ್ಟಳೆ ಹಾಕುವುದು ಬಹುಮುಖ್ಯವಾದದ್ದು. ಅಧಿಕಾರವು ತಾಳ್ಮೆರಹಿತವಾಗಿದ್ದರೆ ಬಹು ಅಪಾಯಕಾರಿಯಾದದ್ದು. ಸಿಟ್ಟೇ ಹಿಂಸೆಯನ್ನು ಹುಟ್ಟು ಹಾಕುವ ತಾಯಿ.

ತಾಳ್ಮೆಯು ಅಂತರಾತ್ಮದ ಶಕ್ತಿ. ನ್ಯಾಯಾಲಯವನ್ನು ತಂಪೆರೆಯುವ ಮರಕ್ಕೆ ಹೋಲಿಸಬಹುದು, “ಕಾರಿರುಳು ರಾತ್ರಿಯೊಳು ತಾರೆ ನೂರಿದ್ದರೇನು? ಮಾನುಜ ಸಖ ಬಯಸುವುದು ಚಂದ್ರ ಬಿಂಬ” ಎಂದು ಕಗ್ಗದಲ್ಲಿ ಹೇಳಲಾಗಿದೆ. ರಾತ್ರಿಯ ದಾರಿಹೋಕನಿಗೆ ನೂರಾರು ತಾರೆಗಳು ಮಿನುಗುತ್ತಿದ್ದರೂ ಅವುಗಳ ಬೆಳಕನ್ನು ಬಯಸುವುದಿಲ್ಲ. ಬದಲಿಗೆ ತಂಪೆರೆಯುವ ಚಂದ್ರನ ಬೆಳಕನ್ನೇ ಬಯಸುತ್ತಾನೆ. ನ್ಯಾಯಾಧೀಶ ನೀಡುವ ಬೆಳಕು ಚಂದ್ರನ ಬೆಳಕಿನಂತೆ ತಂಪಾಗಿರಬೇಕು.

ಹಿಂದೂ ತತ್ವಶಾಸ್ತ್ರವೂ ನ್ಯಾಯಾಧೀಶರನ್ನು ಎಂದೂ ಬಾಡದ ಮತ್ತು ಸದಾ ಪ್ರಫುಲ್ಲವಾಗಿರುವ ಹೂವಿಗೆ ಹೋಲಿಸಿದೆ. ಒಂದು ಕಥೆಯ ಪ್ರಕಾರ ಶ್ರೀ ಆದಿಶಂಕರಾಚಾರ್ಯರಿಗೂ ಮತ್ತು ಮಂಡನಮಿಶ್ರರಿಗೂ ಧರ್ಮಕ್ಕೆ ಸಂಬಂಧಿಸಿದಂತೆ ವಾದ ನಡೆಯಿತು. ಸ್ವತಃ ಸರಸ್ವತಿಯೇ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತಿದ್ದು, ವಾದ ಮಾಡುವ ಅವರೀರ್ವರಿಗೂ ಸಮಾನವಾದ ಸ್ಥಾನ ಕೊಡಲಾಗಿತ್ತು. ಸರಸ್ವತಿಯು ಅದಾಗ ಅರಳಿದ ಹೂವನ್ನು ಆರಿಸಿ ತಂದು ಮಾಲೆಯನ್ನು ಮಾಡಿ ಎರಡೂ ಜನರ ಕೊರಳಿಗೆ ಹಾಕಿದಳು. ಸರಸ್ವತಿಯ ಉದ್ದೇಶವೇನೆಂದರೆ ವಾದ-ವಿವಾದದ ಸಮಯದಲ್ಲಿ ಕೊರಳಿಗೆ ಹಾಕಿದ ಹಾರವೂ ಯಾರು ಗೆದ್ದರು? ಮತ್ತು ಯಾರು ಸೋತರು? ಎನ್ನುವುದನ್ನು ನಿಶ್ಚಯಿಸಬೇಕು. ಯಾಕೆಂದರೆ ಯಾರ ಮಾಲೆಯು ಮೊದಲು ಬಾಡುತ್ತದೆಯೋ ಆತ ಸೋತನೆಂದಲೂ ಮತ್ತೊಬ್ಬ ಗೆದ್ದನೆಂತಲೂ ಅರ್ಥ. ಯಾರಿಗೆ ಬುದ್ಧಿವಂತಿಕೆಯಿದೆಯೋ? ಯೋಚನಾ ಶಕ್ತಿ ಹೊಂದಿದ್ದಾನೋ ಆತ್ಮಸ್ಥೈರ್ಯ ಹೊಂದಿದ್ದಾನೋ ಆತ ಶಾಂತಿ, ತಾಳ್ಮೆ ಮತ್ತು ಸಹನೆಯನ್ನು ಹೊಂದಿರುತ್ತಾನೆ, ಆತನ ಮಾತುಗಳು ತಂಪಾದ ಗಾಳಿಯಂತೆ ಇರುತ್ತದೆ. ಆದ್ದರಿಂದ ಹೂವಿನ ಮಾಲೆ ಬಹಳ ಹೊತ್ತಿನವರೆಗೆ ಪ್ರಫುಲ್ಲವಾಗಿರುತ್ತದೆ. ಬುದ್ಧಿವಂತಿಕೆ, ಯೋಚನಾಶಕ್ತಿ ಮತ್ತು ಆತ್ಮಸ್ಥೈರ್ಯ ಹೊಂದಿರದವನ ಮಾತುಗಳು ಕಠೋರವಾಗಿ, ಗಡುಸಾಗಿ ಇರುತ್ತದೆ. ಅಷ್ಟೇ ಅಲ್ಲದೇ ಆತನ ರಕ್ತ ಸಂಚಾರ ತೀವ್ರವಾಗಿದ್ದು, ಉಸಿರಾಟ ಬಿಸಿಯಾಗಿರುತ್ತದೆ. ಆದ್ದರಿಂದ ಅಂತವನ ಕೊರಳಿನ ಸುತ್ತಲೂ ಇರುವ ಮಾಲೆ ಬೇಗ ಬಾಡುತ್ತದೆ. ಹೂವಿನಂತೆ ಆಹ್ಲಾದಕರ ಮತ್ತು ಪ್ರಫುಲ್ಲವಾದ ಮನಸ್ಸು ನ್ಯಾಯಾಧೀಶನದಿರಬೇಕು ಎಂದು ಜಸ್ಟೀಸ್ ಆರ್.ಸಿ.ಲಾಹೋಟಿ ಹೇಳಿದ್ದಾರೆ.

ನ್ಯಾಯ ವಿತರಣಾ ವ್ಯವಸ್ಥೆಯು ನ್ಯಾಯಾಧೀಶರ ಮೇಲೆ ಅವಲಂಬಿತವಾಗಿದೆ. ನ್ಯಾಯಾಧೀಶರ ಪ್ರತಿಯೊಂದು ಕಾರ್ಯ, ಅವರ ಪ್ರತಿಯೊಂದು ಮಾತು ಮತ್ತು ಬರಹ ತಾಳ್ಮೆಯಿಂದ ಕೂಡಿರಲೇಬೇಕು. ಆ ಮೂಲಕ ನ್ಯಾಯಾಂಗದಲ್ಲಿ ಜನತೆಯಿಟ್ಟ ಭರವಸೆಯನ್ನು ಕಾದುಕೊಂಡುಬರಬೇಕು. ನ್ಯಾಯಾಲಯವನ್ನು ಈ ದೇಶದ ಜನತೆಯು ದೇವಾಲಯ ಎಂದೇ ತಿಳಿದಿದ್ದಾರೆ. ದೇವಾಲಯದಲ್ಲಿ ಕುಳಿತ ದೇವರಿಂದ ಜನತೆ ಸದಾ ಒಳ್ಳೆಯದನ್ನೇ ನಿರೀಕ್ಷಿಸುತ್ತದೆ..

“ ನಮ್ಮ ದೃಷ್ಟಿ, ನಮ್ಮ ಶಕ್ತಿ ಹೇಗಿರಬೇಕೆಂದರೆ
ಇತರರು ಅನ್ಯಾಯವಾಗಿ ನಮ್ಮ ಲಾಭ ಪಡೆಯುವಂತಾಗಬಾರದು ”

ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು



ನೀತಿ ಆಯೋಗದ ಸಿಇಓ – ಅಮಿತಾಬ್ ಕಾಂತ್

ಮಧುರ ಪ್ರಕಾಶನ

# ಆಡಿಯೋ ಕ್ಯಾಸೆಟ್ ವಿಧಾನ

ಎಂ. ಎಲ್.ರಾಘವೇಂದ್ರರಾವ್

ಹಿಪ್ನಾಟಿಜಂ ಮೇಲೆ ಆಡಿಯೋ ಕ್ಯಾಸೆಟ್ಗಳಿವೆ. ವಿದೇಶಗಳಲ್ಲಿ ಪ್ರಮುಖ ಹಿಪ್ನಾಟಿಸ್ಟರು, ನಮ್ಮ ದೇಶದವರು, ನಮ್ಮ ರಾಜ್ಯದವರು ಸಿದ್ಧಪಡಿಸಿದ ಕ್ಯಾಸೆಟ್‌ಗಳು ನಿಮಗೆ ಕೈ ಅಳತೆಯಲ್ಲೇ ಇರುವ ಹಾಗೆ ಆ ಕ್ಯಾಸೆಟ್ ಸಹಾಯದ ಮೂಲಕ ನೀವು ಪ್ರತಿಬಾರಿ ಹಿಪ್ನಾಟೈಜ್ ಆಗಬಹುದು.

ಧ್ವನಿಸುರುಳಿ ಮೂಲಕ ಹಿಪ್ನಾಟೈಜ್ ಆಗುವುದೆಂದರೆ ಬಹಳಷ್ಟು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಅಂದರೆ ನೀವು ಉಪಯೋಗಿಸುವ ಟೇಪ್ ರೆಕಾರ್ಡರ್ ಉತ್ತಮ ಗುಣಮಟ್ಟದ್ದಾಗಿರಬೇಕು. ಸೌಂಡ್ ಸಿಸ್ಟಮ್ ಚೆನ್ನಾಗಿರಬೇಕು. ಕ್ಯಾಸೆಟ್ಟನ್ನು ಉಪಯೋಗಿಸಿದಾಗ ಎರಡು ಮೂರು ಬಾರಿ ನಿಮಗೆ ಅರ್ಥವಾಗುವಂತೆ ಕೇಳಬೇಕು.

ಕ್ಷಣಗಳಲ್ಲಿ ಹಿಪ್ನಾಟೈಜ್ ಆಗುವುದು ಹೇಗೆ?

ನೀವು ಅಂದುಕೊಂಡ ಕೂಡಲೇ ಅಂದರೆ ಕ್ಷಣಗಳಲ್ಲಿ ಸೆಲ್ಫ್ ಹಿಪ್ನಾಸಿಸ್‌ಗೆ ಹೋಗಬೇಕೆಂದರೆ ನೀವು ಹಿಪ್ನಾಸಿಸ್‌ಗೆ ಗಾಢವಾದ ಸ್ಥಿತಿಗೆ ಹೋಗುವುದನ್ನು ಕಲಿಯಬೇಕು. ಮೊದಲು ನೀವು ಹೆಚ್ಚುಬಾರಿ ಸೆಲ್ಫ್ ಹಿಪ್ನಾಸಿಸ್ ಅಭ್ಯಾಸ ಮಾಡಿರಬೇಕು.

ಹಿಪ್ನಾಟಿಸ್ಟಿರಿಂದ ನೀವು ಯಾವತ್ತಾದರೂ ಒಂದು ಬಾರಿ ಹಿಪ್ನಟೈಜ್ ಆಗಿರಿ. ಆಗ ಹಿಪ್ನಾಟಿಸ್ಟ್ ನಿಮ್ಮನ್ನು ಗಾಢವಾದ ಸ್ಥಿತಿಗೆ ಕರೆದೊಯ್ದು ನಿಮಗೆ ಪೋಸ್ಟ್ ಹಿಪ್ನಾಟಿಕ್ ಸಜೆಷನ್ ಕೊಡುತ್ತದೆ. ಅಂದರೆ ನೀವು ಕ್ಷಣಗಳಲ್ಲಿ ಹಿಪ್ನಾಟೈಜ್ ಆಗುವುದಕ್ಕೆ ಒಂದು ಕೋಡ್ ನಿಮಗೆ ಕೊಡಲಾಗುತ್ತಿದೆ.

ನೀವು ಕ್ಷಣಗಳಲ್ಲಿ ಹಿಪ್ನಾಟೈಜ್ ಆಗಬೇಕೆಂದುಕೊಂಡಾಗ ಪ್ರಶಾಂತವಾಗಿ ಒಂದು ಕುರ್ಚಿಯಲ್ಲಿ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡು ಆ ಕೋಡ್ ಅಂದುಕೊಳ್ಳುವುದರಿಂದ ತಕ್ಷಣವೇ ಹಿಪ್ನಾಟೈಜ್ ಆಗಿಬಿಡುತ್ತೀರಿ ಎಲ್ಲರಿಗೂ ಹಿಪ್ನಾಟೈಜ್ ಕೈ ಅಳತೆಯಲ್ಲಿರುವುದಿಲ್ಲ. ಆದ್ದರಿಂದ ನೀವು ನಿರುತ್ಸಾಹ ಪಡಬಾರದು.

ಹಿಪ್ನಾಟಿಸ್ಟ್ ಸೌಲಭ್ಯ ಇಲ್ಲದವರು ಈ ಪುಸ್ತಕದಲ್ಲಿ ಕೊಟ್ಟಿರುವ ವಿಧಾನಗಳ ಪ್ರಕಾರ ಕೆಲವು ದಿನಗಳು ಅಭ್ಯಾಸ ಮಾಡಿದ ನಂತರ ನೀವು ಹಿಪ್ನಾಸಿಸೆಗೆ ಹೋಗುವುದು ಬಹಳ ಸುಲಭವಾಗುತ್ತದೆ.

ಆ ಬಳಿಕ ತ್ವರಿತವಾಗಿ ಸಮಾಧಿ ಸ್ಥಿತಿಗೆ ಹೋಗುವುದಕ್ಕೆ ಪ್ರಯತ್ನಿಸಿರಿ. ಅದಕ್ಕಾಗಿ ನೀವು ಈ ಕೆಳಗೆ ವಿವರಿಸಲಾದ ವಿಧಾನವನ್ನು ಅನುಸರಿಸಬೇಕಾಗಿರುತ್ತದೆ.

ಕಣ್ಣುಗಳನ್ನು ಮುಚ್ಚಿಕೊಂಡು ನೆಮ್ಮದಿಯಾಗಿ ಕುಳಿತುಕೊಳ್ಳಿ.

ಉಸಿರನ್ನು ಹತ್ತುಬಾರಿ ಗಾಢವಾಗಿ ಹೀರಿ ಬಿಡುತ್ತಿರಬೇಕು. ಸಮಾಧಿ ಸ್ಥಿತಿಗೆ ಹೋಗುವುದಕ್ಕೆ ಇತರ ಆಲೋಚನೆಗಳನ್ನು ಬಿಟ್ಟು ಟ್ರಾನ್ಸ್ ಮೇಲೆಯೇ ನೆಡಬೇಕು.

ಆಮೇಲೆ ಹೀಗೆ ಸಲಹೆಗಳನ್ನು (ಸಜೆಷನ್ಸ್) ಮನಸ್ಸಿನಲ್ಲೇ ಅಂದುಕೊಳ್ಳಬೇಕು.

ಒಂದು... ನಾನು ಕೂಡಲೇ ಟ್ರಾನ್ಸೆಗೆ ಹೊರಟು ಹೋಗುತ್ತಿದ್ದೇನೆ.

ಎರಡು... ರಿಲಾಕ್ಸ್

ನಾಲ್ಕು... ರಿಲಾಕ್ಸ್... ರಿಲಾಕ್ಸ್

ಐದು... ವೆರೀಡೀಪ್... ರಿಲಾಕ್ಸ್... ರಿಲಾಕ್ಸ್

(ಹೀಗೆ ಹೇಳ್ತಾನೇ ಮನಸ್ಸಿನಲ್ಲಿ ನೀವು ಇಷ್ಟಕ್ಕೆ ಮುಂಚೆ ಹಿಪ್ನಾಟೈಜ್ ಆಗುವಾಗ ಉಂಟಾಗುವ ಮಾನಸಿಕ, ದೈಹಿಕ ಸ್ಥಿತಿಯನ್ನು ಹೊಂದುತ್ತಿರುವಂತೆ ಅನುಭೂತಿಗೆ ಒಳಗಾಗುತ್ತಿರಬೇಕು)

ಆರು... ರಿಲಾಕ್ಸ್

ಏಳು... ರಿಲಾಕ್ಸ್

ಎಂಟು... ಡೀಪ್... ಡೀಪ್...

ಒಂಬತ್ತು... ವೆರೀ... ವೇರಿ... ಡೀಪ್ ರಿಲಾಕ್ಸ್

ಹತ್ತು... ರಿಲಾಕ್ಸ್ ಡೀಪ್ ರಿಲಾಕ್ಸ್

ಇವೆಲ್ಲವನ್ನೂ ಸಹ ಎರಡು ನಿಮಿಷಗಳಲ್ಲಿ ಪೂರ್ತಿಯಾಗುವಂತೆ ಅಭ್ಯಾಸ ಮಾಡಿಕೊಳ್ಳಬೇಕು. ನೀವು ಅಭ್ಯಾಸ ಮಾಡುತ್ತಿದ್ದಂತೆಲ್ಲ ಚೆನ್ನಾಗಿ ರೂಢಿಯಾಗುತ್ತದೆ. ಆಗ ನೀವು ಕ್ಷಣಗಳಲ್ಲಿ ಹಿಪ್ನಾಸಿಸನ್ನು ಉಂಟಾಗಿಸಿಕೊಳ್ಳುತ್ತೀರಿ. ಹೀಗೆ ಹಿಪ್ನಾಸಿಸನ್ನು ಏರ್ಪಡಿಸಿಕೊಂಡ ನಂತರ ನಿಮಗೆ ಎಷ್ಟು ಹೊತ್ತು ವಿಶ್ರಾಂತಿ ಅಗತ್ಯವೋ ನಿಮ್ಮ ಅಂತಃ ಚೇತನ ನಿರ್ಣಯಿಸುತ್ತದೆ. ಅದುವರೆಗೂ ನೀವು ಹಾಯಾಗಿ ವಿಶ್ರಾಂತಿ ತೆಗೆದುಕೊಂಡು ಮತ್ತೆ ನೀವಾಗಿ ನೀವೇ ಟ್ರಾನ್ಸ್‌ನಿಂದ ಕನ್ಷಸ್ ಸ್ಥಿತಿಗೆ ಬಂದುಬಿಡುತ್ತೀರಿ? ಅಥವಾ ಒಂದು ಕ್ರಮ ಪದ್ಧತಿಯಲ್ಲಿ ಹತ್ತು ಅಂಕೆಗಳನ್ನು ಲೆಕ್ಕ ಹಾಕುತ್ತಾ ನಿಧಾನವಾಗಿ ನೀವು ಟ್ರಾನ್ಸ್‌ನಿಂದ ಸಹಜ ಸ್ಥಿತಿಗೆ ಬಂದುಬಿಡಬಹುದು.



ಸ್ನಾಪ್‌ಡೀಲ್ ಕಂಪನಿಯ ಸಿಇಓ – ಕನಾಲಿ ವಾಹಿ

ಇಷ್ಟು ಸುಲಭವಾಗಿ ಕ್ಷಣಗಳಲ್ಲಿ ಹಿಪ್ನಾಟೈಜ್ ಆಗುವುದು ನಿಮಗೆ ಆಶ್ಚರ್ಯ ಆಗಬಹುದು. ಕೆಲವರಿಗೆ ಈ ವಿಧಾನದ ಮೇಲೆ ನಂಬಿಕೆ ಬಾರದೆಯಿರಬಹುದು. ಆದರೂ ನೀವು ಅಭ್ಯಾಸ ಮಾಡಿದರೆ ನಿಮಗೂ ಸಹ ಅನುಭವ ಪೂರ್ವಕವಾಗಿ ನಂಬಿಕೆ ಉಂಟಾಗುವುದೇ ಅಲ್ಲದೇ ನೀವು ಸಹ ಬೇರೆಯವರಿಗೆ ಕಲಿಸುವ ಸ್ಥಿತಿಗೆ ಬರುತ್ತೀರಿ.

ಸಂದರ್ಭ ಬಂದಿದೆ ಆದ್ದರಿಂದ ನಿಮಗೆ ಒಂದು ಒಳ್ಳೆ ಉದಾಹರಣೆ ಅಂದರೆ... ಅನುಭವದಲ್ಲಿ ಯಾವತ್ತೂ ನಾನು ಕೆಲವು ನೂರು ಮಂದಿ ಮುಂದೆ ಸ್ಟೇಜ್ ಹಿಪ್ನಾಟಿಜಂ ಪ್ರದರ್ಶನದಲ್ಲಿ ಮಾಡಿ ತೋರಿಸುವ ವಿಧಾನವನ್ನು ನಿಮಗೆ ವಿವರಿಸುತ್ತೇನೆ.

ನಾನು ವೈಜ್ಞಾನಿಕ ಹಿಪ್ನಾಟಿಜಂ ಪ್ರದರ್ಶನದಲ್ಲಿ ಮೊದಲು ಸೆಲ್ಫ್ ಹಿಪ್ನಾಟಿಜಂಗೆ ಸಂಬಂಧಿಸಿದ ಒಂದು ಅಂಶ ಪ್ರೇಕ್ಷಕರಿಗೆ ಮಾಡಿ ತೋರಿಸಲಾಗುತ್ತದೆ. ಒಬ್ಬ ವ್ಯಕ್ತಿ ರಂಗದ ಮೇಲೆ ಕೂರುತ್ತಾನೆ. ನಾನು ಆ ವ್ಯಕ್ತಿ ಹತ್ತಿರಕ್ಕೆ ಹೋಗಿ ತಲೆ ಮೇಲೆ ನನ್ನ ಕೈಯಿಟ್ಟು 'ರಿಲಾಕ್ಸ್' ಎಂದೊಡನೇ ಆ ವ್ಯಕ್ತಿ ಟ್ರಾನ್ಸ್‌ಗೆ ಹೋಗಿಬಿಡುತ್ತಾನೆ. ಆದರೆ ಇದನ್ನು ನೋಡಿದ ಪ್ರೇಕ್ಷಕರು ಆತ ಹಿಪ್ನಾಟಿಸ್ಟ ಅಸಿಸ್ಟೆಂಟ್ ಆಗಿರುತ್ತಾನೆ ಅದಕ್ಕೇ ಹಾಗೇ ನಟಿಸುತ್ತಿದ್ದಾನೆ ಅಂತ ಅನುಮಾನ ವ್ಯಕ್ತಪಡಿಸುತ್ತಿರುತ್ತಾರೆ. ಅವರ ಅನುಮಾನ ನಿವಾರಿಸುವುದಕ್ಕೆ ನಾನು ಪ್ರೇಕ್ಷಕರಿಂದ ಐದಾರು ಮಂದಿ ಪ್ರಮುಖರನ್ನು ವೇದಿಕೆ ಮೇಲೆ ಆಹ್ವಾನಿಸಿ ಅವರ ಕೈಗಳಿಗೆ ನೀಡಲ್ಸ್ ಕೊಟ್ಟು ಆ ವ್ಯಕ್ತಿ ಮೈಮೇಲೆ ಚುಚ್ಚುವಂತೆ ಹೇಳುತ್ತೇನೆ. ಆಗ ಹಿಪ್ನಾಟೈಜ್  ಆದ ವ್ಯಕ್ತಿ ದೇಹದ ಭಾಗಗಳಲ್ಲಿ ಸೂಜಿಯಿಂದ ಚುಚ್ಚಿ ಪರೀಕ್ಷಿಸುತ್ತಾರೆ. ಅವರು ಹಾಗೆ ಚುಚ್ಚಿದಾಗ ಆಯಾ ಭಾಗಗಳಲ್ಲಿ ಹಿಪ್ನಾಟೈಜ್ ಆದ ವ್ಯಕ್ತಿಗೆ ಸ್ವಲ್ಪ ಕೂಡಾ ನೋವೆನಿಸುವುದಿಲ್ಲ. ಆಗ ಪ್ರೇಕ್ಷಕರಿಗೆ ಆತ ಹಿಪ್ನಾಟೈಜ್ ಆಗಿದ್ದಾನೆಂದು ನಂಬಿಕೆ ಬರುತ್ತದೆ. ಬಹಳ ಸಂದರ್ಭಗಳಲ್ಲಿ ಡಾಕ್ಟರ್‌ಗಳು, ಸೈಕಾಲಜಿಸ್ಟರು ವೇದಿಕೆ ಮೇಲೆ ಬಂದು ಅವರ ಇಷ್ಟಾನುಸಾರ ದೇಹದಲ್ಲಿನ ವಿವಿಧ ಭಾಗಗಳಲ್ಲಿ ಸೂಜಿಯಿಂದ ಚುಚ್ಚಿ ಆಯಾ ಭಾಗಗಳಲ್ಲಿ ನೋವಿಲ್ಲವೆಂದು ನಿಶ್ಚಯಿಸುತ್ತಾರೆ. ಹಿಪ್ನಾಟೈಜ್ ಆದಾಗ ಒಂದು ಹಂತದಲ್ಲಿ ದೇಹದಲ್ಲಿ ನೋವು ಗೊತ್ತಾಗುವುದಿಲ್ಲ. ಸೆಲ್ಫ್ ಹಿಪ್ನಾಟಿಸಿಸ್‌ಗೆ ಆ ವ್ಯಕ್ತಿ ಹೋಗುವುದರಿಂದ ರಂಗ ಪ್ರದರ್ಶನದಲ್ಲಿ ಈ ಅಂಶವನ್ನು ಮಾಡುತ್ತಿದ್ದೇನೆ. ನೀವು ಸಹ ಆ ಸ್ಥಿತಿಗೆ ಹೋಗುವುದಕ್ಕೆ ಪ್ರಯತ್ನಿಸಿದರೆ ನೀವು ಸಹ ಅಂತಹ ಅನುಭೂತಿಯನ್ನು ಏರ್ಪಡಿಸಿಕೊಳ್ಳಬಹುದು.

ಆಡಿಯೊ ಕ್ಯಾಸೆಟ್ಸ್ ಮೂಲಕ ಸೆಲ್ಫ್ ಹಿಪ್ನಾಟಿಜಂ

ಆಡಿಯೊ ಕ್ಯಾಸೆಟ್ ಮೂಲಕ ಸಹ ಸೆಲ್ಫ್ ಟ್ರಾನ್ಸ್ ಏರ್ಪಡಿಸಿಕೊಳ್ಳಬಹುದು. ಸಾಮಾನ್ಯವಾಗಿ ಕ್ಯಾಸೆಟನ್ನು ಕೊಂಡಾಗ ನೀವು ಹೇಗೆ ಪ್ರಯತ್ನಿಸಬೇಕೋ ಅದರಲ್ಲಿರುತ್ತದೆ. ಟ್ರಾನ್ಸ್‌ಗೆ ಹೋಗುವುದು, ಮತ್ತೆ ಪ್ರಜ್ಞೆಗೆ ಬರುವುದು ಮುಂತಾದ ವಿವರಗಳಿಂದ ನಿಮಗೆ ತಿಳಿದು ಬರುತ್ತದೆ.

ಆದರೂ ಆಡಿಯೊ ಕ್ಯಾಸೆಟ್ಸ್ ಮೂಲಕ ಕೆಲವು ತೊಂದರೆಗಳು ಸಹ ಇಲ್ಲದೆ ಇಲ್ಲ. ಕ್ಯಾಸೆಟ್ಟಿನಿಂದ ಬರುವ ಸಲಹೆಗಳ ಪ್ರಕಾರ ನಿಮ್ಮಲ್ಲಿ ಆ ಸಮಯದಲ್ಲಿ ಬದಲಾವಣೆಗಳು ಆಗದೆ ಹೋಗಬಹುದು. ಉದಾಹರಣೆಗೆ:"ಕಣ್ಣು ರೆಪ್ಪೆಗಳು ಗಟ್ಟಿಯಾಗಿ ಅಂಟಿಕೊಂಡು ಹೋಗುತ್ತಿವೆ" ಅಂತ ಸಜೆಷನ್ಸ್ ಕೇಳಿಸಿದರೆ ಆ ಸಮಯದಲ್ಲಿ ನಿಮಗೆ ಅಂತಹ ಅನುಭೂತಿ ಆಗದೆ ಹೋಗಬಹುದು. ನಿಮಗೆ ನೀವೇ ಸ್ವತಃ ಸಜೆಷನ್ಸ್ ಕೊಟ್ಟುಕೊಳ್ಳುತ್ತಾ ಸೆಲ್ಫ್ ಟ್ರಾನ್ಸ್‌ಗೆ ಹೋಗುತ್ತಿದ್ದರೆ ಆ ಸ್ಥಿತಿಗೆ ತಕ್ಕಂತೆ ನೀವು ಸಜೆಷನ್ಸ್ ಬೆಳೆಸುವುದು ಕಡಿಮೆ ಮಾಡುವುದು ನಡೆಯುತ್ತದೆ. ಆದರೆ ಇಂತಹ ಪರಿಸ್ಥಿತಿಗಳನ್ನು ಎದುರಿಸುವುದು ಹೇಗೆ ಅನ್ನೋ ವಿಷಯವನ್ನು ಪರಿಶೀಲಿಸೋಣ.

ನೀವು ಕ್ಯಾಸೆಟ್ಟನ್ನು ಉಪಯೋಗಿಸಿ ಟ್ರಾನ್ಸ್ ವ್ಯವಸ್ಥೆಯನ್ನು ಮಾಡಿಕೊಳ್ಳುವಾಗ ಮೊದಲ ಬಾರಿಯಲ್ಲೇ ನಿಮ್ಮಲ್ಲಿ ಬದಲಾವಣೆ ಬಾರದೆ ಹೋದರೆ ಯಾವುದೇ ಆತಂಕಕ್ಕೆ ಒಳಗಾಗದೆ ಕ್ಯಾಸೆಟ್ ಮೂಲಕ ಆ ವಿಧಾನವನ್ನು ನಾಲ್ಕೈದು ಬಾರಿ ಹಾಗೇ ಕೇಳುತ್ತಾ ಅಭ್ಯಾಸ ಮಾಡಬಹುದು.

ಫ್ರೀ–ಹಿಪ್ನಾಟಿಕ್ ಲಾಕ್

ನಿಮ್ಮನ್ನು ನೀವು ಹಿಪ್ನಾಟೈಜೆಗೆ ಒಳಪಡಿಸಿಕೊಳ್ಳುವುದಕ್ಕೆ ಮುಂಚೆ ಫ್ರೀ ಹಿಪ್ನಾಟಿಕ್ ಲಾಕ್ ನಿರ್ವಹಿಸಿಕೊಳ್ಳಬೇಕು. ಅಂದರೆ ನೀವು ಟ್ರಾನ್ಸ್ ಬಗ್ಗೆ ಸರಿಯಾದ ತಿಳುವಳಿಕೆ ಹೊಂದಿರಬೇಕು. ನೀವು ಯಾಕೆ ಟ್ರಾನ್ಸ್‌ಗೆ ಹೋಗಬೇಕೆಂದುಕೊಳ್ಳುತ್ತಿದ್ದೀರಿ; ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಅಂತಿದ್ದೀರಾ – ಎಂಬ ವಿಷಯಗಳ ಬಗ್ಗೆ ಮೊದಲು ನೀವು ಸರಿಯಾದ ತಿಳುವಳಿಕೆ ಹೊಂದಿರಬೇಕು. ಹಾಗೆ ಮೊದಲು ನಿಮಗೆ ಟ್ರಾನ್ಸ್ ಬಗ್ಗೆ ಇರುವ ಭಯ ಬಿಟ್ಟು ಹೋಗಬೇಕು.

ನೀವೊಂದು ಸಮಸ್ಯೆ ಬಗೆಹರಿಸಿಕೊಳ್ಳಬೇಕೂಂತಿದ್ದೀರಾ ಅಂತಿಟ್ಟುಕೊಳ್ಳಿ. ಮುಂಚಿತವಾಗಿ ಅದರ ಕುರಿತು ಚರ್ಚಿಸಿಕೊಳ್ಳಬೇಕು. ನೀವು ಯಾವ ಯಾವ ಸಜೆಷನ್ಸ್, ಸಲಹೆಗಳನ್ನು ಕೊಡಬೇಕೆಂದಿರುವಿರೋ ಅವುಗಳನ್ನು ಸಂಕ್ಷಿಪ್ತವಾಗಿ ಹಾಳೆ ಮೇಲೆ ಬರೆದುಕೊಳ್ಳುವುದು ಉತ್ತಮ. ಸಜೆಷನ್ಸ್, ಸಲಹೆಗಳು ಎರಡಕ್ಕಿಂತ ಹೆಚ್ಚಾಗಿ ಇರದಂತೆ ನೋಡಿಕೊಳ್ಳಿ.

ನೀವು ಕೊಡುವ ಸಲಹೆಗಳು ಎಷ್ಟರ ಮಟ್ಟಿಗೆ ಸರಿಯಾದದ್ದು, ಮುಂಚಿತವಾಗಿ ಪರಿಶೀಲಿಸಿಕೊಳ್ಳಬೇಕು. ಹಿಪ್ನಟೈಜ್ ಆಗುವ ಪ್ರತಿಬಾರಿ ಮೊದಲು ಫ್ರೀ ಹಿಪ್ನಾಟಿಕ್ ಲಾಕ್ ಅಗತ್ಯವಿಲ್ಲ. ಒಂದೆರಡು ಬಾರಿ ಮಾಡಿದರೆ ಸಾಕು.

ಹಿಪ್ನಟೈಜ್ ಆಗುವುದಕ್ಕೆ ಮುಂಚೆ ಹೀಗೆ ಫ್ರೀ ಹಿಪ್ನಾಟಿಕ್ ಲಾಕ್ ನಿರ್ವಹಿಸಿಕೊಳ್ಳದೆ ಟ್ರಾನ್ಸ್‌ಗೆ ಹೋಗುವುದಕ್ಕೆ ಪ್ರಯತ್ನಿಸಿದರೆ ನಿಮಗೆ ಅಂಥ ಉತ್ತಮ ಫಲಿತಾಂಶಗಳು ಉಂಟಾಗದೆ ಹೋಗಬಹುದು. ನಿಮ್ಮಲ್ಲಿರುವ ರೆಸಿಸ್ಟೆನ್ಸನ್ನು ಕೂಡಾ ಹೀಗೆ ತೊಲಗಿಸಿಕೊಳ್ಳಬಹುದು. ಆದ್ದರಿಂದ ಫ್ರೀ ಹಿಪ್ನಾಟಿಕ್ ಲಾಕ್ ಒಳ್ಳೆ ಉಪಯೋಗವನ್ನು ಉಂಟಾಗಿಸುತ್ತದೆ.



ಫ್ಲಿಪ್‌ಕಾರ್ಟ್ ಕಂಪನಿಯ ಸಿಇಒ – ಕಲ್ಯಾಣ್ ಕೃಷ್ಣಮೂರ್ತಿ

ಸೆಲ್ಫ್ ಹಿಪ್ನಾಸಿಸ್ ಸ್ಥಿತಿಯನ್ನು ಗುರ್ತಿಸುವುದು ಹೇಗೆ?

ಹಿಪ್ನಾಸಿಸ್ ಹೋದನಾ! ಇಲ್ಲವಾ! ಎಂಬ ಸಂದೇಹ ಬಹಳ ಜನರಲ್ಲಿ ಉಂಟಾಗುತ್ತಿರುತ್ತದೆ. ಸಾಮಾನ್ಯವಾಗಿ ಬಹಳ ಬಾರಿ ಹಿಪ್ನಟೈಜ್ ಆದವರು ಇಂತಹ ಅನುಮಾನಗಳಿಗೆ ಆಸ್ಪದ ಕೊಡುವುದಿಲ್ಲ. ಅವರಿಗೆ ಪ್ರತಿಬಾರಿ

ಆಗುವ ಅನುಭವ, ಅನುಭೂತಿ, ಅವರ ಅನುಮಾನಗಳಿಗೆ ಉತ್ತರ ಹೇಳುತ್ತದೆ. ಆದರೆ ಹೊಸದಾಗಿ ಅಭ್ಯಾಸ ಮಾಡುತ್ತಿರುವವರಿಗೆ ಹೀಗೆ ಅನುಮಾನ ಬರುವುದು ಸಾಮಾನ್ಯವೇ. ಅಂತಹ ಸಂದರ್ಭಗಳಲ್ಲಿ ನೀವು ಕೆಲವು ಪರೀಕ್ಷೆಗಳನ್ನು ಮಾಡಿಕೊಳ್ಳುವುದರ ಮೂಲಕ ನಿಮ್ಮಲ್ಲಿ ಉಂಟಾಗುವ ಹಿಪ್ನಾಸಿಸ್ ಸ್ಥಿತಿಯನ್ನು ಗುರ್ತಿಸಬಹುದು.

ನೀವು ಟ್ರಾನ್ಸ್- ಸಮಾಧಿ ಸ್ಥಿತಿಯಲ್ಲಿರುವ ಮೊದಲ ಹಂತದಲ್ಲಿ ಸುತ್ತಲೂ ಇರುವ ಶಬ್ದಗಳು ಕೇಳಿಸುತ್ತಿರುತ್ತವೆ. ಮೈ ಎಲ್ಲಾ ಭಾರವಾಗುತ್ತಿರುವಂತೆ ಮನಸ್ಸು ಯಾವುದೋ ಪ್ರಶಾಂತವಾದ, ಗಾಢವಾದ ಸ್ಥಿತಿಗೆ ಹೋಗುತ್ತಿರುವಂತಿರುತ್ತದೆ. ಇಲ್ಲಿ ಕೆಲವು ವಿಧವಾದ ವಿಧಾನಗಳ ಮೂಲಕ ನಿಮ್ಮ ಒಂದು ಸಮಾಧಿ ಸ್ಥಿತಿಯನ್ನು ನಿರ್ಧರಿಸಬಹುದು.

ಹ್ಯಾಂಡ್ಸ್ ಲಿಮಿಟೇಷನ್

ನಿಮ್ಮ ಎರಡು ಕೈಗಳು ಹಗುರಾಗುತ್ತಿರುವಂತೆ ಅವು ಮೆಲ್ಲಮೆಲ್ಲನೆ ಮೇಲಕ್ಕೆ ಏಳುತ್ತಿರುವಂತೆ ಊಹಿಸಬೇಕು.

ಹೇಗೆ ಸಲಹೆಗಳನ್ನು ನೀಡಬೇಕೋ ವಿವರಿಸುತ್ತೇನೆ.

'ನನ್ನ ಎರಡು ಕೈಗಳು ಹಗುರಾಗಿ ಹೋಗುತ್ತಿವೆ' ನಾನು ಒಂದರಿಂದ ಐದು ಅಂಕೆಗಳನ್ನು ಲೆಕ್ಕ ಹಾಕುತ್ತಿದ್ದೇನೆ. ಐದು ಅಂಕಗಳು ಲೆಕ್ಕ ಹಾಕುವ ಹೊತ್ತಿಗೆ ನನ್ನ ಎಂಟು ಕೈಗಳು ಮೇಲಕ್ಕೇಳುತ್ತಿವೆ.

ಮೂರು... ಇನ್ನೂ... ಮೇಲಕ್ಕೇಳುತ್ತಿವೆ... ಗಾಳಿಯಲ್ಲಿ ಹಗುರಾಗಿ ಮೇಲಕ್ಕೆ ಇನ್ನೂ ಇನ್ನೂ ಮೇಲಕ್ಕೆ...

ನಾಲ್ಕು... ಐದು... ಕೈಗಳೆರಡೂ ಇನ್ನೂ ಇನ್ನೂ ಮೇಲಕ್ಕೆ ತೇಲಿಹೋಗುತ್ತಿವೆ.

ನೀವು ಕುರ್ಚಿಯಲ್ಲಾಗಲಿ, ಸೋಫಾದಲ್ಲಾಗಲಿ ಕುಳಿತಿದ್ದರೆ ನೀವು ಮೇಲಕ್ಕೆ ಏಳದೆ ಹೋಗುತ್ತಿರುವಂತೆ ಸಲಹೆಗಳನ್ನು ನೀಡಿ ಮೇಲಕ್ಕೆ ಏಳಲಾಗದ ಸ್ಥಿತಿಯನ್ನು ನಿಮಗೆ ನೀವೇ ನಿರ್ಧರಿಸಿಕೊಳ್ಳಬಹುದು. ನಾನು ಈಗ ಒಂದರಿಂದ ಹತ್ತು ಅಂಕೆಗಳನ್ನು ಲೆಕ್ಕ ಹಾಕುತ್ತಿದ್ದೇನೆ. ಹತ್ತು ಲೆಕ್ಕ ಹಾಕಿದೊಡನೆ ನಾನು ಕುರ್ಚಿಯಿಂದ ಮೇಲಕ್ಕೆ ಏಳಲಾರೆ. (ಒಂದರಿಂದ ನಿಧಾನವಾಗಿ ಹತ್ತು ಅಂಕೆಗಳನ್ನು ಲೆಕ್ಕ ಹಾಕಿ ಮಧ್ಯಮಧ್ಯದಲ್ಲಿ ನೀವು ಮೇಲಕ್ಕೆ ಏಳಲಾರದೆ ಹೋಗುತ್ತಿರುವನೆಂದು ಸಲಹೆ ಕೂಡಾ ಕೊಡುತ್ತಾ ಇರಿ. ಸಲಹೆಗಳನ್ನು ಮನಸ್ಸಿನಲ್ಲೇ ಅಂದುಕೊಳ್ಳಬೇಕು. ಆನಂತರ ಮತ್ತೆ ಹತ್ತು ಅಂಕೆಗಳು ಹಿಂದಕ್ಕೆ ಲೆಕ್ಕ ಹಾಕಿ ಏಳಬಲ್ಲೆ ಎಂದು ಸಲಹೆಗಳನ್ನು ನೀಡುತ್ತಾ ಎದ್ದು ನೋಡಿರಿ.)

ಶ್ರೀಧರ ಸ್ಮರಣೆ

# ಭಕ್ತಿಗೆ ಸೋತು ಹಾಲನ್ನು ಕುಡಿದರು

ಲೇ: ಶ್ರೀ ಜಿ. ಟಿ. ಶ್ರೀಧರಶರ್ಮ
9480473568

ಆಹಾರ ನಮ್ಮ ಬದುಕಿಗೆ ಬೇಕೇ ಬೇಕು. ಹಾಗಂತ ನಾವು ಸಿಕ್ಕಿದ್ದನ್ನೆಲ್ಲಾ, ಸಿಕ್ಕ ಸಿಕ್ಕಲ್ಲಿ ಸ್ವೀಕರಿಸಬಾರದು. ಅನಿವಾರ್ಯ ಆದಾಗ ಬಿಡಲೂಬಾರದು. ಈ ಬದುಕು ಸ್ವೀಕಾರಕ್ಕೇ ಹೊರತು ತಿರಸ್ಕಾರಕ್ಕಲ್ಲ ಎಂಬುದನ್ನು ಶ್ರೀಧರಸ್ವಾಮಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಇತರರಿಗೆ ಮಾದರಿಯೂ ಆಗಿದ್ದರು.

ಸಜ್ಜನಗಡದಲ್ಲಿ ಶ್ರೀಧರರಿದ್ದಾಗ ನಡೆದ ಘಟನೆಯಿದು. ಅಲ್ಲಿ ಅವರು ತಮ್ಮ ಗುರುಗಳಾದ ಶ್ರೀ ಸಮರ್ಥ ರಾಮದಾಸರಿಂದ ಬಂದ " ದಕ್ಷಿಣಕ್ಕೆ ಹೋಗಿ ಪ್ರಚಾರಕಾರ್ಯದಲ್ಲಿ ನಿರತನಾಗು" ಎಂಬ ಆಜ್ಞೆಯನ್ನನುಸರಿಸಿ ಸಜ್ಜನಗಡದಿಂದ ಕರ್ನಾಟಕಕ್ಕೆ ಬರುತ್ತಿರುವಾಗ 'ಸಂಕೇಶ್ವರ' ಎಂಬ ಊರಿನ ಮಾರುತಿ ಮಂದಿರದಲ್ಲಿ ವಿಶ್ರಮಿಸಿದ್ದರು. ಅಲ್ಲಿ ಒಂದು ದಿನ ಸಾಯಂಕಾಲ ಬಹಳ ಧ್ಯಾನಮಗ್ನರಾಗಿದ್ದರು. ಎಷ್ಟೋ ಹೊತ್ತಾದ ಬಳಿಕ ಕಣ್ಣು ತೆರೆದು ನೋಡಿದಾಗ ಮುಸಲ್ಮಾನನೊಬ್ಬನು ಕೈ ಮುಗಿದು ನಿಂತಿದ್ದನು. ಅವನನ್ನು ಏನು, ಎತ್ತ ಎಂದು ವಿಚಾರಿಸಿದಾಗ ಅವನು "ಸ್ವಾಮಿ! ತಾವು ನನಗೆ ದೇವರಂತೆ ಕಾಣುತ್ತಿದ್ದೀರಿ. ನೀವು ತುಂಬಾ ಹೊತ್ತಿನಿಂದ ಉಪವಾಸವಿದ್ದಂತೆಯೂ ಕಾಣುತ್ತೀರಿ. ಹಾಗಾಗಿ ನಿಮಗಾಗಿ ಈ ಆಕಳ ಹಾಲನ್ನು ತಂದಿದ್ದೇನೆ. ಇದು ನಮ್ಮ ಮನೆಯದೇ ಹಾಲು. ದಯಮಾಡಿ ಸ್ವೀಕರಿಸಿ" ಎಂದು ಅಡ್ಡಬಿದ್ದು ಬೇಡಿಕೊಂಡನು. ಅವನ ಭಕ್ತಿಗೆ ಸೋತ ಶ್ರೀಧರರು ಪ್ರೀತಿಯಿಂದ ಆ ಹಾಲನ್ನು ಕುಡಿದರು. ಈ ಘಟನೆಯಿಂದ ಶ್ರೀಧರರಿಗೆ ಎಲ್ಲ ಧರ್ಮದವರೂ ಒಂದೇ; ಕುಲ-ಧರ್ಮಕ್ಕಿಂತ ಶುದ್ಧವಾದ ಮನಸ್ಸು ಮುಖ್ಯ ಎಂಬ ತತ್ವವನ್ನು ಕಾಣಬಹುದು. ಈಗಲೂ ಕೂಡ ಶ್ರೀಧರರ ಭಕ್ತರಲ್ಲಿ ಹಿಂದೂಗಳೊಂದಿಗೆ ಮುಸಲ್ಮಾನರು, ಕ್ರಿಶ್ಚಿಯನ್ನರೇ ಮೊದಲಾಗಿ ಎಲ್ಲ ಧರ್ಮಾನುಯಾಯಿಗಳೂ ಇದ್ದಾರೆ ಎಂಬುದು ತಿಳಿಯುತ್ತದೆ. 'ಧರ್ಮ ನಿರಪೇಕ್ಷ' ಎಂಬ ಪರಿಕಲ್ಪನೆಗೆ ಶ್ರೀಧರರು ಎಂದೆಂದೂ ಮಾದರಿಯಾಗಿಯೇ, ವಿಶೇಷವಾಗಿಯೇ ಇದ್ದಾರೆ.



ಇಸ್ರೋ ಕಂಪನಿಯ ಸಿಇಓ – ಕೆ. ಶಿವನ್

ಶ್ರೀರಾಮ ಕಥಾಸಾರ

# ಸ್ವಯಂಪ್ರಭೆಯ ದರ್ಶನ

ಲೇ: ಬಸ್ತಿ ಸದಾನಂದ ಪೈ, ಸಾಗರ

ಸುಗ್ರೀವನಿಂದ ಆಜ್ಞಾಪಿಸಲ್ಪಟ್ಟ ಕಪಿನಾಯಕರು, ತಮ್ಮ ತಮ್ಮ ಸೇನೆಯೊಂದಿಗೆ ಮಿಡತೆಗಳಂತೆ ಎಲ್ಲಾ ದಿಕ್ಕುಗಳಲ್ಲಿ ಆವರಿಸಿಕೊಂಡು ಪ್ರಯಾಣ ಮಾಡುತ್ತಾರೆ. ಭೂಮಂಡಲದ ವಿಚಾರವನ್ನು ಕಪಿಗಳಿಗೆ ಹೇಳಿದ್ದನ್ನು ಕೇಳಿ ನಿನಗೆ ಇದೆಲ್ಲಾ ಹೇಗೆ ತಿಳಿಯಿತು? ಎಂದು ರಾಮನು ವಿಚಾರಿಸುತ್ತಾನೆ. ಸುಗ್ರೀವನು ದುಂದುಭಿ ಎಂಬ ರಾಕ್ಷಸನಿಗೂ, ವಾಲಿಗೂ ಆದ ಯುದ್ಧ, ವಾಲಿ ದುಂದುಭಿಯನ್ನು ಹುಡುಕಿ ಬಿಲದೊಳಗೆ ಸೇರಿದ್ದು, ವರ್ಷಕಾಲ ಬಿಲದ ಬಾಗಿಲಲ್ಲಿ ಅವನ ಬರುವಿಕೆಗಾಗಿ ಕಾದು, ಬಿಲದಿಂದ ರಕ್ತ ಪ್ರವಾಹ ಹೊರಗೆ ಬಂದುದನ್ನು ಕಂಡು ಶೋಕತಪ್ತನಾದದ್ದು, ವಾಲಿಯೇ ಖಂಡಿತವಾಗಿ ಹತನಾದನೆಂದು ಭಾವಿಸಿದ್ದು ಎಲ್ಲವನ್ನೂ ವಿಸ್ತಾರವಾಗಿ ಹೇಳುತ್ತಾನೆ. ವಾಲಿಯನ್ನು ಕೊಂದ ರಾಕ್ಷಸನು ಬಿಲದಿಂದ ಹೊರಗೆ ಬಾರದೇ ಅಲ್ಲಿಯೇ ಸಾಯಲಿ ಎಂಬ ಉದ್ದೇಶದಿಂದ ಬಾಗಿಲಿಗೆ ದೊಡ್ಡ ಬಂಡೆಯನ್ನು ಅಡ್ಡವಿಟ್ಟೆ. ಅಲ್ಲಿಂದ ಕಿಷ್ಕಿಂದೆಗೆ ಬಂದು ಎಲ್ಲರಿಗೂ ವಿಷಯ ತಿಳಿಸಿದೆ. ನಂತರ ನನಗೆ ರುಮೆ ತಾರೆಯರೊಡನೆ ರಾಜ್ಯವು ಪ್ರಾಪ್ತವಾಯಿತು ಎನ್ನುತ್ತಾನೆ.

ಸ್ವಲ್ಪ ಕಾಲಾನಂತರ ವಾಲಿ ದಾನವನನ್ನು ಕೊಂದು ಬಂಡೆಯನ್ನು ಸರಿಸಿ ಕಿಷ್ಕಿಂಧೆಗೆ ಬರುತ್ತಾನೆ. ನಾನು ಭಯದಿಂದಲೂ ಗೌರವದಿಂದಲೂ ರಾಜ್ಯವನ್ನು ಬಿಟ್ಟುಕೊಟ್ಟು ನನಗೆ ಉಂಟಾದ ಅನುಮಾನದ ವಿಚಾರ ತಿಳಿಸಿದೆನು. ಆಗ ವಾಲಿ ನನ್ನನ್ನು ಕೊಲ್ಲಬೇಕೆಂದು ಓಡಿಹೋಗುತ್ತಿದ್ದ ನನ್ನನ್ನು ಬೆನ್ನಟ್ಟಿ ಬಂದನು ಆಗ ನಾನು ಇಡೀ ಭೂ ಮಂಡಲವನ್ನು ಸುತ್ತಾಡಿದೆನು. ನಾನು ಹೋದಲ್ಲೆಲ್ಲಾ ನನ್ನನ್ನು ಅಟ್ಟಿಸಿಕೊಂಡು ಬರುತ್ತಲೇ ಇದ್ದನು. ಆಗ ಮಾತಂಗ ಋಷಿಯಿಂದ ವಾಲಿಗೆ ಶಾಪ ಬಂದಿರುವುದು ನನಪಿಗೆ ಬಂದು ಋಷಿಯ ಶಾಪದ ಭಯದಿಂದ ವಾಲಿ ಇಲ್ಲಿಗೆ ಪ್ರವೇಶಿಸಲಿಲ್ಲ. ಹೀಗೆ ನಾನು ಭೂಮಂಡಲವನ್ನೆಲ್ಲಾ ಸುತ್ತಿದೆನೆಂದು ತಿಳಿಸುತ್ತಾನೆ.

ಕಪಿ ನಾಯಕರೆಲ್ಲ ವೇಗದಿಂದ ಹೋಗಿ ತಮಗೆ ನಿಗದಿ ಮಾಡಿದ ದಿಕ್ಕುಗಳಲ್ಲಿ ಅಂಗುಲ ಅಂಗುಲವನ್ನೂ ಬಿಡದೆ ಸೀತೆಯನ್ನು ಹುಡುಕುತ್ತಾರೆ. ನದಿ, ಪರ್ವತ, ಗುಹೆ, ಕಾಡುಗಳನ್ನು, ದಟ್ಟಾರಣ್ಯಗಳನ್ನೂ ಗವಿಗಳನ್ನೂ ಋಷ್ಯಾಶ್ರಮಗಳನ್ನೂ ಹುಡುಕುತ್ತಾರೆ. ಎಲ್ಲಿಯೂ ಸೀತೆಯನ್ನು ಕಾಣದೇ ದಕ್ಷಿಣ ದಿಕ್ಕಿಗೆ ಹೋದವರನ್ನು ಹೊರತುಪಡಿಸಿ ಉಳಿದವರು ಬಂದು ಸುಗ್ರೀವನಿಗೆ ತಾವು ಹುಡುಕಿದ ಪ್ರದೇಶಗಳ ವಿವರ ತಿಳಿಸಿ ಸೀತೆಯು ಎಲ್ಲಿಯೂ ಕಾಣಲಿಲ್ಲವೆಂಬುದನ್ನು ತಿಳಿಸುತ್ತಾರೆ. ಯಾವ ದಿಕ್ಕಿನಲ್ಲಿ ಸೀತೆ ಹೋಗಿರುವಳೋ ಆ ದಿಕ್ಕಿಗೆ ವಾಯು ಕುಮಾರನಾದ ಹನುಮಂತನು ಹೋಗಿರುವನು. ಅವನು ಖಂಡಿತವಾಗಿ ಸೀತೆಯನ್ನು ಕಾಣುವನು ಎನ್ನುತ್ತಾನೆ.

ಹನುಮಂತನು ತಾರ ಅಂಗದರೊಡಗೂಡಿ ದಕ್ಷಿಣದಿಕ್ಕುಗಳಲ್ಲಿ ಸೀತೆಯನ್ನು ಹುಡುಕುತ್ತಾನೆ. ಗಿರಿ ಕಾನನ ನದಿ ಗುಹೆಗಳನ್ನು ಹುಡುಕುತ್ತಾರೆ. ಎಲ್ಲಿಯೂ ಸೀತೆ ಕಾಣಿಸುವುದಿಲ್ಲ. ಹುಡುಕುತ್ತಾ ಹುಡುಕುತ್ತಾ ಓರ್ವ ಮಹರ್ಷಿಯಿಂದ ಶಾಪಗ್ರಸ್ತವಾಗಿದ್ದ ಒಂದು ವನ ಪ್ರದೇಶಕ್ಕೆ ಹೋಗುತ್ತಾರೆ. ಅಲ್ಲಿ ಗಡ್ಡೆ ಗೆಣಸುಗಳಾಗಲೀ, ಹೊಳೆ, ನೀರು ಕೂಡ ಇರುವುದಿಲ್ಲ. ಕಪಿಗಳೆಲ್ಲರೂ ಸೀತೆಯನ್ನು ಹುಡುಕಿ ಎಲ್ಲಿಯೂ ಕಾಣದೇ ಒಟ್ಟುಗೂಡಿ ಖಿನ್ನರಾಗಿ ಒಂದು ಮರದ ಬುಡದಲ್ಲಿ ವಿಶ್ರಾಂತಿಗಾಗಿ ಕುಳಿತುಕೊಳ್ಳುತ್ತಾರೆ.

ಯುವರಾಜನಾದ ಅಂಗದನು ಕಪಿ ವೀರರಿಗೆ ಪುನಃ ಗಿರಿ ಕಾನನಗಳಲ್ಲಿ, ಬೆಟ್ಟ ಗುಡ್ಡಗಳಲ್ಲಿ ಹುಡುಕುವಂತೆ ತಿಳಿಸುತ್ತಾನೆ. ರಾಜನಾದ ಸುಗ್ರೀವನು ಕೋಪಿಷ್ಠನು. ಆತನಿಗೂ ರಾಮನಿಗೂ ನಾವೂ ಭಯಪಡತಕ್ಕದ್ದು ಎನ್ನುತ್ತಾನೆ. ಪುನಃ ಕಪಿಗಳೆಲ್ಲರೂ ಬಳಲಿ ಆಯಾಸವಾದರೂ ವಿಂದ್ಯಾರಣ್ಯದಿಂದ ಹುಡುಕಲು ಪ್ರಾರಂಭಿಸುತ್ತಾರೆ. ಹನುಮಂತನು ತಾರ ಅಂಗದರೊಡನೆ ದುರ್ಗಮವಾದ ಗುಹೆಗಳನ್ನೆಲ್ಲಾ ಹುಡುಕುತ್ತಾನೆ. ಎಲ್ಲರೂ ಬಾಯಾರಿಕೆಯಿಂದ ಬಳಲುತ್ತಿದ್ದು ಎಲ್ಲಿಯೂ ನೀರು ಕಾಣಿಸುವುದಿಲ್ಲ. ಹೀಗೆ ಹುಡುಕುತ್ತಾ ಬರುವಾಗ ವಿಶಾಲವಾದ ಒಂದು ಬಿಲವನ್ನು ಕಾಣುತ್ತಾರೆ. ಅಲ್ಲಿ ನೀರಿನಿಂದ ತೋಯ್ದ ಪಕ್ಷಿಗಳನ್ನು ಗಮನಿಸುತ್ತಾರೆ. ಎಲ್ಲರೂ ಆ ಬಿಲದ ಬಳಿಗೆ ಬಂದು ಸೇರುತ್ತಾರೆ. ಆ ಬಿಲದಿಂದ ಸಿಂಹಗಳೂ ಮೃಗ ಪಕ್ಷಿಗಳೂ ಹೊರಗೆ ಬರುವುದನ್ನು ನೋಡುತ್ತಾರೆ. ಅಲ್ಲಿ ನೀರಿನಿಂದ ಕೂಡಿದ ಬಾವಿಯೋ ಕೊಳವೋ ಇರಬೇಕೆಂದು ನಿಶ್ಚಯಿಸಿ ಎಲ್ಲರೂ ಬಿಲದೊಳಗೆ ಹೋಗುತ್ತಾರೆ. ಪ್ರಕಾಶಮಯವಾದ ಆ ಬಿಲದೊಳಗೆ ಸುವರ್ಣಮಯವಾದ ವೃಕ್ಷಗಳನ್ನೂ ಹೊಂಬಣ್ಣದ ಪದ್ಮಗಳಿಂದಲೂ, ಸ್ವರ್ಣಮಯವಾದ ಮೀನುಗಳಿಂದಲೂ ಕೂಡಿದ ಸರೋವರವನ್ನು ಕಾಣುತ್ತಾರೆ.

ಅಲ್ಲೆ ಸ್ವಲ್ಪ ದೂರದಲ್ಲಿ ನಾರು ಮಡಿ ಕೃಷ್ಣಜಿನ ಉಟ್ಟು ತನ್ನ ತೇಜಸ್ಸಿನಿಂದ ಬೆಳಗುತ್ತಿದ್ದ ತಾಪಸ್ಸಿಯನ್ನು ಕಾಣುತ್ತಾರೆ. ನೀನು ಯಾರು? ಈ ಬಿಲವು ಯಾರದು? ಎಂದು ಹನುಮಂತನು ವಿಚಾರಿಸುತ್ತಾನೆ. ಇಲ್ಲಿರುವ ಮನೆಗಳು, ರತ್ನಾಭರಣಗಳು, ಮುತ್ತು ರತ್ನಗಳು ಯಾರವು? ಎಂದು ಪ್ರಶ್ನಿಸುತ್ತಾನೆ.

ನಾವು ಹಸಿವು ಬಾಯಾರಿಕೆಗಳಿಂದ ದುಃಖಿತರಾಗಿ ಅಂಧಕಾರಯುತವಾಗಿದ್ದು ಈ ಬಿಲವನ್ನು ಥಟ್ಟನೆ ಪ್ರವೇಶಿಸಿದೆವು ಎಂದು ತಾವೂ ಬಂದ ಉದ್ದಿಶ್ಯವನ್ನು ತಿಳಿಸುತ್ತಾನೆ.

ದಾನವ ಶ್ರೇಷ್ಠನೂ, ಮಾಯಾವಿಯೂ ಅದ ಮಯನೆಂಬುವವನು ಈ ಭವನವನ್ನು ನಿರ್ಮಿಸಿದವನು. ಅವನು ಶಿಲ್ಪ ಶಾಸ್ತ್ರವೆಲ್ಲವೂ ತನ್ನ ಸ್ವತ್ತಾಗಬೇಕೆಂದು ಒಂದು ಸಾವಿರ ವರ್ಷ ತಪಸ್ಸನ್ನು ಮಾಡಿ ಬ್ರಹ್ಮನಿಂದ ವರ ಪಡೆದನು. ಮಾಯೆಯಿಂದ

ಇದನ್ನೆಲ್ಲ ನಿರ್ಮಿಸಿದನು. ಅಪ್ಸರೆಯಾದ ಹೇಮ ಎಂಬವಳಲ್ಲಿ ಅನುರಕ್ತನಾಗಿದ್ದನು. ಇಂದ್ರನು ವಜ್ರಾಯುಧದಿಂದ ಹೊಡೆದು ಅವನನ್ನು ಗೆದ್ದನು. ಆಗ ಬ್ರಹ್ಮನು ಸುವರ್ಣಮಯವಾದ ಈ ಅರಮನೆಯನ್ನು ಹೇಮೆಗೆ ಕೊಟ್ಟನು ಇದನ್ನು ನಾನು ಕಾಪಾಡಿಕೊಂಡಿರುವೆನು. ನೀವು ಯಾಕಾಗಿ ಕಾಡುಗಳನ್ನು ಸುತ್ತುತ್ತಿದ್ದೀರಿ? ಎಂದು ಪ್ರಶ್ನಿಸುತ್ತಾಳೆ.

ನಾನು ಮೇರುಸಾವರ್ಣಿಗೆ ಆಕೆಯಲ್ಲಿ ಹುಟ್ಟಿದ ಮಗಳು ಹೆಸರು " ಸ್ವಯಂಪ್ರಭೆ " ಎನ್ನುತ್ತಾಳೆ.

ಹನುಮಂತನು ರಾಮನ ವಿಷಯವನ್ನೂ, ಸೀತಾಪಹಾರದ ವಿಚಾರವನ್ನೂ ತಿಳಿಸಿ ಸೀತೆಯನ್ನು ಹುಡುಕುತ್ತಾ ಬಂದಿದ್ದೇವೆ. ಎಲ್ಲಿಯೂ ಸೀತೆ ಸಿಗದೆ ಬಳಲಿ ಬೆಂಡಾಗಿ ಹಸಿವು ನೀರಡಿಕೆಗಳಿಂದ ಕಂಗೆಟ್ಟು ಕುಳಿತಿದ್ದೆವು. ಬಿಲದಿಂದ ನೀರು ತೊಟ್ಟಿಕ್ಕುತ್ತಾ ಬರುವ ಪಕ್ಷಿಗಳನ್ನು ಕಂಡು ಇಲ್ಲಿ ನೀರಿರುವುದನ್ನು ಖಚಿತಪಡಿಸಿಕೊಂಡು ಬಿಲವನ್ನು ಹೊಕ್ಕೆವು. ನೀನು ನಮ್ಮನ್ನು ಕಾಪಾಡಿದ್ದಕ್ಕಾಗಿ ಏನು ಪ್ರತ್ಯುಪಕಾರ ಮಾಡಬೇಕೆಂದು ತಿಳಿಸು, ನಾವು ಸಿದ್ಧರಿದ್ದೇವೆ ಎನ್ನುತ್ತಾನೆ.

ನನಗೆ ಯಾರಿಂದಲೂ ಯಾವ ರೀತಿಯ ನೆರವೂ ಬೇಕಾಗಿಲ್ಲ ಎಂದು ತಿಳಿಸುತ್ತಾಳೆ. ವಾನರ ವೀರರು ತಮಗೆ ಸುಗ್ರೀವನು ಕೊಟ್ಟ ಕಾಲಾವಕಾಶ ಮುಗಿದಿದೆ. ಇನ್ನೂ ಸೀತೆಯ ವಿಚಾರ ತಿಳಿದುಬಂದಿಲ್ಲ. ನಾವು ಇಲ್ಲಿಂದ ಹೊರಗೆ ಹೋಗಬೇಕು. ಸುಗ್ರೀವನಿಂದ ನಮ್ಮನ್ನು ರಕ್ಷಿಸುವವಳಾಗು ಎಂದು ವಿನಂತಿಸಿಕೊಳ್ಳುತ್ತಾರೆ.

ಈ ಗುಹೆಯನ್ನು ಪ್ರವೇಶಿಸಿದವರು ಜೀವದಿಂದ ಹಿಂತಿರುಗುವುದು ಕಷ್ಟಸಾಧ್ಯ. ಆದರೆ ರಾಮನ ಕೆಲಸಕ್ಕಾಗಿ ಬಂದ ನಿಮ್ಮನ್ನು ನನ್ನ ತಪಸ್ಸಿನ ಬಲದಿಂದ ಹೊರಗೆ ಕಳಿಸುತ್ತೇನೆ. ನೀವೆಲ್ಲರೂ ಕಣ್ಣು ಮುಚ್ಚಿಕೊಳ್ಳಿ ಎನ್ನುತ್ತಾಳೆ. ಬಿಟ್ಟ ಕಣ್ಣುಗಳಿಂದ ಯಾರೂ ಹೊರಗೆ ಹೋಗಲು ಸಾಧ್ಯವಿಲ್ಲ ಎಂದು ಎಚ್ಚರಿಸುತ್ತಾಳೆ. ಕಪಿಗಳೆಲ್ಲರೂ ಬೆರಳಿನಿಂದ ದೃಷ್ಟಿಯನ್ನು ಮರೆಮಾಡಿಕೊಳ್ಳುತ್ತಾರೆ. ಆಕೆ ನಿಮಿಷ ಮಾತ್ರದಲ್ಲಿ ಅವರನ್ನು ಬಿಲದಿಂದ ದಾಟಿಸುತ್ತಾಳೆ ಹೊರಗೆ ಬಂದವರಿಗೆ ಆ ಪ್ರದೇಶದ ಪರಿಚಯ ಮಾಡಿ ತಾನು ಮನೆಗೆ ಹಿಂತಿರುಗುತ್ತಾಳೆ.

ನಾವು ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾಗ ಆಕಸ್ಮಾತ್ ಆಗುವ ತಪ್ಪುಗಳನ್ನು ಸಂಬಂಧಿಸಿದವರಿಗೆ ಸತ್ಯವಾಗಿ ವಿವರಿಸಿದರೆ ಅವರು ನಮ್ಮನ್ನು ಕ್ಷಮಿಸುತ್ತಾರೆ. ತಪ್ಪುಗಳು ಅವರಿಗೆ ಕಿರುಕುಳ ಕೊಡಲು ಮಾಡಿದ್ದಲ್ಲ ಎಂಬುದನ್ನು ನಿರೂಪಿಸುವುದು ಬಹು ಮುಖ್ಯ. ಆಗ ಎಂತಹ ವಿಪತ್ತಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದರೂ ರಕ್ಷಣೆಗೆ ಮುಂದಾಗುತ್ತಾರೆ ಎಂಬುದು ಸ್ವಯಂ ಪ್ರಭೆಯ ಪ್ರಕರಣದಿಂದ ಮನದಟ್ಟಾಗುತ್ತದೆ.

---

ಸಂಪ್ರದಾಯ

# ಮದುವೆ ಮಾಡಿ ಮನೆಯನ್ನು ಕಟ್ಟಬಾರದೇ?

–ಜಿ. ವಿ. ಶರ್ಮಾಪಂಡಿತ್

ಮದುವೆ ಮಾಡುವುದನ್ನು ಮನೆಕಟ್ಟುವುದನ್ನು ಒಂದೇ ವರ್ಷದಲ್ಲಿ ಮಾಡಬಾರದೆಂದು ಹಿರಿಯರು ಹೇಳುತ್ತಾರೆ. ಅದರಲ್ಲೂ ಮೊದಲು ಮದುವೆಯನ್ನು ಮಾಡಿ ತದನಂತರ ಮನೆಯನ್ನು ಕಟ್ಟಬಾರದು ಎಂದು ಶಾಸನ ಪೂರ್ವಕವಾಗಿ ಹೇಳುತ್ತಾರೆ. ಆದರೇ ಮನೆಯನ್ನು ಕಟ್ಟಿದ ನಂತರ ಮದುವೆ ಮಾಡಲಿಕ್ಕೆ ಅಭ್ಯಂತರವಿಲ್ಲ.

**ಹೀಗೆ ಹೇಳುವುದರಲ್ಲಿ ಮರ್ಮವೇನು?**

ಸಿರಿತನವಿರಲಿ ಬಡತನವಿರಲಿ ಗೃಹಸ್ಥನಾದವನಿಗೆ ಸ್ವಂತಮನೆ ಎಂಬುವುದು ಇರಲೇ ಬೇಕೆಂದು ಹಿರಿಯರು ಹೇಳುತ್ತಾರೆ. ಯಾಕೆಂದರೇ ಬಾಡಿಗೆ ಮನೆ ಅಥವಾ ಪರಮನೆಯಲ್ಲಿ ಪ್ರಾಣ ಬಿಡಬಾರದೆಂದು ಧರ್ಮ ಶಾಸ್ತ್ರಗಳು ತಿಳಿಸುತ್ತವೆ. ಮನೆ ಎಂದರೆ ಏಳಂತಸ್ಥಿನ ಮಹಡಿಯಲ್ಲ ಗುಡಿಸಲು ಮನೆಯಾದರೂ ಚಿಂತೆಇಲ್ಲ; ಸ್ವಂತಮನೆಯನ್ನು ಇರಬೇಕೆಂದು ಹಿರಿಯರ ಹಿತಮಾತು.

ಮನೆ ಇದ್ದರೇ ಮಡದಿ ಇಂದ ಸುಖ ಪಡೆಯಬಹುದು. ಮಂಚ ಇಲ್ಲದಿದ್ದರೂ ಚಾಪೆಯ ಮೇಲೆ ಮಡದಿ ಜೊತೆಯಲ್ಲಿ ನಿದ್ರಿಸಬಹುದು. ಛತ್ರದಲ್ಲಿದ್ದು ಕೊಂಡು ಮದುವೆ ಮಾಡಿಕೊಂಡರೇ ಫಲವಿಲ್ಲ; ಫಲಿತವು ಇಲ್ಲ. ಮನೆಯ ಹೆಂಗಸರ ಮೇಲೆ ಹತ್ತು ಜನರ ಕಣ್ಣು ಬೀಳುತ್ತವೆ. ಮನೆಯ ಮಡದಿಗೆ ತೊಂದರೆಯಾಗುತ್ತದೆ. ಇದರಿಂದ ಮದುವೆಗಿಂತಲೂ ಮನೆಯೇ ಮುಖ್ಯ.

ಮದುವೆ ಮಾಡಿದ ನಂತರ ಮನೆಯನ್ನು ಕಟ್ಟಬಾರದೆಂದು ಹೇಳುವುದಕ್ಕೆ ಒಂದು ಮುಖ್ಯ ಕಾರಣವೆಂದರೇ ಕೈಯಲ್ಲಿಯರುವಂಥಾ ಹಣವನ್ನು ಮದುವೆಗಾಗಿ ಖರ್ಚು ಮಾಡಿದ್ದರೇ ತದನಂತರ ಮನೆ ಕಟ್ಟುವುದಕ್ಕೆ ತೊಂದರೆಯಾಗುತ್ತದೆ. ಕೈ ತುಂಬಾ ಹಣವಿದ್ದರೇ ಹಿಂದೇ ಮುಂದೇ ಯೋಚಿಸಿದೇ ಬಂಧು ಜನರನ್ನು ಮೆಚ್ಚಿಸುವುದಕ್ಕಾಗಿ ಧಾರಾಳವಾಗಿ ಖರ್ಚುಮಾಡುತ್ತಾರೆ. ತದನಂತರ ಚಿಂತೆಗೆ ಬೀಳುತ್ತಾರೆ. ಎಷ್ಟು ಹಣವನ್ನಾದರೂ ಮದುವೆಗೆ ಖರ್ಚುಮಾಡಬಹುದು. ಜಾತ್ರೆ ಮಾಡಿದ ಹಾಗೇ ಅದ್ದೂರಿಯಿಂದ ಮಾಡಬಹುದು. ಅನಂತರ ನೋಡದ ಹಾಗೇ ಬಾಗಿಲು ಮುಚ್ಚಿಸಿಕೊಂಡು ಬಿಕ್ಕಿಸಿ ದುಃಖಿಸ ಬೇಕಾಗುತ್ತದೆ.

**ಹಿರಿಯರು ಹೇಳುವುದೇನೆಂದರೇ ಮೊದಲು ಮನೆಯನ್ನು ಕಟ್ಟಿ ಹಣ ಉಳಿದರೇ ಮದುವೆ ಮಾಡಬೇಕು ಎಂದು!**



ಓಲಾ ಕ್ಯಾಬ್ ಕಂಪನಿಯ ಸಿಇಓ – ಭವೀಶ್ ಅಗರವಾಲ್

ಮದುವೆಯನ್ನು ಮರುವರ್ಷ ಮಾಡಿದರೂ ನಡೆಯುತ್ತದೆ. ಮನೆ ಎಂಬುವುದೊಂದಿದ್ದರೇ ಯಾರಾದರು ಸಾಲವನ್ನಾದರೂ ಕೊಡುತ್ತಾರೆ. ಸಹಾಯ ಮಾಡುತ್ತಾರೆ. ಮನೆಯನ್ನು ನೋಡಿಯಾದರು ಮಗಳನ್ನು ಕೊಡುತ್ತಾರೆ. ಮನೆ ಇಲ್ಲದವನಿಗೆ ಯಾರು ಮಗಳನ್ನು ಕೊಡುವುದಿಲ್ಲ. ಅಲೆಮಾರಿನ ಜನರೆಂದು ಅಪಹಾಸ್ಯಮಾಡುತ್ತಾರೆ.

**ಮನೆಯನ್ನು ಕಟ್ಟಿದ ನಂತರವೇ**

**ಮದುವೆಯನ್ನು ಮಾಡಬೇಕು....**

# ಪರಮೇಶ್ವರನ ಇಪ್ಪತ್ತೈದು ಲೀಲೆಗಳು

**14 ಜಲಂಧರ ಸಂಹಾರ ಲೀಲೆಯ ಮತ್ತೊಂದು ಬಗೆ**

ಒಮ್ಮೆ ಶಿವನನ್ನು ಕುರಿತು ದೇವೇಂದ್ರನು– ದೇವಾ ನನ್ನನ್ನು ಸ್ವರ್ಗಾಧಿಪತಿಯನ್ನಾಗಿ ಮಾಡಿದೆ, ಅಮರನನ್ನಾಗಿ ಮಾಡಿದೆ. ಆದರೆ ನನ್ನ ತೋಳತಿಂಡಿ ಬಹಳವಾಗಿದೆ ಅದಕ್ಕಾಗಿ ನನಗೊಬ್ಬ ವೈರಿಯನ್ನು ಕರುಣಿಸೆಂದು ಕೇಳಿದನು. ಶಿವನು ಬೇಡವೆಂದರೂ ಕೇಳಲಿಲ್ಲ. ತನಗೊಬ್ಬ ವೈರಿಯು ಬೇಕೆಬೇಕೆಂದನು. ಶಿವನು ತನ್ನ ಫಾಲನೇತ್ರದಿಂದ ಹೊರಟ ಒಂದು ಕಿಡಿಯನ್ನು ಹೊರಹಾಕಿ ಸಮುದ್ರಕ್ಕೆ ಎಸೆದನು. ನಿನ್ನ ವೈರಿಯು ಸಮುದ್ರದಲ್ಲಿ ಬೆಳೆಯುತ್ತಿರುವೆನೆಂದು ಹೇಳಿ ಕಳುಹಿಸಿದನು. ಬ್ರಹ್ಮನು ಆ ಕೂಸಿಗೆ ಆಶೀರ್ವದಿಸಲು ಬಂದಾಗ ಆ ಕೂಸು ಬ್ರಹ್ಮನ ಗಡ್ಡವನ್ನು ಜಗ್ಗಿದಂತೆ ಅದರ ಅಳುಕಿಗೆ ಬ್ರಹ್ಮನ ಕಣ್ಣೀರು ಆ ಕೂಸಿನ ಮೇಲೆ ಉದುರಿದವು. ಆದ್ದರಿಂದ ಅವನಿಗೆ ಜಲಂಧರ ಎಂಬ ಹೆಸರಾಯಿತು.

**ಮಹಾಕ್ಷತ್ರಿಯ**

# ಭಾರ್ಗವೋಪದೇಶ

**ಲೇ: ದೇವುಡು**

ಚ್ಯವನಮಹರ್ಷಿಯ ಅಪಾರ ಜ್ಞಾನಶಾಸ್ತ್ರವನ್ನೂ ಅನುಭವವನ್ನೂ ಕೇಳಿ ಎಲ್ಲರೂ ಮುಗ್ಧರಾಗಿದ್ದಾರೆ. ಜ್ಞಾನವಿಜ್ಞಾನಸಂಪನ್ನರಾದ ಆತನನ್ನು ಎಲ್ಲರೂ 'ಭಗವಾನರು' ಎಂದು ಗೌರವದಿಂದ ಸಂಬೋಧಿಸುತ್ತಾರೆ. ರಾಜಪುರೋಹಿತನಾದಿಯಾಗಿ ಅರಮನೆಯ ವಿದ್ವದ್ಗಣವೆಲ್ಲ ದಿನವೂ ಬಂದು ಆತನ ಧರ್ಮಬ್ರಹ್ಮಪ್ರವಚನವನ್ನು ಕೇಳಿ ಆಶ್ಚರ್ಯಮಗ್ನರಾಗಿರುತ್ತಾರೆ. ಆತನ ವಾಚೋವೈಖರಿಯಿರಲಿ, ಆ ಪ್ರವಚನವನ್ನು ಆಲಿಸುವವರ ಮನಸ್ಸಿನಲ್ಲಿ ಮೂಡುವ ಪ್ರಶ್ನೆಗಳು, ಮುಂಗಾರು ಮಳೆಯಲ್ಲಿ ನೆನೆದು ನೆಲದಿಂದ ಎದ್ದ ಬಿಸಿಯು ಅದೇ ಮಳೆಯಿಂದ ಇಂಗುವಂತೆ, ಹುಟ್ಟುಹುಟ್ಟುತ್ತಿದ್ದ ಹಾಗೆಯೇ ಅಲ್ಲಿಯೇ ಸಮಾಧಾನವನ್ನು ಹೊಂದುತ್ತವೆ.

ಆರ್ಯಾವರ್ತದ ಋಷೀಂದ್ರರೆಲ್ಲರೂ ಪ್ರತಿಷ್ಠಾನ ನಗರಕ್ಕೆ ಭಗವಾನರ ದರ್ಶನಕ್ಕೆ ಬರುತ್ತಿದ್ದಾರೆ. ಚಕ್ರವರ್ತಿಗೆ ಅದೇ ಒಂದು ಸಂತೋಷ. ತಾನು ಸರ್ವಸ್ವವನ್ನು ಕೊಡುತ್ತೇನೆಂದರೂ ಯಾರು ನಗರಪ್ರವೇಶಮಾಡಲೂ ಹಿಂದೆಗೆಯುವರೋ ಅವರೆಲ್ಲಾ ಇಂದು ಭಗವಾನರ ದರ್ಶನಕ್ಕೆಂದು ಬಂದು ಒಂದೆರಡು ದಿನ ನಿಂತಿದ್ದು, ಅವರ ದರ್ಶನಸಲ್ಲಾಪಾದಿಗಳಿಂದಲೂ, ಅರಸನ ಆತಿಥ್ಯದಿಂದಲೂ ತೃಪ್ತರಾಗಿ ಅರಸನನ್ನು ಆಶೀರ್ವಾದ ಮಾಡಿ ಹೋಗುತ್ತಿದ್ದಾರೆ.

ಭಗವಾನರಿಗಾಗಿ ಅರಮನೆಯ ನಂದನೋದ್ಯಾನದಲ್ಲಿ ಒಂದು ವಿಶಾಲವಾದ ಪರ್ಣಕುಟಿಯು ಸಿದ್ಧವಾಗಿದೆ. ಅದರ ಮಗ್ಗುಲಲ್ಲಿಯೇ ಅತಿಥಿಗೃಹ. ಭಗವಾನರು ಬೆಳಗಿನ ಹೊತ್ತು ಋಷೀಂದ್ರರು, ತಪೋಧನರು, ವಿದ್ವಾಂಸರು ಇವರಿಗೆ ದರ್ಶನ ಕೊಡುತ್ತಾರೆ. ಮಧ್ಯಾಹ್ನದ ಇಳಿಹೊತ್ತಿನಲ್ಲಿ ಚಕ್ರವರ್ತಿಯು ಬಂದು ಒಂದು ಜಾವದ ಹೊತ್ತು ಧರ್ಮಬ್ರಹ್ಮವಿಚಾರಗಳಲ್ಲಿ ಮಗ್ನನಾಗಿದ್ದು, ಬೆಳಗಿನಿಂದ ರಾಜಕಾರ್ಯಗಳಲ್ಲಿದ್ದು ಪಟ್ಟಿದ್ದ ಆಯಾಸವನ್ನೆಲ್ಲಾ ಪರಿಹಾರ ಮಾಡಿಕೊಳ್ಳುತ್ತಾನೆ. ಅರಸನಿಗೆ ಭಗವಾನರಲ್ಲಿ ಎರಡು ಮೂರು ವಿಚಾರಗಳನ್ನು ಕೇಳಬೇಕೆಂದು ಬಲು ಆಸೆ. ಆದರೆ ಆತನು ಬರುವ ವೇಳೆಗೆ ಭಗವಾನರೇ ಸ್ವಯಂ ಯಾವುದಾದರೂ ಒಂದು ವಿಚಾರ ಆರಂಭಿಸುತ್ತಾರೆ. ಅದನ್ನು ಕೇಳುಕೇಳುತ್ತ ಆನಂದಪರವಶನಾಗಿ ಅರಸನು ತನ್ನ ಪ್ರಶ್ನೆಗಳನ್ನು ಮರುದಿನ ಕೇಳುವುದು ಎಂದುಕೊಳ್ಳುತ್ತಾನೆ. ಹೀಗೆಯೇ ದಿನವೂ ಆಗುತ್ತಿದೆ.

ಒಂದು ದಿನ ಭಗವಾನರು ಸುಖಾಸೀನರಾಗಿ ಅಂತರ್ದೃಷ್ಟಿಗಳಾಗಿ ಆತ್ಮಾರಾಮರಾಗಿದ್ದಾರೆ. ಚಕ್ರವರ್ತಿಯು ರಾಜದೂತನನ್ನು ಹಿಂದಿಟ್ಟುಕೊಂಡು ಏಕಾಂಗಿಯಾಗಿ ಬಂದು ಪರ್ಣಕುಟಿಯ ಬಾಗಿಲಲ್ಲಿ ನಿಂತಿದ್ದಾನೆ. ಅವರಿರುವ ಸ್ಥಿತಿಯನ್ನು ಕಂಡು ಅವರ ಆ ಸಮಾಧಿಯನ್ನು ಭಂಗಪಡಿಸಲು ಇಷ್ಟವಿಲ್ಲದೆ ದೂರದಿಂದಲೇ ನಮಸ್ಕಾರ ಮಾಡಿ ಕೊಂಚ ಮರೆಯಾಗಿ ತೃಣಾಸನದಲ್ಲಿ ಕುಳಿತಿದ್ದಾನೆ. ಸಭಾಕಾಲವು ಇನ್ನೂ ಬಂದಿಲ್ಲ.



ಅಮುಲ್ ಕಂಪನಿಯ ಸಿಇಓ – ಆರ್. ಎಸ್. ಸೊಢಿ

ಅಷ್ಟು ಹೊತ್ತಾಯಿತು. ಸೂರ್ಯನು ಪಶ್ಚಿಮದಲ್ಲಿ ಇಳಿಯುತ್ತಾ ಪ್ರಸರಿಸಿದ್ದ ಕಿರಣಗಳನ್ನ ಉಪಸಂಹಾರ ಮಾಡುವ ಕಾಲವಾಯಿತು. ಬಿಸಿಲು ತಂಪಿತು. ಇನ್ನಷ್ಟು ಹೊತ್ತಾದರೆ ಋತ್ವಿಕ್ಪುರೋಹಿತರು ಭಗವಾನರನ್ನು ಧರ್ಮಸಭೆಗೆ ಕರೆದುಕೊಂಡು ಹೋಗಲು ಬರುತ್ತಾರೆ. ಅವರೂ ಬಹಿರ್ಮುಖಿಗಳಾದರು. ಶುದ್ಧಾಚಮನಮಾಡಿ ಚಕ್ರವರ್ತಿಯನ್ನು ಸಮ್ಮುಖಕ್ಕೆ ಕರೆದರು. ಆತನೂ ಬಂದು ನಮಸ್ಕಾರ ಮಾಡಿ ಕುಳಿತನು. ಬ್ರಹ್ಮರ್ಷಿಗಳು ತಾವೇ ಮಾತನಾಡುತ್ತಾ "ಏನು ಮಹಾರಾಜ, ನೀನೇ ಬರಬೇಕಾಗಿತ್ತೇ? ಈ ದಿನ, ನಿನ್ನನ್ನು ಕೇಳಿ, ನಿನ್ನ ಮನಸ್ಸಿನಲ್ಲಿರುವ ವಿಚಾರವನ್ನೇ ಆರಂಭಿಸಬೇಕು ಎಂದಿದ್ದೇನೆ, ಸರಿ ತಾನೇ?" ಎಂದು ಕೇಳಿದರು.

ಅರಸನು ವಿನಯದಿಂದ "ಅದು ನನ್ನ ಭಾಗ್ಯ!" ಎಂದನು.

"ಇನ್ನು ನಾನು ಇಲ್ಲಿಂದ ಹೊರಡುವ ಕಾಲ ಬಂದಿದೆ. ಬ್ರಾಹ್ಮಣನು ಭೋಗಗಳಿಗೆ ವಶನಾಗಬಾರದು. ಭೋಗಲಾಲಸೆಯು ಇಂದ್ರಿಯಗಳಲ್ಲಿ ಬೇರೂರಿದರೆ, ಅವು ದುಷ್ಟಾಶ್ವಗಳಂತೆ ಕೈಮೀರುವುವು. ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಳ್ಳದೆ ಅವುಗಳ ಅಧೀನನಾದವನ ತೇಜಸ್ಸು ಹಸಿಯ ಮಡಕೆಯಲ್ಲಿಟ್ಟ ನೀರಿನಂತೆ ಜಾರಿಹೋಗುವುದು. ಹಾಗೆ ಆಗಬಾರದು. ಬ್ರಾಹ್ಮಣನು ಯಾವಾಗಲೂ ಆತ್ಮತೇಜಸ್ಸನ್ನು ವಿವೃದ್ಧಿ ಮಾಡುತ್ತಿರಬೇಕು."

"ಇಲ್ಲಿಯೂ ತಾವು ತಪೋವನದಲ್ಲಿರುವಂತೆಯೇ ಇರುವಿರಲ್ಲವೇ?"

"ಆದರೂ ಇದು ನಿನ್ನ ಕ್ಷೇತ್ರ. ನೀನು ಸತ್ತ್ವಗುಣಸಂಪನ್ನನಾದರೂ ನಿನ್ನ ಅಧಿಷ್ಠಾನಾದಿಗಳೆಲ್ಲವೂ ರಜೋಗುಣದವು. ಅದರಿಂದ ಇಲ್ಲಿ ಇರುವವರೆಗೂ ಸತ್ತ್ವಲಕ್ಷಣವಾದ ಶಾಂತಿದಾಂತಿಗಳು ಒಂದು ಪಾದ ಹಿಂದಿರುವುವು. ನಿನ್ನ ಇಷ್ಟದಂತೆ ಇಲ್ಲಿದ್ದು ಧರ್ಮಕಥಾಲಾಪ ನಡೆಸಿಯಾಯಿತು. ಇನ್ನು ಬರುವ ಪ್ರತಿಪದೆಯ ಸ್ಥಾಲೀಪಾಕವಾದ ಮೇಲೆ ಇಲ್ಲಿಂದ ಹೊರಡುವೆನು".

ಅರಸನಿಗೆ ದೇಹದಲ್ಲಿದ್ದ ದೊಡ್ಡ ಜೀವವು ಮೇಲಕ್ಕೆ ಎದ್ದಂತಾಯಿತು. ಕಣ್ಣಲ್ಲಿ ಒಳಗಿನ ನೋವೆಲ್ಲ ಪ್ರತಿಫಲಿಸಿ ಎರಡು ತೊಟ್ಟಿನ ರೂಪವಾಗಿ ಉಕ್ಕಿತು. ಅದನ್ನು ಕಂಡು ಮಹರ್ಷಿಯು ನಕ್ಕು, "ಕೊನೆಯವರೆಗೂ ಇಲ್ಲಿರುವುದು ಸಾಧ್ಯವಿಲ್ಲವೆಂದು ಬಲ್ಲ ನೀನೂ ಹೀಗೆ ವ್ಯಥೆಪಟ್ಟರೆ, ಅದು ಅಭಿಮಾನದ ಗುರುತಾಯಿತೇ ಹೊರತು ವಿವೇಕದ ಲಕ್ಷಣವಾಗಲಿಲ್ಲ. ಜಗತ್ತೆಂದರೆ ಓಡುವ ನದಿಯೆಂಬುದನ್ನು ನಾವು ಮರೆಯಬಾರದು. ಬಂದುದನ್ನೆಲ್ಲ ಕಳುಹಿಸಿಕೊಟ್ಟು ಬರುವುದನ್ನು ಪ್ರತೀಕ್ಷಿಸುತ್ತಾ ನಿಂತಿರುವುದೇ ವಿವೇಕ. ಜಗತ್ತು ಗಳಿಗೆಗೊಂದು ಬಣ್ಣವಾಗದಿದ್ದರೆ ಇನ್ನು ಅದಕ್ಕೆ ಜಗತ್ತು ಎನ್ನುವದೇನು? ಈ ಜಗತ್ ಎನ್ನುವ ಅರ್ಥವೇ ಅದಲ್ಲವೇ? ಉದುರುವ ಎಲೆಗಳನ್ನು ಕಂಡವರಿಗೆ ಅದರ ಹಿಂದಿರುವ ಮರವನ್ನು ಕಂಡರೆ ಎಲೆ ಉದುರಿತು ಎಂಬ ದುಃಖವಿಲ್ಲದೆ ಹೊಸ ಎಲೆಯು ಹುಟ್ಟುವುದು ಎಂಬ ನಿರೀಕ್ಷೆಯು ಬಂದು ಆನಂದವಾಗುವುದು. ನಿನ್ನ ಅಭಿಮಾನವನ್ನು ಕಂಡು ನಾನು ಬಲ್ಲೆನೆಂಬ ಅಹಂಭಾವಕ್ಕೆ ವಶನಾಗದಿರುವುದರಿಂದ ನೀನು ವಜ್ರದ ವರ್ತಿಕೊಟ್ಟ ವಜ್ರದಂತಿರುವೆ. ಅರಸಾ, ನಿನಗೆ ನಾನೊಂದು ವರವನ್ನು ಕೊಡುವೆನು. ಕೇಳು" ಎಂದನು.

ಅರಸನು ವಿನಯದಿಂದ ಎದ್ದು ನಿಂತು "ಭಗವನ್, ತಾವು ಗಿಡದ ಸಾಮ್ಯವನ್ನು ತೋರಿಸಿ ಬಂದ ದುಃಖವೆಲ್ಲ ಆನಂದವಾಗುವ ವಿಧಾನವನ್ನು ಉಪದೇಶಿಸಿದಿರಿ, ಇದಕ್ಕಿಂತಲೂ ಇನ್ನು ಯಾವ ವರವನ್ನು ಕೇಳಲಿ? ಆದರೂ ತಮ್ಮ ಅಪ್ಪಣೆಯೆಂದು ಕೇಳುವೆನು. ನನಗೆ ಯಾವಾಗಲೂ ಧರ್ಮದಲ್ಲಿ ಬುದ್ಧಿಯು ಸ್ಥಿರವಾಗಿರಲಿ" ಎಂದು ನಮಸ್ಕಾರ ಮಾಡಿದನು.

ಚ್ಯವನ ಮಹರ್ಷಿಯು ಸಂತುಷ್ಟನಾಗಿ "ಹಾಗೆಯೇ ಆಗಲಿ, ನಿನ್ನ ಬುದ್ಧಿಗೆ ಯಾವಾಗಲೂ ಧರ್ಮವು ಗೋಚರವಾಗುತ್ತಿರಲಿ. ಆದರೆ ಇತರರಿಗೆ ಹೇಳಬೇಕಾಗಿ ಬಂದಲ್ಲಿ, ಅವರು ಕೇಳಿದಾಗ ಸಕಾರಣವಾಗಿ ಅವರ ಮನಸ್ಸಿಗೊಪ್ಪುವಂತೆ ವಿಶದವಾಗಿ ಹೇಳಬೇಕು. ಇಲ್ಲವಾದರೆ ಅದನ್ನು ಧರ್ಮದೇವನು ಒಪ್ಪುವುದಿಲ್ಲ. ಅದು ನೆನಪಿರಲಿ" ಎಂದು ಅನುಗ್ರಹ ಮಾಡಿದನು. ಆ ವೇಳೆಗೆ ವಾಲಗದ ಸದ್ದು ಆಗಿ, ಅದು ಮೃದಂಗದ ನಾದದೊಡನೆ ಸೇರಿ ಪರ್ಣಶಾಲೆಯವರೆಗೂ ಬಂದು ಬ್ರಹ್ಮರ್ಷಿ ರಾಜರ್ಷಿಗಳಿಬ್ಬರನ್ನೂ ಎಚ್ಚರಗೊಳಿಸಿತು. ಮಂಗಳವಾದ್ಯಶ್ರವಣದಿಂದ ಜಾಗ್ರತವಾದ ಲೋಕವಾಸನೆಯನ್ನು ಅನುಸರಿಸಿ ಅವರು ಮುಂದಿನ ಕಾರ್ಯಕ್ಕೆ ಸಿದ್ಧವಾದರು. ಋತ್ವಿಕ್ಪುರೋಹಿತರು ಬಂದು ಯಥಾವಿಹಿತವಾಗಿ ದರ್ಶನಮಾಡಿ ಇಬ್ಬರನ್ನೂ ಸಭಾಮಂಟಪಕ್ಕೆ ಕರೆದುಕೊಂಡು ಹೋದರು.

ಸಭೆಯ ಮಧ್ಯದಲ್ಲಿ ವಿರಚಿತವಾಗಿದ್ದ ಕಮಲಾಸನದ ಮೇಲೆ ಪದ್ಮಾಸನದಲ್ಲಿ ಚ್ಯವನ ಭಗವಾನರು ಕುಳಿತರು. ಅವರ ಬಲಗಡೆ ಬೆಳ್ಳಿಯ ಭದ್ರಾಸನದಲ್ಲಿ ವೀರಾಸನದಲ್ಲಿ ಅರಸನು ಕುಳಿತನು. ಮಂತ್ರಿ ಪುರೋಹಿತರಾದಿಯಾಗಿ ಸಭಿಕರೆಲ್ಲರೂ ಎಂದಿನಂತೆ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ರಾಜಸ್ತ್ರೀಯರೂ ರಾಜಾಧಿಕಾರಿಗಳೂ ಧರಿಸಿರುವ ಜೀವರತ್ನಾಭರಣಗಳ ಕಾಂತಿಯು ಇಳಿಯುತ್ತಿರುವ ಸೂರ್ಯನ ಬಿಸಿಲನ್ನು ಹಿಡಿದು ತಂದು ಶೇಖರಿಸಿಟ್ಟಿರುವ ಕಿರಣಕೆಂಡಗಳೋ ಎಂಬಂತೆ ಪ್ರಜ್ವಲಿಸುತ್ತಿದ್ದವು. ಸಭಿಕರು ಧರಿಸಿರುವ ಪುಷ್ಪಮಾಲೆಗಳ ಸುಗಂಧವು ಸಜ್ಜನರ ಮನಸ್ಸಿನ ನಿರ್ವಿಷಯಾನಂದದಂತೆ ಸರ್ವವ್ಯಾಪಿಯಾಗಿ ಎಲ್ಲರನ್ನೂ ದೇವಲೋಕಕ್ಕೆ ಕರೆದೊಯ್ಯುವ ವಿಮಾನವೋ ಎಂಬಂತೆ ಮೇಲಕ್ಕೆ ಚಿಮ್ಮುತ್ತಿತ್ತು. ತೇಜಸ್ವಿಯಾದ ಅರಸನ ಪ್ರಭಾವದ ಮುಂದೆ ನಿಷ್ಪ್ರಭರಾಗಿ ವಿನೀತರಾಗಿ ನ್ಯಾಯಬದ್ಧರಾಗುವ ಸಾಹಸಿಗಳಂತೆ ಆಚಾರದಂತೆ ಇಟ್ಟಿದ ತುಪ್ಪದ ದೀಪಗಳು ರತ್ನಾಭರಣಗಳ ಕಾಂತಿಗೆ ಸೋತಂತೆ ಮಂಕಾಗಿ ಪಂಜರಬದ್ಧವಾಗಿ ಉರಿಯುತ್ತಿದ್ದವು. ಧೂಪದಾನಿಗಳು ನಡೆಯಲಿರುವ ಧರ್ಮಕಥಾ ಶ್ರವಣದಿಂದ ತೃಪ್ತವಾಗಿವೆಯೋ ಎಂಬಂತೆ ಸಂತೋಷದಿಂದ ಧೂಪಮೇಘಗಳನ್ನು ಸೃಜಿಸುತ್ತಿದ್ದವು. ಕೈವಾರಿಗಳು ತಮ್ಮ ದೃಢತಾರಸ್ವರದಿಂದ

ಸಭೆಯನ್ನು ಎಚ್ಚರಿಸಿದ ಮೇಲೆ ಬ್ರಹ್ಮರ್ಷಿಗಳ ಘಂಟಾನಾದದಂತಹ ಗಂಭೀರ ಮನೋಹರವಾದ ಕಂಠವು ಕೇಳಿಸಿತು. ಪ್ರವಚನವು ಆರಂಭಿಸಿತು.

ಭಗವಾನರು ಆರಂಭಿಸಿದರು: "ನಾವು ಇಲ್ಲಿಂದ ಹೊರಡುವ ಕಾಲವು ಸನ್ನಿಹಿತವಾಗಿದೆ. ಆದ್ದರಿಂದ ನಾವಾಗಿ ಹೇಳುವುದನ್ನು ಕಡಿಮೆ ಮಾಡಿ, ಇತರರ ಮನಸ್ಸಿನಲ್ಲಿ ಇರಬಹುದಾದ ಸಂದೇಹಗಳನ್ನು ವಿಮರ್ಶಿಸಿ ಸಾಧ್ಯವಾದರೆ ನಿವಾರಿಸಲು ಪ್ರಯತ್ನಿಸೋಣ ಎಂದುಕೊಂಡಿದ್ದೇನೆ. ಆದ್ದರಿಂದ ಈ ಸಭೆಯಲ್ಲಿ ಯಾರಾದರೂ ಮುಂದೆ ಬಂದು ತಮ್ಮ ತಮ್ಮ ಸಂದೇಹಗಳನ್ನು ಕೇಳಬಹುದು."

ರಾಜನು ಪುರೋಹಿತನ ಮುಖವನ್ನು ನೋಡಿದನು. ಆತನು ಅದನ್ನು ಅರ್ಥಮಾಡಿಕೊಂಡು ಎದ್ದು ನಿಂತನು. ಆಡಂಬರವಿಲ್ಲದ ಸುಲಭವಾದ ಹಗುರವಾದ ಆತನ ಉಡುಪಿನಂತೆಯೇ ಆತನೂ ಸರಳವಾಗಿ ಸಹಜವಾಗಿ ಪ್ರಶ್ನೆ ಮಾಡಿದನು: "ಭಗವಾನ್, ಧರ್ಮಕ್ಕೆ ಜಯವಾಗಲಿ, ಕೇಳುವ ನಮಗೂ ಹೇಳುವ ತಮಗೂ ಈ ವಿಷಯವನ್ನು ಆಲಿಸುವ ಈ ಸಭೆಯವರಿಗೂ ಮಂಗಳವಾಗಲಿ. ತಾವು ಹೇಳುವುದು ನಮಗೆ ಅರ್ಥವಾಗಲಿ. ದೇವ, ಸಂದೇಹಗಳು ಬರುವುದೇಕೆ?"

ಭಗವಾನರು ನಕ್ಕರು: "ಬ್ರಹ್ಮನ್, ನೀರಿನ ಸ್ವಭಾವ ಅಲೆಯುತ್ತಿರುವುದು. ನೀರು ಅಲೆಗಳನ್ನು ಸೃಷ್ಟಿಸಬೇಕೆಂದು ಪ್ರಯತ್ನಮಾಡಿ ಅಲೆಗಳನ್ನು ಎಸೆಯುವುದಿಲ್ಲ. ಅದರ ಚಂಚಲಸ್ವಭಾವವೇ ಅಲೆಗಳಾಗಿ ತೋರುತ್ತದೆ. ನೀರಿನ ಮೇಲ್ಮೈಯೆಲ್ಲಾ ಅಲೆಯೇ! ಆದರೆ ಕೆಳಗಿಳಿದು ನೋಡಿದರೆ ಒಂದೆರಡು ಮುಟ್ಟು ಮುಳುಗಿ ನೋಡಿದರೆ ಅಲ್ಲಿ ನೀರು ಘನವಾಗಿ ಒಂದೇ ಮುದ್ದೆಯಾಗಿ ನಿಂತಿರುವಂತೆ ತೋರುತ್ತದೆ. ಜಲಚರಗಳ ಸಂಚಾರದಿಂದ ಅಲ್ಲಾಡಿದಂತೆ ಕಂಡರೂ ನಿಶ್ಚಲವಾಗಿರುತ್ತದೆ. ಹಾಗೆ ಜ್ಞಾನವು ಪ್ರಜ್ಞಾನವಾಗಿ ಘನವಾಗಿ ಸ್ಥಿರವಾಗುವವರೆಗೂ ಸಂದೇಹಗಳು ಬಂದೇ ಬರುತ್ತಿರುವುವು. ಜ್ಞಾನ ಪ್ರಜ್ಞಾನವಾಗಿ ಘನವಾಗುವುದು ಎಂದರೇನು ಎನ್ನುವಿರೇನೋ? ತನಗಿಂತ ದೊಡ್ಡದೊಂದು ವಸ್ತುವಿದೆ. ಅದು ತನ್ನ ಒಳಗೂ ಹೊರಗೂ ತುಂಬಿದೆ. ಅದು ಮಡುವಿನಂತೆ ಇದ್ದರೆ ತಾನು. 'ನಾನು' ಎನ್ನುವುದು ಅದರಲ್ಲಿ ಒಂದು ಮಡಕೆಯಂತೆ. ನೀರಿನಲ್ಲಿ ಮುಳುಗಿದ ಮಡಕೆಯಲ್ಲಿರುವ ನೀರೂ ಅದರ ಹೊರಗಿರುವ ನೀರೂ ಏಕರಸವೆಂಬ ಅರಿವೇ ಜ್ಞಾನ. ಆ ಅರಿವು ಬಲಿತು ನೀರನ್ನು ತುಂಬಿಕೊಂಡಿರುವ ಮಡಕೆಯೂ ಅದರಲ್ಲಿರುವ ನೀರೂ ಬೇರೆಯೆಂಬುದನ್ನು ತಿಳಿದುಕೊಳ್ಳುವುದು ವಿಜ್ಞಾನ. ಬಾಯಲ್ಲಿ ಒತ್ತರಿಸಿಕೊಂಡಿರುವ ತಾಂಬುಲವು ತನ್ನ ಇರುವಿಕೆಯನ್ನು ಮರೆಯಲು ಎಡೆಯನ್ನೇ ಕೊಡದೆ ಇರುವಂತೆ ವಿಜ್ಞಾನವು ಮರೆಯದೆ ಅರಿವೇ ಆಗಿ ಘಟವು ಬೇರೆ, ಅದರಲ್ಲಿರುವ ಚೇತನವೇ ಬೇರೆ, ಎಂಬ ನಿಶ್ಚಯಜ್ಞಾನವು ಸತತವಾಗಿ ಉರಿಯುತ್ತಿರುವ ದೀಪದ ಬೆಳಕಿನಂತೆ ಅವಕಾಶವಿದ್ದೆಡೆಯಲ್ಲೆಲ್ಲಾ ತುಂಬಿರುವುದೇ ಪ್ರಜ್ಞಾನ. ಅದನ್ನು ಮರೆಯದೆ ವ್ಯವಹಾರ ಮಾಡುತ್ತಿರುವುದೇ ಪ್ರಜ್ಞಾನಘನದಲ್ಲಿರುವುದು. ಅಂತಹ ಪ್ರಜ್ಞಾನ ಘನದಲ್ಲಿ ಪ್ರವೇಶವಾಗುವವರೆಗೂ ಸಂದೇಹಗಳು ಬಿಡುವುದಿಲ್ಲ. ತುಂಬಿದ ಕತ್ತಲಿನಲ್ಲಿ ಕಣ್ಣು ಕಾಣದೇ ಹೋದಾಗಲೂ ಸಂದೇಹಗಳಿಲ್ಲ: ನಡುಹಗಲಿನಲ್ಲಿ ಬೆಳಕು ತಾನೇ ತಾನಾಗಿರುವಾಗಲೂ ಸಂದೇಹವಿಲ್ಲ. ಬೆಳಕು–ಕತ್ತಲುಗಳು ಒಂದರಲ್ಲಿ ವ್ಯಾಪ್ತವಾದಾಗ, ಸಂದೇಹಗಳು. ಹಾವೋ ಹುಲ್ಲಿನ ಹರವಿಯೋ ಎಂದು ಸಂದೇಹಪಡುವುದು ಸಂಜೆಯ ಕಾಳವಳದಲ್ಲಿ ಮಾತ್ರ. ಹಾಗೆ ಅರಿವು ಬಂದು ಬಲಿತು ಹೆಪ್ಪುಗಟ್ಟಿ ಮುದ್ದೆಯಾಗುವವರೆಗೂ ಸಂದೇಹವು ತಪ್ಪುವುದಿಲ್ಲ. ಮನಸ್ಸಿನ ಅಪೂರ್ಣತೆಯೇ ಜ್ಞಾನದ ದೌರ್ಬಲ್ಯವೇ ಸಂದೇಹ. ಅಲ್ಲದೆ ಸಂದೇಹವು ಬಂದರೆ ಏಕೆ ಒದ್ದಾಡಬೇಕು? ಆ ಸಂದೇಹದ ಹಿಂದೆಯೇ ಸಿದ್ಧಾಂತವೂ ಇದ್ದೇ ಇರುತ್ತದೆ."

"ಹಾಗೆಂದರೆ ಅರ್ಥವಾಗಲಿಲ್ಲ. ಭಗವಾನರು ದಯಮಾಡಿ ಅದನ್ನು ಇನ್ನೂ ವಿಶದವಾಗಿ ಹೇಳಬೇಕು."

"ಆಗಲಿ, ಮನಸ್ಸಿಗೆ ಅರಿವು ಮರೆವು ಎಂದು ಎರಡು ಮುಖ. ನಕ್ಷತ್ರಗಳಲ್ಲಿ ಕೆಲವು ಕೆಂಪು ನೀಲಿ ಬೆಳಕುಗಳನ್ನು ಚೆಲ್ಲುತ್ತ, ಒಂದು ಘಳಿಗೆ ಹಾಗೆ, ಒಂದು ಘಳಿಗೆ ಹೀಗೆ ಕಾಣುವಂತೆ, ಮನಸ್ಸೂ ಈ ಎರಡು ಮುಖಗಳಲ್ಲಿ ಒಂದೊಂದನ್ನು ತೋರುತ್ತಿರುತ್ತದೆ. ಅರಿವಿನ ಮುಖ ಕಂಡಾಗ ಮರೆತೆವು ಎಂದುಕೊಳ್ಳುತ್ತೇವೆ. ಮರೆವು ಅರಿವುಗಳು ಒಂದರಲ್ಲಿ ಒಂದು ವ್ಯಾಪಿಸಿದಾಗ, ಮರೆವೋ ಅರಿವೋ ಎಂಬ ನಿಶ್ಚಯವಿಲ್ಲದಾಗ ಸಂದೇಹ. ನೀರಲ್ಲಿ ಬಿದ್ದ ಪ್ರಾಣಿಯು ಸುಮ್ಮನೆ ಕೈಕಾಲು ಬಡಿಯುತ್ತಿದ್ದರೆ ತಪ್ಪದೆ ದಡಕ್ಕೆ ಬಂದು ಸೇರಿಕೊಳ್ಳುವಂತೆ. ತಲೆದೋರಿದ ಸಂದೇಹವನ್ನು ಮಥಿಸುತ್ತಿದ್ದರೆ, ಮರೆವಿನ ಮುಖವು ತಿರುಗಿ ಅರಿವಿನ ಮುಖವು ಕಾಣಿಸುವುದು".

ಮುಂದುವರೆಯುವುದು.........

## ಆಮಶಂಕೆ

* ದಿನವೂ ಖರ್ಜೂರವನ್ನು ನಿಯಮಿತ ರೂಪದಲ್ಲಿ ಸೇವಿಸುತ್ತಿದ್ದರೆ ಆಮಶಂಕೆ ಆಗುವ ಸಂಭವವೇ ಇರುವುದಿಲ್ಲ.
* ಒಂದು ಟೀ ಸ್ಪೂನಿನಷ್ಟು ಮೆಂತ್ಯವನ್ನು ಗಟ್ಟಿ ಮೊಸರಿನಲ್ಲಿ ಬೆರೆಸಿ, ಬಾಯಿಗೆ ಹಾಕಿಕೊಂಡು ದಿನವೂ ಒಂದೆರಡು ಬಾರಿ, ಒಂದೆರಡು ದಿನ ನುಂಗುತ್ತಿದ್ದರೆ ಆಮಶಂಕೆ ನಿಲ್ಲುತ್ತದೆ.
* ಮೆಂತ್ಯವನ್ನು ಕುಟ್ಟಿ ಪುಡಿಮಾಡಿ, ಒಂದು ಟೀ ಸ್ಪೂನಿನಷ್ಟು ಪುಡಿಯನ್ನು ಒಂದು ಬಟ್ಟಲು ಮಜ್ಜಿಗೆಯಲ್ಲಿ ಬೆರೆಸಿ ದಿನವೂ ಎರಡೆರಡು ಸಲ ಸೇವಿಸುತ್ತಿದ್ದರೆ ಆಮಶಂಕೆ ನಿಲ್ಲುತ್ತದೆ.



ಓ ಎನ್ ಜಿ ಸಿ ಕಂಪನಿಯ ಸಿಇಓ – ಶಶಿ ಶಂಕರ

ಆಪ್ತಮಾತುಗಳು....

## ಗುರಿಯ ಕುರಿತಾಗಿ ನಿಜವಾದ ಆಸಕ್ತಿಯಿರಬೇಕು

ಬಿ.ಎನ್. ರಮೇಶ ಬೊಂಗಾಳೆ

ಮನಸ್ಸಿನಲ್ಲಿ ಗುರಿಯ ಕುರಿತಾಗಿ ನಿಜವಾದ ಆಸಕ್ತಿಯಿರಿಸಿಕೊಂಡಿದ್ದರೆ ಸಫಲತೆ ಹೊಂದುವುದು ಖಂಡಿತ ಸಾಧ್ಯವಾಗುತ್ತದೆ. ಗುರಿಯ ಗರಿ ಮುಡಿಗೇರಿಸಿಕೊಳ್ಳುವ ಹಂಬಲ ಯಾರಿಗೆ ತಾನೆ ಇರುವುದಿಲ್ಲ? ಅದು ಸಾಧ್ಯವಾಗಬೇಕೆಂದರೆ ನಾವು ಮಾಡುವ ಕೆಲಸವು ಪ್ರಾಮಾಣಿಕ ಹಾಗೂ ಆದರ್ಶದಿಂದೊಡಗೂಡಿರಬೇಕಾಗುತ್ತದೆ. ಗುರಿಯ ಮಾರ್ಗದಲ್ಲಿ ನಡೆವಾಗ ಮನಸ್ಸನ್ನು ಚಂಚಲಗೊಳಿಸುವುದಾಗಲಿ, ಎರಡು–ತೊಡರುಗಳು ಎದುರಾದವೆಂದು ಮನಸ್ಸನ್ನು ಅಸ್ಥಿರಗೊಳಿಸಿ ಚಲನೆಯನ್ನು ಸ್ಥಗಿತಗೊಳಿಸುದಾಗಲಿ ಅಥವಾ ಸಲ್ಲದ ವಿಷಯಗಳೆಡೆ ಗಮನ ಹರಿಸಿ ಗುರಿಯನ್ನು ಸಡಿಲಗೊಳಿಸುವುದಾಗಲಿ ಮಾಡಬಾರದು.

ಸಣ್ಣ ಪ್ರಮಾಣದ ಕಾರ್ಯಾರಂಭವು ಬರಬರುತ್ತ ಹಿರಿದಾದ ಸಫಲತೆಗೆ ಮುನ್ನುಡಿ ಬರೆಯುತ್ತದೆಂದು ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಅಮೆರಿಕಾದ ಥಾಮಸ್ ಆಲ್ವಾ ಎಡಿಸನ್ ಗ್ರ್ಯಾಂಡ್ ಟ್ರಂಕ್ ರೈಲ್ವೇ ಸ್ಟೇಷನ್‌ನಲ್ಲಿ ಪತ್ರಿಕೆ ಮಾರುತ್ತಿದ್ದ. ಎಡಿಸನ್ ಆಗ ಕೇವಲ ಹದಿನೈದು ವರ್ಷ ಪ್ರಾಯದ ಬಾಲಕ. ಅಷ್ಟು ಚಿಕ್ಕ ಪ್ರಾಯದಲ್ಲಿಯೇ ಆತ ರಾಸಾಯನಶಾಸ್ತ್ರದ ಅಧ್ಯಯನವನ್ನು ಪ್ರಾರಂಭಿಸಿದ್ದ. ಎಲ್ಲ ಸ್ಪರ್ಧೆಗಳಲ್ಲೂ ಮೊದಲಿಗನಾಗಿ ಹೊರ ಹೊಮ್ಮುತ್ತಿದ್ದ. ಚಿಕ್ಕ ವಯಸ್ಸಿನಲ್ಲಿಯೇ ವಿಜ್ಞಾನ ಆತನಿಗೆ ಪ್ರಿಯವಾಗಿ ಬಿಟ್ಟಿತ್ತು. ಮುಂದೆ ಆತ ಏನೆಲ್ಲ ಸಾಧಿಸಿದ ಎನ್ನುವುದು ಜಗಜ್ಜಾಹೀರಾದ ವಿಷಯ.

ಆದರೆ ಆತನ ಸಫಲತೆಗೆ ಕಾರಣವೇನೆಂದು ಯಾರೋ ಅತನಲ್ಲಿ ಪ್ರಶ್ನಿಸಿದಾಗ ಎಡಿಸನ್ ಕೊಟ್ಟ ಉತ್ತರವಿಷ್ಟೇ–"ನಾನು ಯಾವುದೇ ಜಾದೂ ಮಡೊಲ್ಲ ಆದರೆ ನನ್ನ ಗಮನವೆಲ್ಲ ಕೇವಲ ನನ್ನ ಕೆಲಸದ ಮೇಲಿರುತ್ತದೆಯೆಂದು ಹೇಳಬಹುದು"

ಯಾವುದೇ ಕೆಲಸಕ್ಕೂ ಮೊದಲು ಅದರ ಬಗ್ಗೆ ಆಸಕ್ತಿ ಹೊಂದಿರಬೇಕಾದುದು ಮುಖ್ಯವೆನಿಸುತ್ತದೆ. ಅದು ದೃಢವಾಗಿದಷ್ಟು ಎತ್ತರಕ್ಕೇರುವ ಅವಕಾಶಗಳು ಮುಕ್ತವಾಗಿರುತ್ತವೆ. ಅಂತಹ ದೃಢವಾದ ಆಸಕ್ತಿ ಹಾಗೂ ಆ ಮುಖೇನ ಪ್ರಾಪ್ತವಾಗುವ ಅವಕಾಶಗಳು ಮುಂದೊಂದು ದಿನ ಸಾಧನೆಯ ಶಿಖರಕ್ಕೆ ಖಂಡಿತ ತಲುಪಿಸುತ್ತವೆ. ಆಸಕ್ತಿಯಿಲ್ಲದೆ ಓದಿಲ್ಲ, ಓದಿಲ್ಲದೆ ವಿದ್ಯೆಯಿಲ್ಲ, ವಿದ್ಯೆಯಿಲ್ಲದೆ ಬುದ್ಧಿಯಿಲ್ಲ, ಬುದ್ಧಿಯಿಲ್ಲದೆ ಬಹುತೇಕ ಬದುಕಿಲ್ಲ. ಬದುಕಿಲ್ಲದೆಯೇ ಬದುಕುವ ಬದುಕು ಬದುಕಲ್ಲ. ಆಸಕ್ತಿಯಿಲ್ಲದೆ ಯಾವ ಕೆಲಸ ಮಾಡಲೂ ಸಾಧ್ಯವಿಲ್ಲ. ಕೆಲಸವಿಲ್ಲದೆ ಮುನ್ನಡೆಯಿಲ್ಲ. ಮುನ್ನಡೆಯಿಲ್ಲದೆ ಗುರಿ ಮುಟ್ಟಲಾಗುವುದಿಲ್ಲ. ಗುರಿ ಮುಟ್ಟದ ಬದುಕು ಬದುಕಲ್ಲ. ಚುಕ್ಕಾಣಿಯಿಲ್ಲದ ನಾವೆ, ಸೂತ್ರವಿರದ ಪಟದಂತೆ ದಿಕ್ಕಾಪಾಲಷ್ಟೇ ಪ್ರಾಪ್ತಿ.

---

ಧರೆಗಿಳಿದ ದಿವ್ಯತೇಜ

## ಮಹಾ ಮಾತೆಯ ದರ್ಶನ

ಲೇ: ಲ. ನ. ಶಾಸ್ತ್ರೀ

ಒಂದು ದಿನ ಆಚಾರ್ಯರ ಪ್ರವಚನ ಸಾಗುತ್ತಿತ್ತು. ನಾಲ್ಕೈದು ಜನ ಬ್ರಾಹ್ಮಣರು – ಆ ಸೀಮೆಗೆ ಹೊಸಬರಂತೆ ಕಂಡವರು –ಬಂದು ಶಂಕರಾಚಾರ್ಯರಿಗೆ ಅಭಿವಾದನ ಮಾಡಿ ಕುಳಿತುಕೊಂಡರು. ಅವರನ್ನು ನೋಡಿದ ಶಂಕರರಿಗೆ ಅವರು ಕೇರಳದಿಂದ ಬಂದ ಯಾತ್ರಿಕರು ಎಂದು ಗೊತ್ತಾಗಿ ಹೋಯಿತು. ಪ್ರವಚನ ಮುಗಿದ ನಂತರ, ಅವರನ್ನು ಗುರುಗಳು ಸಮೀಪಕ್ಕೆ ಬರಮಾಡಿಕೊಂಡು ವಿಚಾರಿಸಿದರು. ಅವರು ಕೇರಳದವರೇ ಆಗಿದ್ದು, ತೀರ್ಥಯಾತ್ರೆಗಾಗಿ ಹೊರಟವರೆಂದೂ, ಶೃಂಗಗಿರಿಯಲ್ಲಿ ಯಾರೋ ದೊಡ್ಡ ಸಂನ್ಯಾಸಿ ಬಂದಿದ್ದಾರೆಂದು ತಿಳಿದು, ಅವರನ್ನು ಕಾಣಲು ಘಟ್ಟ ಹತ್ತಿ ಬಂದೆವೆಂದೂ ಹೇಳಿದರು. ಸದಾಶಿವ ಪರಮೇಶ್ವರರು ಅವರನ್ನು ವಿಶ್ವಾಸದಿಂದ ಮಾತನಾಡಿಸಿ, ಈ ಸಂನ್ಯಾಸಿ ಬೇರಾರೂ ಆಗಿರದೆ, ಹಿಂದೆ ಕಾಲಟಿಯಿಂದ ಹೊರಟ ಬಾಲ ಗುರು ಶಂಕರರೇ ಎಂದು ವಿವರಿಸಿದರು. ಆ ಯಾತ್ರಿಕರಿಗೆ ಪರಮಾಶ್ಚರ್ಯವಾಯಿತು. ಸುಮಾರು ಹದಿನೆಂಟು ವರ್ಷದ ಹಿಂದೆ, ಕಾಲಟಿಯ ಶಿವಗುರುವಿನ ಮಗು ಪುಟ್ಟಬಾಲಕ, ಜ್ಞಾನಾರ್ಜನೆಗಾಗಿ ಮನೆಬಿಟ್ಟು ಹೊರಟನೆಂದು ಅವರಿಗೆ ತಿಳಿದಿತ್ತು. ಈಗ ಆ ಶಂಕರನೇ ಶ್ರೀ ಶಂಕರಾಚಾರ್ಯರಾಗಿ ತಮ್ಮ ಮುಂದೆ ಕುಳಿತು ವೇದಾಂತ ಪ್ರವಚನ ಮಾಡುತ್ತಿದ್ದುದನ್ನು ನೋಡಿ ಅವರು ಹರ್ಷದಿಂದ, ಸಂಭ್ರಮದಿಂದ ಪುನಃ ಪುನಃ ಶಂಕರರಿಗೆ ನಮಸ್ಕಾರ ಮಾಡಿದರು.

"ಸ್ವಾಮಿ, ನಮ್ಮ ಸೀಮೆಯಲ್ಲಿ ವೇದ ಪ್ರಣೀತವಾಗಿರುವ ಕರ್ಮತ್ಯಾಗ ಮಾಡಿದ ಯತಿಗಳ ವಿಚಾರದಲ್ಲಿ ಅಷ್ಟೊಂದು ಗೌರವವಿಲ್ಲ. ತಾವೊಮ್ಮೆ ಅಲ್ಲಿಗೂ ದಯಮಾಡಿಸಿ ನಮ್ಮ ಪಂಡಿತ ವಿದ್ವಾಂಸರ ಸಂಶಯ ಅನುಮಾನಗಳನ್ನು ಪರಿಹರಿಸಬೇಕು" ಎಂದು ಕೋರಿಕೊಂಡರು. ಶಂಕರರು "ಅಸ್ತು, ಇಡೀ ಭರತ ವರ್ಷವೇ ನಮ್ಮ ಆಡುಂಬೊಲವಾಗಿದೆ. ನಾವು ಕೇರಳಕ್ಕೂ ಬರುತ್ತೇವೆ. ಅಲ್ಲಿ ಕಾಲಟಿಯಲ್ಲಿ ನಮ್ಮ ಪೂರ್ವಾಶ್ರಮದ ಮಾತೃಶ್ರೀಯವರು ಇದ್ದಾರೆ. ಅವರ ದರ್ಶನವನ್ನೂ ಮಾಡಬೇಕು" ಎಂದರು.

ಕೇರಳದ ಯಾತ್ರಿಕರು ಒಂದೆರಡು ದಿನಗಳಿದ್ದು ಹೊರಟುಹೋದರು. ಶಂಕರರಿಗೆ ಅವರು ಬಂದು ಹೋದಾಗಿನಿಂದಲೂ,



ಅಮೇಜಾನ್ ಕಂಪನಿಯ ಸಿಇಓ – ಜೆಫ್ ಬೇಜಾಜ್

ತಾಯಿಯನ್ನು ಹೋಗಿ ನೋಡಿ ಬರಬೇಕೆಂಬ ಅಪೇಕ್ಷೆ ಮೂಡಿ, ಬಲವಾಗುತ್ತ ಬಂತು. ಅವರು ಕೈಗೊಂಡಿದ್ದ ಗ್ರಂಥ ರಚನಾ ಕಾರ್ಯವು ಪೂರ್ಣವಾಗುವವರೆಗೆ ಅವರು ಶೃಂಗೇರಿಯನ್ನು ಬಿಡುವಂತಿರಲಿಲ್ಲ. ಆದ್ದರಿಂದ ಸದಾಶಿವ ಪರಮೇಶ್ವರರನ್ನು ಕರೆದು,

"ನಿಮ್ಮಲ್ಲಿ ಯಾರಾದರೂ ಒಬ್ಬರು ಕಾಲಟಿಗೆ ಹೋಗಿ ನಮ್ಮ ಮಾತೃಶ್ರೀಯವರನ್ನು ನೋಡಿಕೊಂಡು ಬರಬಲ್ಲಿರಾ? ಈಗೀಗ ನನಗೆ ಅಮ್ಮನ ಬಗ್ಗೆ ಏಕೋ ಯೋಚನೆ" ಎಂದರು.

ಸದಾಶಿವನು "ನಾನು ಹೋಗಿ ಬರುತ್ತೇನೆ ಗುರು, ಪರಮೇಶ್ವರ ಇಲ್ಲಿಯೇ ಇರಲಿ. ಬೇರೆ ಯಾರನ್ನಾದರೂ ಜೊತೆಗೆ ಕರೆದುಕೊಂಡು ನಾನು ನಾಳೆಯೇ ಹೊರಡುತ್ತೇನೆ" ಎಂದನು. ಆಚಾರ್ಯರಿಗೆ ಅದು ಒಪ್ಪಿತವಾಯಿತು.

"ಸದಾಶಿವ, ನಡೆದು ಹೋಗಬೇಡ. ನಮ್ಮಲ್ಲಿ ಇರುವ ಕುದುರೆಗಳನ್ನು ಪ್ರಯಾಣಕ್ಕೆ ಉಪಯೋಗಿಸಬಹುದು. ಕುದುರೆಯ ಮೇಲೆ ಕುಳಿತು ಸಾಗಿದರೆ ಪ್ರಯಾಣ ಅಷ್ಟು ಆಯಾಸವಾಗದು" ಎಂದರು.

" ಗುರು ತಮ್ಮೊಡನೆ ಪಾದಚಾರಿಯಾಗಿಯೇ ಈ ಪುಣ್ಯ ಭೂಮಿಯನ್ನು ಎರಡು ಸಲ ಸುತ್ತಿಲ್ಲವೇ? ನನಗೆಂತಹ ಆಯಾಸ ?" ಎಂದ ಸದಾಶಿವ.

"ಹಾಗಲ್ಲ ಸದಾಶಿವ, ನಮ್ಮ ನೆಂಟರಿಷ್ಟರನ್ನು ಕಾಣಬೇಕೆಂದಾಗ, ಎಷ್ಟು ಬೇಗ ನೋಡಿಯೇವು. ಮಾತನಾಡಿಯೇವು, ಎಂದು ಮನಸ್ಸು ತವಕ ಪಡುತ್ತಿರುತ್ತದೆ. ಸ್ವಲ್ಪ ದೂರವೂ ಅತಿ ದೂರ ಎಂಬಂತೆ ಭಾಸವಾಗುತ್ತದೆ. ಆದ್ದರಿಂದ ಅಶ್ವವನ್ನೇರಿ ಪ್ರಯಾಣ ಮಾಡೆಂದು ನಾನು ಹೇಳಿದ್ದು ಎಂದರು".

ಸದಾಶಿವ ಒಪ್ಪಿದನು. ಮಾರನೆಯ ಪ್ರಾತಃ ಕಾಲವೇ ಸದಾಶಿವನೂ, ವಾರಣಾಸಿಯ ಕೃಷ್ಣಮಿಶ್ರನೂ ಕಾಲಟಿಯತ್ತ ಹೊರಟರು.

ಗ್ರಂಥ ರಚನಾ ಕಾರ್ಯ ಮುಂದುವರಿದು, ಸುರೇಶ್ವರರು ನೈಷ್ಕರ್ಮ ಸಿದ್ಧಿಯನ್ನು ಪೂರೈಸಿದ್ದರು. ಸನಂದನರು ಸೂತ್ರಭಾಷ್ಯ ವ್ಯಾಖ್ಯಾನವನ್ನು ಪೂರೈಸಿದ್ದರು. ಆಚಾರ್ಯರು ಅಪರೋಕ್ಷಾನುಭೂತಿ, ಆತ್ಮ ಬೋಧ, ಉಪದೇಶಸಾಹಸ್ರೀ, ಶತಶ್ಲೋಕೀ ಮುಂತಾದ ಪ್ರಕರಣ ಗ್ರಂಥಗಳನ್ನು ರಚಿಸಿದ್ದರು. ಆಚಾರ್ಯರು ಶೃಂಗಗಿರಿಯ ಪರ್ವತಾರಣ್ಯಗಳಲ್ಲಿ ಆಗಾಗ ಸಂಚರಿಸುತ್ತ ಸಮಾಧಿಸ್ಥರಾಗುತ್ತಿದ್ದು, ಅವರ ವದನಾರವಿಂದದಿಂದ ಅನೇಕ ಸ್ತೋತ್ರ ರತ್ನಗಳು ಮೂಡುತ್ತಿದ್ದವು. ಯಾವಾಗಲೂ ಅವರ ಬಳಿ ನಾಲ್ಕೈದು ಜನ ಶಿಷ್ಯರಿರುತ್ತಿದ್ದು, ಆಚಾರ್ಯರಿಗೆ ಬಾಹ್ಯ ಪ್ರಜ್ಞೆಯಿಲ್ಲ, ಅಂತರ್ಮುಖಿಯಾಗಿದ್ದಾರೆ, ಎಂಬುದು ಮನವರಿಕೆಯಾದಾಗ, ಆಚಾರ್ಯರು ಆ ಸ್ಥಿತಿಯಲ್ಲಿ ಉಲಿದುದೆಲ್ಲವನ್ನೂ ಅವರು ಬರೆದುಕೊಳ್ಳುತ್ತಿದ್ದರು.

ಹಾಗೆ ಮೂಡಿ ಬಂದ ಅದ್ವೈತ ಪಂಚರತ್ನ, ಅದ್ವೈತಾನುಭೂತಿ, ಜೀವನ್ಮುಕ್ತಾನಂದ ಲಹರೀ, ಧನ್ಯಾಷ್ಟಕ, ನಿರ್ವಾಣ ಮಂಜರೀ, ನಿರ್ವಾಣ ಷಟ್ಕ, ಪರಾಪೂಜಾ ಇವೇ ಮುಂತಾದುವನ್ನು ಶಿಷ್ಯರು ಬರೆದುಕೊಳ್ಳುತ್ತಿದ್ದರು ಮತ್ತು ಆಗಾಗ ಹಾಡಿಕೊಳ್ಳುತ್ತಿದ್ದರು.

ಶೃಂಗಗಿರಿಯಿಂದ ಹೊರಟಿದ್ದ ಸದಾಶಿವನೂ ಕೃಷ್ಣಮಿಶ್ರನೂ ತಿಂಗಳೊಂದರಲ್ಲಿ ಹಿಂದಿರುಗಿದರು. ಆಚಾರ್ಯರ ದರ್ಶನ ಮಾಡಿ, ಕಾಲಟಿಯ ವಿವರವನ್ನೆಲ್ಲಾ ಒಪ್ಪಿಸಿದರು.

ಸದಾಶಿವನನ್ನೂ, ಕೃಷ್ಣಮಿಶ್ರನನ್ನೂ ಕಂಡ ಆರ್ಯಾಂಬೆಯವರು ಆನಂದದಿಂದ ಮೈಮರೆತರೆಂದೂ, ಆಕೆ ತಾವೇ ಸ್ವತಃ ಇಬ್ಬರಿಗೂ ಅಡಿಗೆ ಮಾಡಿ ಊಣ ಬಡಿಸಿದರೆಂದೂ ಸದಾಶಿವ ಹೇಳಿದನು.

"ನಾನು ಕಾಲಟಿಯಿಂದ ಹೊರಟು ಇಲ್ಲಿಯವರೆಗೆ ನಡೆದುದನ್ನೆಲ್ಲಾ ಹತ್ತಾರು ಸಲ ಮಾತೃಶ್ರೀಯವರು ಕೇಳಿದರು. ಪುನಃ ಪುನಃ ಕೇಳಿದರು, ಮನೆಯಲ್ಲಿ ಇದ್ದ ಸೇವಕರು, ಪರಿಜನರನ್ನೆಲ್ಲಾ ಕುಳ್ಳಿರಿಸಿಕೊಂಡು, ಅವರಿಗೆಲ್ಲಾ ತಮ್ಮ ವಿಚಾರವನ್ನು ಹೇಳಿದರು. "ನಮ್ಮ ಶಂಕರ ಕುಟ್ಟಿ ಈಗ ತುಂಬಾ ದೊಡ್ಡವನಾಗಿದಾನಂತೆ, ತುಂಬಾ ಶಾಸ್ತ್ರ ಓದಿದಾನಂತೆ, ನೂರಾರು ಜನ ಶಿಷ್ಯರು ಇದ್ದಾರಂತೆ. ಈಗ ಇಲ್ಲಿಯೇ ಕರ್ನಾಟಕದ ಶೃಂಗಗಿರಿಗೆ ಬಂದಿದಾನಂತೆ. ನನ್ನ ಯೋಗ ಕ್ಷೇಮ ತಿಳಿದುಕೊಂಡು ಬರಲು ಈ ವತ್ಸರನ್ನು ಕಳಿಸಿದ್ದಾನೆ. ಅವನಿಗೆ ಅಮ್ಮ ಎಂದರೆ ಎಷ್ಟು ಪ್ರೀತಿ" ಎಂದು ಅವರಿಗೆಲ್ಲಾ ಹೇಳಿದರು. ಅವರ ಬಾಯಲ್ಲಿ ಸದಾ ನಿಮ್ಮ ಸ್ಮರಣೆಯೇ. ನಿಮಗಾಗಿ "ಇದೋ ಈ ಅವಲಕ್ಕಿ ಬೆಲ್ಲವನ್ನು ಕಳಿಸಿದ್ದಾರೆ" ಎಂದು ಹೇಳಿ ಸದಾಶಿವನು ಅಡಕೆಯ ಹಾಳೆಯಲ್ಲಿ ಕಟ್ಟಿದ ಪೊಟ್ಟಣವನ್ನು ಇತ್ತನು. ಆಚಾರ್ಯರು ಮಗುವಿನಂತೆ ಆ ಪೊಟ್ಟಣವನ್ನು ಬಿಚ್ಚಿ ಹಿಡಿ ಅವಲಕ್ಕಿಯನ್ನೂ, ಚೂರು ಬೆಲ್ಲವನ್ನೂ ಬಾಯಿಗೆ ಹಾಕಿಕೊಂಡರು!! ಆಹಾ, ಮಾತೃ ಹಸ್ತದ ಆ ಭಿಕ್ಷೆ ಎಷ್ಟು ರುಚಿ! ಮಾತೃ ಹಸ್ತೇನ ಭೋಜನಮ್. ಅದು ಅಮೃತಸದೃಶವಲ್ಲವೇ?

ಈ ದಿವ್ಯ ದೃಶ್ಯವನ್ನು ನೋಡುತ್ತಿದ್ದ ಸುರೇಶ್ವರಾದಿ ಯತಿಗಳು ಆನಂದಬಾಷ್ಪ ಸುರಿಸಿದರು.

ಪರಮೇಶ್ವರಾದಿ ಬ್ರಹ್ಮಚಾರಿಗಳು "ಆಚಾರ್ಯ ದೇವ, ನಮಗೂ ಸ್ವಲ್ಪ ಆ ಪ್ರಸಾದವನ್ನು ಅನುಗ್ರಹಿಸಬೇಕು" ಎಂದು ಕೋರಿಕೊಂಡರು ಆ ದಿನವೆಲ್ಲಾ ಶೃಂಗಗಿರಿಯ ಶಂಕರಧಾಮದಲ್ಲಿ ಆರ್ಯಾಂಬೆಯ ಗುಣಗಾನ! ಅವಲಕ್ಕಿ ಬೆಲ್ಲಗಳ ಸವಿಯ ವರ್ಣನೆ!

ಸದಾಶಿವನು ಹಿಂದಿರುಗಿ ಒಂದೆರಡು ತಿಂಗಳಾಗಿತ್ತು. ಆಚಾರ್ಯರು ತಾವು ಕಾಲಟಿಗೆ ಹೋಗಿ ಬರುವ ನಿರ್ಧಾರ ಕೈಗೊಂಡರು. ಶಿಷ್ಯರಲ್ಲಿ ತಮ್ಮ ಅಪೇಕ್ಷೆಯನ್ನು ಪ್ರಕಟಿಸಿದರು. ಸನಂದನರು ತಾವು ಸಹ ತಮ್ಮ ತಾಯಿಯ ದರ್ಶನಕ್ಕಾಗಿ ದ್ರಾವಿಡ ದೇಶಕ್ಕೆ ಹೋಗಿ ಬರಲು ಅಪ್ಪಣೆ ಬೇಡಿದರು! ಆಚಾರ್ಯರು ಈ ಕೋರಿಕೆಗೆ ಮೊದಲು ಒಪ್ಪಿಗೆ ಕೊಡಲಿಲ್ಲ. ಶಿಷ್ಯನು ಪದೇ ಪದೇ ಗೋಗರೆಯಲು "ಹೋಗಿ ಬಾ, ಆದರೆ ನಿನ್ನ ಯೋಗಕ್ಷೇಮದ ವಿಚಾರದಲ್ಲಿ ಎಚ್ಚರಿಕೆಯಿಂದಿರು" ಎಂದು ನುಡಿದರು.

ಶೃಂಗಗಿರಿಯಲ್ಲಿ ಸುರೇಶ್ವರರೂ, ಹಸ್ತಾಮಲಕರೂ, ತೋಟಕರೂ ಇತರ ಯತಿಗಳೂ ಇದ್ದು ಅಧ್ಯಾಪನ, ಪ್ರವಚನ, ಗ್ರಂಥ ರಚನಾ ಕಾರ್ಯ ಮಾಡಿತ್ತಿರಬೇಕೆಂದೂ, ಶಂಕರರು ಕಾಲಟಿಯ ಯಾತ್ರೆ ಮುಗಿಸಿ ಬಂದನಂತರ ಮುಂದಿನ ಕಾರ್ಯಕ್ರಮದ

ನಿರ್ಧಾರವೆಂದೂ, ನಿರ್ಣಯಿಸಲಾಯಿತು. ಶಂಕರರೊಡನೆ ಸದಾಶಿವ , ಪರಮೇಶ್ವರ, ಕೃಷ್ಣಮಿಶ್ರರಲ್ಲದೆ ಮತ್ತಿಬ್ಬರು ಬ್ರಹ್ಮಚಾರಿಗಳು ಹೋಗಬೇಕೆಂದೂ ನಿರ್ಧಾರವಾಯಿತು. ಹೊರಡುವ ಮುನ್ನ ಆಚಾರ್ಯರು ದೀರ್ಘ ತಪೋನಿರತರಾಗಿದ್ದ ದೇವೀ ಉಭಯ ಭಾರತಿಯವರನ್ನು ಸಂದರ್ಶಿಸಿ "ತಾಯಿ, ನಾನು ಕಾಲಟಿಯಲ್ಲಿರುವ ಮಾತೃಶ್ರೀಯವರ ದರ್ಶನಮಾಡಿ ಹಿಂದಿರುಗುತ್ತೇನೆ" ಎಂದು ಬಿನ್ನವಿಸಿಕೊಂಡರು. ಆಕೆ ಸದಾ ಅಂತರ್ಮುಖರಾಗಿಯೇ ಇರುತ್ತಿದ್ದುದರಿಂದ, ಏನೂ ಮಾತನಾಡಲಿಲ್ಲ. ಆಚಾರ್ಯರು ಶಿಷ್ಯರಿಗೂ, ಆಕೆಯ ಸೇವಕಿಯರಿಗೂ ಸೂಕ್ತವಾದ ಸೂಚನೆಗಳನ್ನಿತ್ತು, ಶೃಂಗಗಿರಿಯಿಂದ ಹೊರಟರು.

ಕಾಲಟಿಯ ಶ್ರೀ ಕೃಷ್ಣ ದೇವಾಲಯದಲ್ಲಿ ಪ್ರಾತಃಕಾಲದ ಪೂಜೆಯು ಬೆಳೆದು ಮಂಗಳಾರತಿಯಾಗುತ್ತಿತ್ತು. ಶಂಖ ಜಾಗಟೆಗಳ ಧ್ವನಿ ಮೊಳಗುತ್ತಿತ್ತು. ವೇದ ಮಂತ್ರೋದ್ಘೋಷವಾಗುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಶ್ರೀ ಶಂಕರಾಚಾರ್ಯರು ದೇವಾಲಯವನ್ನು ಪ್ರವೇಶಿಸಿದರು.

ತರುಣ ಸಂನ್ಯಾಸಿಯೂ ಆತನ ಹಿಂದೆ ಹಲವಾರು ಬ್ರಹ್ಮಚಾರಿಗಳೂ ಬಂದುದನ್ನು ಕಂಡ, ಭಕ್ತಿ ತಾನಾಗಿ ಅವರಿಗೆ ದಾರಿಕೊಟ್ಟಿತು. ಶ್ರೀ ಶಂಕರರು ಗರ್ಭಗೃಹದ ಸಮೀಪಕ್ಕೆ ಬಂದು, ಯತಿ ಸಂಪ್ರದಾಯದಂತೆ ದಂಡವನ್ನು ಹಿಡಿದು ದೇವರಿಗೆ ನಮಸ್ಕರಿಸಿದರು. ಬ್ರಹ್ಮಚಾರಿಗಳೂ ನಮಸ್ಕರಿಸಿ, ಶಂಕರರ ಹಿಂದೆ ಕೈಕಟ್ಟಿ ನಿಂತರು. ಅರ್ಚಕರು ಪುಷ್ಪ, ಗಂಧ ಪ್ರಸಾದವನ್ನು ತಂದು, ಯತಿವರ್ಯರ ಮುಂದೆ ನಿಂತು, ತಟ್ಟೆಯನ್ನು ಒಪ್ಪಿಸಿದರು. ಶಂಕರರೂ ಗಂಧವನ್ನೂ ಪುಷ್ಪವನ್ನೂ ಸ್ವೀಕರಿಸಿದರು.

ಅರ್ಚಕರಿಗೂ, ಊರಿನ ಜನರಿಗೂ ಈ ತೇಜಸ್ವಿಯಾದ ಯತಿ ಯಾರು ಎಂಬ ಕುತೂಹಲ. ಒಬ್ಬಿಬ್ಬರು ವೃದ್ಧರಿಗೆ ಈ ಮುಖ ಎಲ್ಲೋನೋಡಿದಂತಿದೆ, ಎಂಬ ಸಂದೇಹ. ಪ್ರಧಾನ ಅರ್ಚಕರು ಶಂಕರರ ಸಮೀಪಕ್ಕೆ ಬಂದು ವಿನಯದಿಂದ ತಲೆಬಾಗಿ "ಸ್ವಾಮಿಗಳು ಎತ್ತಲಿಂದ ಬಂದುದು?" ಎಂದರು.

ಆಚಾರ್ಯರು ಹಸನ್ಮುಖದಿಂದ ನುಡಿದರು "ಶೃಂಗಗಿರಿಯಿಂದ".

"ಶೃಂಗಗಿರಿ? ಅದೆಲ್ಲಿದೆ?"

"ಕರ್ನಾಟಕದಲ್ಲಿ ಸಹ್ಯಾದ್ರಿಯ ತಪ್ಪಲಲ್ಲಿ, ತುಂಗಾತೀರದಲ್ಲಿ ಇರುವ ಋಷ್ಯಾಶ್ರಮ"

"ಸ್ವಾಮಿಗಳ ಸ್ಥಳವು ಅದೇಯೋ?"

"ಭರತ ಖಂಡವೆಲ್ಲ ನಮ್ಮದೇ ಆಗಿದೆ. ಎಲ್ಲ ಗ್ರಾಮನಗರಗಳಿಗೂ ಸೇರಿದವರು ನಾವು. ಸಂನ್ಯಾಸಿಯಾದ ಮೇಲೆ ಆತನಿಗೆ ಲೋಕವೆಲ್ಲವೂ ತನ್ನದೆ ಅಲ್ಲವೆ? ಆತನು ವಿಶ್ವ ಕುಟುಂಬಿಯಲ್ಲವೇ? ಸರ್ವ ಬಂಧುವಲ್ಲವೇ?"

"ಹಾಗಲ್ಲ, ತಮ್ಮ ಜನ್ಮ ಸ್ಥಳ, ಪೂರ್ವಾಶ್ರಮದ ನಾಮಧೇಯ ಇತ್ಯಾದಿಗಳ ಬಗ್ಗೆ ನಾನು ಕೇಳಿದುದು."

"ಯತ್ಯಾಶ್ರಮವನ್ನು ಸ್ವೀಕರಿಸಿದ ನಂತರ, ಪೂರ್ವಾಶ್ರಮದ ಹೆಸರು, ಬಾಂಧವ್ಯ ಕಳೆದು ಹೋಗುತ್ತವೆ, ಅಲ್ಲವೇ? ಆತ್ಮಶ್ರಾದ್ಧ ಮಾಡಿಕೊಂಡ ನಂತರ, ಪೂರ್ವಾಶ್ರಮ ಕೊನೆಗೊಂಡಂತೆ ಅಲ್ಲವೇ? ಆದರೂ ನೀವು ವೃದ್ಧರು, ನಿಮ್ಮ ಕೌತುಕಕ್ಕಾಗಿ ಹೇಳುತ್ತಿದ್ದೇನೆ. ನಾನು ಪೂರ್ವಾಶ್ರಮದಲ್ಲಿ ಇಲ್ಲಿಯವನೇ! ಕಾಲಟಿಯಲ್ಲಿಯೇ ಹುಟ್ಟಿ ಬೆಳೆದವನು."

"ಕಾಲಟಿಯಲ್ಲಿ ಇದ್ದವರೇ? ಹಾಗಾದರೆ ತಾವು ನಮ್ಮ ಆಚಾರ್ಯ ಶಿವ ಗುರುಗಳ ಪುತ್ರ ಶ್ರೀ ಶಂಕರರೇ?" "ಹೌದು, ಶ್ರೀ ಶಂಕರಾಚಾರ್ಯರು" ಎಂದ ಸದಾಶಿವ. ಆ ನುಡಿಯನ್ನು ಕೇಳಿದ ಕೂಡಲೇ, ಆ ವೃದ್ಧರಾದ ಶ್ರೀಕೃಷ್ಣನ ಅರ್ಚಕರು ಆಚಾರ್ಯರ ಪಾದಗಳಿಗೆ ಅಭಿವಾದನ ಮಾಡಿದರು. 'ಧನ್ಯೋಸ್ಮಿ' ಎಂದರು. ಎಲ್ಲ ಜನವೂ ಆಚಾರ್ಯರಿಗೆ ನಮಸ್ಕಾರ ಮಾಡಿದರು.

"ಹದಿನಾರು ಹದಿನೆಂಟು ವರ್ಷಗಳ ಹಿಂದೆ ಇಲ್ಲಿಂದ ಹೊರಟ ಪುಟ್ಟ ಬಾಲಕ! ಈಗ ಮಹಾಸಂನ್ಯಾಸಿಯಾಗಿ ಬಂದಿದೀರಿ. ಶ್ರೀ ಶಂಕರಾಚಾರ್ಯರು, ಜಗದ್ಗುರುಗಳು, ಜ್ಞಾನಿಗಳು, ವೇದಾಂತ ಧರ್ಮ ಮತ್ತು ತತ್ತ್ವಪ್ರಸಾರಕರು ಎಂದು ನಾವು ಆಗಾಗ ಕೇಳುತ್ತಿದ್ದೇವೆ. ಈ ದಿನ ಶ್ರೀಕೃಷ್ಣನ ದಯೆಯಿಂದ, ಅವನ ಸನ್ನಿಧಿಯಲ್ಲಿಯೇ ತಮ್ಮ ದರ್ಶನವಾಯಿತು. ನಾವು ಭಾಗ್ಯವಂತರು" ಎಂದು ಹೇಳಿದ ಅರ್ಚಕರು "ಭೇರಿ ತಾಡನಮಾಡಿ ಶಂಖಧ್ವನಿಯನ್ನು ಮೊಳಗಿಸಿ ಊರಿಗೆಲ್ಲಾ ಈ ಶುಭದ ವಾರ್ತೆಯನ್ನು ಪ್ರಸರಿಸಿ" ಎಂದರು.

ಇದ್ದಕ್ಕಿದ್ದಂತೆಯೇ ಆದ ಭೇರಿ ತಾಡನ, ಶಂಖ ಜಾಗಟೆಗಳ ಧ್ವನಿಯನ್ನು ಕೇಳಿದ ಜನರು, ಅಂತಹ ವಿಶೇಷವೇನೆಂದು ತಮ್ಮ ತಮ್ಮ ಮನೆಗಳಿಂದ ಹೊರಗೆ ಬಂದರು. "ನಮ್ಮ ಶಂಕರ, ಶಂಕರಾಚಾರ್ಯರಾಗಿ ಬಂದಿದ್ದಾರೆ, ಶಿವ ಗುರುವಿನ ಪುತ್ರ ಜಗದ್ಗುರುವಾಗಿ ಬಂದಿದ್ದಾರೆ, ಆರ್ಯಾಂಬೆಯ ಮಗ ಶ್ರೀ ಕುಮಾರಸ್ವಾಮಿಯಂತೆ ಬಂದಿದ್ದಾರೆ" ಎಂದು ಬಾಯಿಂದ ಬಾಯಿಗೆ ವಾರ್ತೆ ಹಬ್ಬಿತು!

ಶ್ರೀ ಶಂಕರಾಚಾರ್ಯರೂ ಶಿಷ್ಯರೂ ಆಲಯದಿಂದ ಆರ್ಯಾಂಬೆಯ ಗೃಹದತ್ತ ನಿಧಾನವಾಗಿ ಹೊರಟಾಗ, ಊರಿನ ಜನವೆಲ್ಲಾ, ಈ ದಿವ್ಯ ದೃಶ್ಯವನ್ನು ಕಾಣಲು ಬಂದರು ಹಲವರು ಜಯಕಾರ ಮಾಡುತ್ತ, ಅವರೊಡನೆಯೇ, ಶಿವಗುರುಗಳ ಮನೆಯವರೆಗೆ ಬಂದರು.

ಆರ್ಯಾಂಬಾ ತಮ್ಮ ಮಧ್ಯಾಹ್ನದ ಸ್ನಾನ ಜಪಗಳನ್ನು ಮುಗಿಸಿ, ದೇವರ ಪೂಜೆಯ ತೀರ್ಥ ಸ್ವೀಕರಿಸಿ ಊಟಕ್ಕೆ ಕುಳಿತುಕೊಳ್ಳುವ ಸಮಯ. ಆ ವೇಳೆಗಾಗಲೇ ಮನೆಯಲ್ಲಿದ್ದ ಒಬ್ಬಿಬ್ಬರು ಬ್ರಹ್ಮಚಾರಿಗಳ ಊಟ ಮುಗಿದಿತ್ತು. ಬೀದಿಯಲ್ಲೆಲ್ಲಾ ಏನೋ ಕೋಲಾಹಲವಾಗುತ್ತಿದ್ದ ಸದ್ದು ಕೇಳಿದ ಅವರು ಅಂಗಳದಲ್ಲಿದ್ದ ಬಾಲವಟುವನ್ನು ಕರೆದು 'ಅದೇನು ಸಂಭ್ರಮ, ನೋಡಿ ಬಾ" ಎಂದರು. ಆ ಬಾಲಕನು ಹೊರಕ್ಕೆ ಓಡಿಹೋಗಿ ನೋಡಿದನು. ತರುಣ ಸಂನ್ಯಾಸಿಯೊಬ್ಬನು ತಮ್ಮ ಮನೆಯ ಕಡೆಗೇ ಬರುತ್ತಿದ್ದಾನೆ.



ಬಿಸಿಸಿಐ ನ ಸಿಇಓ – ರಾಹುಲ್ ಜೋಹ್ರಿ

ಉಳಿದ ಜನರೆಲ್ಲಾ ಮನೆಯ ಮುಂದಿನ ಕೈತೋಟದ ಆಚೆಗೆ ಬೀದಿಯಲ್ಲಿಯೇ ನಿಂತುಕೊಂಡು ನೋಡುತ್ತಿದ್ದಾರೆ. ಬಾಲವಟುವು ಸಂನ್ಯಾಸಿಯನ್ನು ನೀಡಿ "ಸ್ವಾಮಿಗಳೇ ಇಲ್ಲಿಯೇ ಇರಿ. ಕಾಲು ತೊಳೆಯಲು ಪಾದ್ಯವನ್ನು ತರುತ್ತೇನೆ" ಎಂದು ಒಳಕ್ಕೆ ಓಡಿದ. "ಅಮ್ಮಾ ಸಂನ್ಯಾಸಿಯೊಬ್ಬಾತ ಭಿಕ್ಷೆಗೆ ಬಂದಿದ್ದಾರೆ" ಎಂದು ಹೇಳಿದ. ಊಟಕ್ಕೆಂದು ಕುಳಿತಿದ್ದ ಆರ್ಯಾಂಬ ಎದ್ದು ನಿಲ್ಲುತ್ತಾ "ಮೊದಲು ಅತಿಥಿಯ ಊಟ" ಎಂದುಕೊಂಡರು. ಬ್ರಹ್ಮಚಾರಿಯ ತಂಬಿಗೆಯಲ್ಲಿ ನೀರನ್ನು ತಂದು, ಶಂಕರರ ಪಾದಗಳನ್ನು ತೊಳೆದು, ತನ್ನ ಉತ್ತರೀಯದಿಂದ ಒರಸಿದನು.

ಶಂಕರರು ಮನೆಯ ಒಳಕ್ಕೆ ಬರುತ್ತಾ "ಭವತಿ ಭಿಕ್ಷಾಂದೇಹಿ ಮಾತಾ ಅನ್ನಪೂರ್ಣೇಶ್ವರೀ" ಎಂದರು.

ಆರ್ಯಾಂಬಾ ನಿಧಾನವಾಗಿ ಹೊರಕ್ಕೆ ಬಂದರು. ಯಾರಿರಬಹುದು ಈ ಅಪರೂಪದ ಸಂನ್ಯಾಸಿ ಎಂದು ನೋಡಲು. ಶಂಕರರನ್ನು ನೋಡಿದೊಡನೆಯೇ ಆಕೆಯ ಮೈ ಪುಲಕಗೊಂಡಿತು, ಕಂಗಳಲ್ಲಿ ಆನಂದಬಾಷ್ಪ ತುಂಬಿತು. "ವತ್ಸ ಶಂಕರಾ!" ಎಂದರು ಆರ್ಯಾಂಬಾ.

"ಅಮ್ಮಾ" ಎನ್ನುತ್ತ ಶಂಕರರು ಬಾಗಿ ತಾಯಪಾದಗಳಿಗೆ ಎರಗಿದರು.

ಹೊರಗಿದ್ದವರೆಲ್ಲಾ ಒಬ್ಬೊಬ್ಬರಾಗಿ ಒಳಕ್ಕೆ ಬಂದರು. ಸದಾಶಿವ, ಪರಮೇಶ್ವರ, ಕೃಷ್ಣ ಮಿಶ್ರ ಮೊದಲಾದವರೆಲ್ಲಾ ಒಬ್ಬೊಬ್ಬರಾಗಿ ಮಹಾಮಾತೆಗೆ ನಮಸ್ಕರಿಸಿದರು. ಆರ್ಯಾಂಬೆಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಹದಿನಾರು–ಹದಿನೆಂಟು ವರ್ಷದ ಕೆಳಗೆ ವಾಮನನಂತೆ ಮನೆಯಿಂದ ಹೊರಟ ಪುಟ್ಟ ಬಾಲಕ, ಈ ದಿನ ತ್ರಿವಿಕ್ರಮನಂತೆ ಭರತಖಂಡವನ್ನೆಲ್ಲಾ ಜಯಿಸುತ್ತಾ ಬಂದಿದ್ದಾನೆ. ತಾನೆಂತಹ ಪುಣ್ಯವಂತೆ. ತನ್ನ ವಂಶ ಎಷ್ಟು ಪುನೀತವಾಯಿತು ಈ ದಿವ್ಯ ಪುತ್ರ ಜನನದಿಂದ! ಆಕೆ ಅಡಿಗಡಿಗೆ ಕೃಷ್ಣ, ನಾರಾಯಣ ಎನ್ನುತ್ತ ತಮ್ಮ ಮಾತೃಸಹಜವಾದ ವಾತ್ಸಲ್ಯದಿಂದ ಶಂಕರರ ನೆತ್ತಿಯನ್ನು ಅಘ್ರಾಣಿಸಿದರು. ತಲೆಯನ್ನು ನೇವರಿಸಿದರು. ಬೆನ್ನನ್ನು ತಟ್ಟಿದರು. ಶಂಕರರನ್ನು ನೋಡಿದರು ಮತ್ತೆ ನೋಡಿದರು ಅವರಿಗೆ ಸ್ವಲ್ಪ ದಿಗ್ಭ್ರಮೆಯಾಯಿತು. ಈತ ತನ್ನ ಮಗನೇ ದಿಟವಾಗಿ ಹೌದೇ? ಆಕೆಗೆ ಮಗನನ್ನು ನೋಡುತ್ತ ನೋಡುತ್ತ, ತಾನು ನೋಡುತ್ತಿರುವುದು ತನ್ನ ಮಗನನ್ನಲ್ಲ, ಸಾಕ್ಷಾತ್ ಪರಮೇಶ್ವರರನ್ನು ಎನ್ನಿಸಿತು! ಶಂಕರ ಶಂಕರ ಶಂಕರ ಎಂದು ಜಪಿಸಿದರು.

ಶಂಕರರು "ಹೌದಮ್ಮ, ನಾನೇ ಶಂಕರ, ನಿನ್ನ ಮುಂದೆಯೇ ನಿಂತಿದ್ದೇನಲ್ಲಾ" ಎಂದರು. ತಾಯಿ 'ಹೌದು, ನೀನು ಶಂಕರನೇ ಹೌದು, ಸಾಕ್ಷಾತ್ ಶಂಕರನೇ, ಪರಮೇಶ್ವರನೇ!" ಎಂದರು. ಆ ಸಮಯದಲ್ಲಿ ಅಲ್ಲಿದ್ದವರಿಗೆಲ್ಲಾ ಸಕ್ಷಾತ್ ಪರಶಿವನನ್ನೇ ಕಂಡಷ್ಟು ಹರ್ಷವಾಯಿತು. ತಾಯಿಯ ಭಾವೋದ್ವೇಗ ಸ್ವಲ್ಪ ಕಡಿಮೆಯಾದ ನಂತರ, ಶಂಕರರು ಮನೆಯನ್ನೆಲ್ಲಾ ಸುತ್ತಿ ಬಂದರು. ಯಜ್ಞಶಾಲೆ, ಪಾಠಶಾಲೆ, ಗೋಶಾಲೆಯನ್ನೆಲ್ಲಾ ಬಳಸಿ ಬಂದರು. ತಾಯಿ ಮಗನ ಹಿಂದೆ ತಾವೂ ಎಲ್ಲ ಕಡೆಗೂ ಬಂದರು. ಅಲ್ಲಿದ್ದ ಬಾಣಸಿಗ ಕೃಷ್ಣನ್ ಕುಟ್ಟಿ, ಶಂಕರರಿಗೆ ಅಭಿವಾದನ ಮಾಡಿದ. ಶಂಕರರು "ಕೃಷ್ಣ, ಎಷ್ಟೊಂದು ಮುದುಕನಾಗಿಬಿಟ್ಟಿದೀಯೆ!" ಎಂದರು. "ಸ್ವಾಮಿ ವಯಸ್ಸು ಎಂಬತ್ತಾಗುತ್ತ ಬಂತಲ್ಲವೇ? ಮುದುಕನಾಗದೇ ಇರಲು ಸಾಧ್ಯವೇ?" ಎಂದನು.

ಆ ದಿನ ಶಿಷ್ಯ, ಬ್ರಹ್ಮಚಾರಿಗಳೊಡನೆ ಕಳಿತ ಶಂಕರರಿಗೆ ತಾಯಿಯೇ ಭಿಕ್ಷೆ ಬಡಿಸಿದರು. ಶಂಕರರು ಊಟ ಮಾಡುತ್ತಾ "ಅಮ್ಮಾ ನಾಳೆ ನೀನು ನನಗೆ ಗಂಜಿಯೂಟವನ್ನು ಹಾಕಬೇಕು" ಎಂದರು. ತಾಯಿ "ಆಗಲಪ್ಪ ಶಂಕರ" ಎಂದರು.

ಪರಮೇಶ್ವರನು "ಅಮ್ಮಾ ನಮ್ಮ ಗುರುವಿಗೆ ನಾನು ತಾನೆಂದು ಶ್ರೀಮಂತರೂ ರಾಜರೂ ಪಕ್ವಾನ್ನ ರಾಜಭೋಜನ ಸಮರ್ಪಿಸುತ್ತಾರೆ. ಆದರೆ ಈತನಿಗೆ ಈ ಸರಳವಾದ ಗಂಜಿಯೂಟ, ಹಾಲು ಇದರಲ್ಲೆ ಸದಾ ತೃಪ್ತಿ" ಎಂದನು.

---

# ಬಿಸಿಲ_ಸರಿಸಿ_ಮಳೆಯ_ಸುರಿಸಿ_ಇಳೆಯ_ನಗಿಸಿದ

ಲೇ; ಕುಮಾರಿ ಪ್ರತಿಭಾ ಭಟ್ಟ



ಬಿಸಿಲ ಬಾಹು ಬಂಧದಿಂದ
ಬಾಡಿ ಬಸವಳಿದು ನಿಂದ
ಇಳೆಯ ಒಡಲ ಅರಿತು ಬಂದ
ವರುಣ ಮಳೆಯ ಸುರಿಸಿದ

ರವಿಯ ಉರಿವ ನೋಟದಿಂದ
ಸೋತ ಇಳೆಗೆ ತಂಪನೆರೆದ
ಬರಡು ಮಡಿಲ ತುಂಬಿದ
ಸೊರಗಿದೆಳೆಯ ಮೊಗದಿ ನಗುವ ತರಿಸಿದ

ವರುಣರಾಜನಾ ಆಗಮದಿಂದ
ಇಳೆಯು ಕಂಗೊಳಿಸಿಹಳು ತಾರುಣ್ಯದಿಂದ
ಇಳೆಯ ಮಳೆಯ ಮಿಲನದಿಂದ
ಹಸಿರು ಜನನ ಇಳೆಯ ಗರ್ಭದಿಂದ

ಬಿಸಿಲ ಮಳೆಯ ಆಟದಿಂದ
ಚಿತ್ತಾರ ಬಾನಿನಲ್ಲಿ ಕಾಮನ ಬಿಲ್ಲಿನಿಂದ
ಭೂಮಿಯೆಲ್ಲ ಹೊಸ ರೂಪದಿಂದ
ನಳನಳಿಸುತಿಹುದು ಹೂ ಬಳ್ಳಿಗಳಿಂದ

ವರುಣನಾ ತುಂತುರುವಿನ ಚುಂಬನದಿಂದ
ನಾಚಿನಿಂತ ಇಳೆಯು ಧನ್ಯವಾದದಿಂದ
ಹೂಗುಚ್ಛ ಹೊತ್ತು ಕೃತಜ್ಞತೆ ಸಾರಿದ
ಭೂಮಿಯ ಪರಿಯು ಅಂದವೋ ಅಂದ

ಇಳೆಯ ಒಡಲಿನಿಂದ ಬಂದ
ಮೊಗ್ಗ ಅರಳಿಸಿ ರವಿಯು ನಿಂದ
ಪನ್ನೀರು ಸುರಿದಿಹುದು ವರುಣನಿಂದ
ಮನ ತಣಿದಿಹುದು ಸೃಷ್ಟಿಯೊಳಗಿನ ಈ ಅದ್ಭುತದಿಂದ



ಐಸಿಸಿ ನ ಸಿಇಓ – ಡೇವ್ ರಿಚರ್ಡ್ಸನ್

ಕಗ್ಗದ ಬೆಳಕಿನಲ್ಲಿ

# ಕೊಳೆಗೂ ಬೆಲೆಯುಂಟೇ?

**ಲೇ: ಡಾ॥ ಜಿ. ಎಸ್. ನಟೇಶ**

**ಕೊಳಕೆಂದು ಹುಳುಕೆಂದು ಹೇಸಿಗೆಯ ಹುಳುವೆಂದು**
ಇಳೆಯೊಳಾವುದರೊಳಮಸಹ್ಯ ಪಡಬೇಡ।
ಬೆಲೆಯುಂಟು ಕೊಳೆಗಮೀಜೀವಸಾಮಗ್ರಿಯಲಿ
ಕೊಳೆಶುಚಿಖ್ಯಾಪಕವೊ–ಮಂಕುತಿಮ್ಮ॥

ಈ ಭೂಮಿಯಲ್ಲಿ ಯಾವುದನ್ನೂ ಕೊಳಕು, ಹುಳುಕು, ಹೇಸಿಗೆಯ ಹುಳು ಎಂದು ತಿಳಿದು ಅಸಹ್ಯ ಪಡಬೇಡ. ಈ ಜೀವ ಸಾಮಗ್ರಿಯಲ್ಲಿ ಕೊಳೆಗೂ ಬೆಲೆಯಿದೆ. ಏಕೆಂದರೆ ಕೊಳೆಯೇ ಶುಚಿಯಾದುದನ್ನು ಬೆಳಕಿಗೆ ತರುವಂಥದ್ದು.

ಈ ಜಗತ್ತಿನಲ್ಲಿ ಭಗವಂತ ಸೃಷ್ಟಿಸಿದ ಪ್ರತಿಯೊಂದು ವಸ್ತುವಿಗೂ ಒಂದು ಅರ್ಥವಿದೆ. ಅವನ ದೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ. ಬೆಟ್ಟದಲ್ಲಿ ಮಲ್ಲಿಗೆ ಅರಳಿ ಸುವಾಸನೆಯನ್ನು ಹರಡಿದರೆ ಕೊಚ್ಚೆಯಲ್ಲಿ ಕಮಲ ಅರಳಿ ಸೊಬಗನ್ನು ಪಸರಿಸುತ್ತದೆ. ಹೂವು ಮುಳ್ಳು, ಕಲ್ಲು, ಮಣ್ಣು, ಬೆಟ್ಟ ಕಣಿವೆಗಳು, ನದಿ ಕೊಳಗಳು ಹೀಗೆ ಸೃಷ್ಟಿಯ ವೈಪರೀತ್ಯಗಳು ಬಹಳ. ಸೂರ್ಯೋದಯ ಒಂದು ಕಡೆಯಾದರೆ ಸೂರ್ಯಾಸ್ತದ ದೃಶ್ಯ ಇನ್ನೊಂದೆಡೆ. ಪ್ರೇಮಘೋರಗಳು ಭಗವಂತನ ದೃಷ್ಟಿಯಲ್ಲಿ ಒಂದೇ. ಕೆಲವೊಮ್ಮೆ ನಾವು ಕೊಳಕನ್ನು ಕಂಡು ಅಸಹ್ಯಪಟ್ಟುಕೊಳ್ಳುತ್ತೇವೆ. ಗುಂಡಪ್ಪನವರು ಇದು ಕೊಳಕು, ಇದು ಹುಳುಕು, ಇದು ಹೇಸಿಗೆಯ ಹುಳುವೆಂದು ಯಾವುದರಲ್ಲಿಯೂ ಅಸಹ್ಯಪಟ್ಟುಕೊಳ್ಳಬೇಡ ಎಂದು ಇಲ್ಲಿ ಸೂಚಿಸಿದ್ದಾರೆ. ಕಾರಣ ಈ ಭೂಮಿಯಲ್ಲಿ ಕೊಳೆಗೂ ಬೆಲೆಯಿದೆ. ಅವೆಲ್ಲವೂ ಜೀವಸಾಮಗ್ರಿಗಳು. ಕೊಳೆ ಶುಚಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ಕೋಗಿಲೆಯ ಇಂಪು ಕಾಗೆಯ ಧ್ವನಿಯಿಂದ ನಿರ್ಧಾರಿತವಾಗುತ್ತದೆ. ಬುದ್ಧಿವಂತನ ಬುದ್ಧಿಮತ್ತೆಯನ್ನು ಅಳೆಯುವ ಮಾಪದಂಡ ದಡ್ಡನ ದಡ್ಡತನ. ಕೊಳೆಯ ನೀರನ್ನು ಉಪಯೋಗಿಸಿಕೊಂಡು ತೆಂಗಿನ ಮರ ಮಧುಮಧುರವಾದ ನೀರನ್ನು ಕೊಡುತ್ತದೆ. ಆದ್ದರಿಂದ ಈ ಜಗತ್ತಿನಲ್ಲಿ ಎಲ್ಲವೂ ಮಧುರವೇ.

**ಸೃಷ್ಟಿಕರ್ತನ ಯುಕ್ತಿ ಯಾವುದು** ?
ಧರೆಸಸ್ಯ ಫಲದಿ ಜೀವಿಗೆ ಪುಷ್ಟಿಯಿತ್ತೊಡೇಂ?
ಮರಳಿ ತಾಂ ಪಡೆಯಳೇನವನಿನರ್ಧವನು?
ಧರಣಿಗೀನಮ್ಮೊಡಲು ಹುಯ್ಗುಡುಬು ತಪ್ಪಲೆಯೊ
ಪರಮೇಷ್ಠಿಯಯುಕ್ತಿಯಿದು – ಮಂಕುತಿಮ್ಮ॥

ಭೂಮಿ ತನ್ನ ಸಸ್ಯಗಳ ಫಲಗಳಿಂದ ಜೀವಿಗೆ ಪುಷ್ಠಿಯನ್ನು ನೀಡಿದರೇನು? ತಾನು ಕೊಟ್ಟಿರುವ ಅರ್ಧಭಾಗವನ್ನು ತಕ್ಷಣವೇ ಮರಳಿ ಪಡೆಯುತ್ತಾಳೆ. ಭೂಮಿಗೆ ಈ ನಮ್ಮ ಶರೀರ ಕಡುಬನ್ನು ಹುಯ್ಯುವ ತಪ್ಪಲೆ ಇದ್ದಂತೆ. ಸೃಷ್ಟಿಕರ್ತನ ಯುಕ್ತಿಯಿದು.

ಈ ಭೂಮಿ ವನಸ್ಪತಿಗಳಿಂದ ಜೀವಿಗಳಿಗೆ ಪುಷ್ಟಿಯನ್ನು ನೀಡುತ್ತದೆ. ಸಸ್ಯಗಳು, ಫಲಗಳು, ಗೆಡ್ಡೆ ಗೆಣಸುಗಳು ಜೀವಿಯ ಆಹಾರ, ಅಲ್ಲಿಗೇ ಅದು ಬಿಟ್ಟುಬಿಡುವುದಿಲ್ಲ. ಅದರಲ್ಲಿ ಅರ್ಧಭಾಗವನ್ನು ಕೂಡಲೇ ಮರಳಿ ತೆಗೆದುಕೊಂಡುಬಿಡುತ್ತದೆ. ಭೂಮಿಗೆ ನಮ್ಮ ಈ ಶರೀರ ಕಡುಬನ್ನು ಹುಯ್ಯಲು ಉಪಯೋಗಿಸುವ ತಪ್ಪಲೆ. ಕಡುಬು ಬೆಂದ ಮೇಲೆ ಅದನ್ನು ಆ ತಪ್ಪಲೆಯಿಂದ ವಾಪಾಸು ತೆಗೆದು ಬಿಡುತ್ತೇವೆ. ಭಗವಂತನೂ ಕೂಡ ಕೆಲವು ವಸ್ತುಗಳನ್ನು ನಮ್ಮ ಶರೀರದಲ್ಲಿ ಪಾಕಗೊಳಿಸಿ ಪುನಃ ನಮ್ಮಿಂದ ತಿರುಗಿ ಪಡೆದುಬಿಡುತ್ತಾನೆ. ಇದು ಸೃಷ್ಟಿಕರ್ತನ ಯುಕ್ತಿ. ನಾವೆಲ್ಲ ಅವನು ಆಡಿಸುವ ಸೂತ್ರ ಗೊಂಬೆ. ಅವನಾಡಿಸಿದಂತೆ ನಾವಾಡಬೇಕು ಅಷ್ಟೆ.

**ಬ್ರಹ್ಮನ ರಹಸ್ಯವನ್ನು ಅರಿಯುವವರಾರು**?
ಹೇಮಕುಂಭದಿ ಕೊಳಚೆ ರೊಚ್ಚು ನೀರ್ಗಳ ತುಂಬಿ
ರಾಮಣೀಯಕದೊಳಿಟ್ಟಾಮ ಗಂಧವನು ।
ಪ್ರೇಮಪುಷ್ಪಕೆ ವೊನಚು ಗರಗಸವನಂಚಿರಿಸಿ
ಏಂ ಮಾಡಿದನೋ ಬೊಮ್ಮ ? ಮಂಕುತಿಮ್ಮ ॥

ಚಿನ್ನದ ಕೊಡದಲ್ಲಿ ಕೊಳಚೆ ನೀರನ್ನು ತುಂಬಿ, ದುರ್ಗಂಧವನ್ನು ಸುಂದರವಾದ ಆವರಣದಿಂದ ಇಟ್ಟು, ಪ್ರೇಮದ ಪುಷ್ಪಕ್ಕೆ ತೀಕ್ಷ್ಣವಾದ ಗರಗಸದ ಅಂಚನ್ನು ಇರಿಸಿ, ಬ್ರಹ್ಮ ಅದೇನು ಮಾಡಿದ್ದಾನೋ ?

ಕೆಲವೊಮ್ಮೆ ಬ್ರಹ್ಮನ ಸೃಷ್ಟಿಯ ವಿಚಾರದಲ್ಲಿ ನಮಗೆ ಗೊಂದಲವಾಗುತ್ತದೆ. ಅದರ ಒಳಮರ್ಮ ಅರ್ಥವಾಗುವುದೇ ಇಲ್ಲ. ಅವನು ಕೆಲವೊಮ್ಮೆ ಬಂಗಾರದ ಕೊಡದಲ್ಲಿ ಕೊಚ್ಚೆಯ ನೀರನ್ನು ತುಂಬಿಬಿಡುತ್ತಾನೆ. ದುರ್ಗಂಧಕ್ಕೆ ಸುಂದರವಾದ ಹೊರಮೈಯನ್ನು ಹೊದಿಸಿರುತ್ತಾನೆ. ಪ್ರೇಮಮಯವಾದ ಹೂವಿಗೆ ಮೊನಚಾದ ಗರಗಸದ ಅಂಚನ್ನು ಇರಿಸುತ್ತಾನೆ. ಇದೆಲ್ಲ ಯಾಕಾಗಿ ಎಂದು ತಿಳಿಯುವುದಿಲ್ಲ. ಸೃಷ್ಟಿಯ ಕಥೆಯೇ ಹೀಗೆ. ಪ್ರಾಯಃ ಎಲ್ಲವನ್ನೂ ಸಮನಾಗಿ ಕಾಣುವ ಉಪದೇಶವನ್ನು ನಮಗೆ ನೀಡುತ್ತಿದೆಯೇನೋ! ನಮ್ಮ ಬದುಕಿನಲ್ಲಿಯೂ ಕಷ್ಟ –ಸುಖಗಳೂ ಹೀಗೆಯೇ ಬರುತ್ತಿರುತ್ತವೆಯಲ್ಲವೆ ? ಸೃಷ್ಟಿಯ ಈ ಮಾಟದಲ್ಲಿ ಬದುಕಿನ ಪಾಠವಿದು.

**ಯಾವುದು ನಿಜವಾದ ಧರ್ಮ** ?
ವಕ್ರ ಋಜುಮಿಶ್ರ ಜಗವದರ ಶೋಧನೆ ಧರ್ಮ
ಪ್ರಾಕೃತಧ್ವನಿ ಮಿಶ್ರವದರುಡುಗೆ ರಾಗ ।
ವ್ಯಾಕೃತದಿನವ್ಯಾಕೃತಾದಿಸತ್ತ್ವಕೆ ನಿನ್ನ



ಹೆಚ್ ಎ ಎಲ್ ನ ಸಿಇಓ – ಟಿ. ಸುವರ್ಣ ರಾಜು

ಜಾಗೃತಿಪ ಮತಿಧರ್ಮ – ಮಂಕುತಿಮ್ಮ ॥

ಜಗತ್ತು ವಕ್ರತೆ ಹಾಗೂ ಸರಳತೆಗಳ ಮಿಶ್ರಣ. ಅದನ್ನು ಶೋಧಿಸುವುದೇ ಧರ್ಮ.

ಪ್ರಕೃತಿಯಿಂದ ಉತ್ಪನ್ನವಾಗುವ ಧ್ವನಿ ಮಿಶ್ರ. ಅದನ್ನು ಹೊಂದಿಸುವುದೇ ರಾಗ.

ಭಿನ್ನತೆಯಿಂದ ಅಭಿನ್ನ ಸತ್ತ್ವದ ಕಡೆಗೆ ನಿನ್ನನ್ನು ಎಚ್ಚರಗೊಳಿಸುವ ಬುದ್ಧಿಯೇ ಧರ್ಮ.

ಜಗತ್ತಿನಲ್ಲಿ ವೈಚಿತ್ರ್ಯಗಳು ಹಲವು ಎಲ್ಲವೂ ಸಮಾನವಾಗಿರುವುದಿಲ್ಲ. ಒಂದು ಕಡೆ ವಕ್ರತೆಯಾದರೆ, ಇನ್ನೊಂದು ಕಡೆ ಸರಳತೆ. ನದಿಗಳು ವಕ್ರವಾಗಿಯೇ ಹರಿಯುತ್ತವೆ. ಸೂರ್ಯನ ಕಿರಣಗಳು ನೇರವಾಗಿ ಪಸರಿಸುತ್ತವೆ. ಒಂದು ಕಡೆ ಬಯಲಾದರೆ, ಇನ್ನೊಂದು ಕಡೆ ಏರು ತಗ್ಗುಗಳು. ಜಗತ್ತು ಇಂಥವುಗಳ ಮಿಶ್ರಣ. ಅವುಗಳನ್ನು ಶೋಧಿಸುವ ಕಾರ್ಯವೇ ಧರ್ಮ. ಈ ವಕ್ರ ಋಜುಗಳ ಮಧ್ಯದಲ್ಲಿಯೇ ಒಂದು ತತ್ತ್ವವನ್ನು ಶೋಧಿಸಬೇಕಾಗುತ್ತದೆ, ಸಂಗೀತದಲ್ಲಿ ಬಳಸಲಾಗುವ ಪ್ರಾಕೃತ ಧ್ವನಿಗಳು ಬೆರಕೆಯಲ್ಲಿರುತ್ತವೆ. ಅಲ್ಲಿ ಬಳಸುವ ಒಂದೊಂದೂ ಬೇರೆ ಬೇರೆ ಪ್ರಾಣಿ ಪಕ್ಷಿಗಳಿಂದ ತೆಗೆದುಕೊಂಡವು. ಉದಾಹರಣೆಗೆ 'ಸ' ನವಿಲಿನಿಂದ ತೆಗೆದುಕೊಂಡಿದ್ದರೆ, 'ರಿ' ವೃಷಭದಿಂದ ಬಂದದ್ದು. 'ಗ' ಆಡಿನಿಂದ ಬಂದರೆ 'ಮ' ಕ್ರೌಂಚ ಪಕ್ಷಿಯಿಂದ ಬಂದಿದೆ. ಹೀಗೆ ಅವೆಲ್ಲಾ ಬೇರೆ ಬೇರೆಯಾಗಿದ್ದರೂ ಅವೆಲ್ಲವನ್ನೂ ಸೇರಿಸಿ ಒಂದು ರಾಗವನ್ನು ಬೆಸೆಯಲಾಗುತ್ತದೆ. ಭಿನ್ನತೆಯಿಂದ ವಿಭಿನ್ನತೆಯೆಡೆಗೆ ಕೊಂಡೊಯ್ಯುವ ಪ್ರಕ್ರಿಯೆಯೇ ಧರ್ಮ. ಈ ಹಲವುಗಳನ್ನು ಬಳಸಿಕೊಂಡು ಒಂದು ಸತ್ತ್ವದೆಡೆಗೆ ನಡೆದರೆ ಅದು ಧರ್ಮದ ನಡಿಗೆ. ನಮ್ಮ ಮತಿಯಲ್ಲಿ ಅಂಥ ಜಾಗೃತಿಯಾಗಬೇಕು. ಮತಧರ್ಮಗಳು ಹಲವಿದ್ದರೂ ಅವೆಲ್ಲ ಒಂದು ಸತ್ತ್ವದ ಕಡೆಗೆ ಕೈ ತೋರಿಸುತ್ತವೆ. 'ಏಕಂ ಸತ್ ವಿಪ್ರಾಃಬಹುಧಾ ವದಂತಿ' ವೇದೋಪನಿಷತ್ತುಗಳು ಹೇಳುವುದು ಇದನ್ನೇ, ಇಂಥ ಜಾಗೃತಿ ನಮ್ಮೆಲ್ಲರ ಬುದ್ಧಿಯಲ್ಲಿ ಮೂಡಬೇಕು. ಅದೇ ನಿಜವಾದ ಧರ್ಮ.

**ಯಾವುದರಿಂದ ಬದುಕಿಗೆ ರುಚಿ ಪ್ರಾಪ್ತವಾಗುತ್ತದೆ ?**

ಜಲಧಿ, ತೀರದಿ ನಿಂತು ವೀಕ್ಷಿಸಿಕ್ಕೆಲಗಳಲಿ
ಚಲವಿಂದಚಲವೊಂದು ಸಮವದಸಮವಿದು ।
ಕಲೆತಿರ್ಪುವಂತು ಮೇಯಾಮೇಯಗಳು ಜಗದಿ
ಮಿಲಿತತೆಯಿನೇ ರುಚಿಯೊ – ಮಂಕುತಿಮ್ಮ ॥

ಸಮುದ್ರದ ತೀರದಲ್ಲಿ ನಿಂತು ಎರಡೂ ಕಡೆಗಳಲ್ಲಿ ನೋಡು. ಒಂದು ನಿಂತಿರುತ್ತದೆ. ಇನ್ನೊಂದು ಚಲಿಸುತ್ತಿರುತ್ತದೆ. ಒಂದು ಸಮನಾಗಿರುತ್ತದೆ. ಇನ್ನೊಂದು ಅಸಮವಾಗಿರುತ್ತದೆ. ಅಳತೆಗೆ ಸಿಗುವಂತಹ ಹಾಗೂ ಸಿಗದಂತಹ ವಸ್ತುಗಳು ಹೀಗೆ ಜಗತ್ತಿನಲ್ಲಿ ಸೇರಿಕೊಂಡಿರುತ್ತವೆ. ಈ ರೀತಿ ಸೇರುವಿಕೆಯೇ ರುಚಿ.

ಪ್ರಕೃತಿಯ ನಿಯಮಗಳು ನಮಗೆ ಬೆರಗುಗೊಳಿಸುತ್ತವೆ. ಅದನ್ನು ಅಧ್ಯಯನ ಮಾಡುತ್ತಾ ಹೋದಂತೆ ನಮಗೆ ಆಸಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ಒಂದು ಅಪೂರ್ವವಾದ ತತ್ತ್ವವನ್ನು ಬೋಧಿಸುತ್ತಾ ಹೋಗುತ್ತದೆ. ಸಮುದ್ರದ ತೀರದಲ್ಲಿ ನಿಂತು ಎರಡು ಕಡೆಗಳಲ್ಲಿ ನೋಡಿದರೆ. ಒಂದು ಚಲಿಸುವಂತೆ ಕಂಡರೆ ಇನ್ನೊಂದು ನಿಂತಂತೆ ಕಾಣುತ್ತದೆ. ಒಂದು ಸಮನಾಗಿ ಕಂಡರೆ ಇನ್ನೊಂದು ಅಸಮವಾಗಿ ಕಾಣುತ್ತದೆ. ಸಮುದ್ರದ ತೆರೆಗಳು ಚಲಿಸುತ್ತವೆ. ಭೂಮಿ ನಿಂತಂತೆ ಕಾಣುತ್ತದೆ. ತೆರೆಗಳಾಚೆ ಶಾಂತವಾದ ಸಾಗರ ಸಮತಟ್ಟಾಗಿರುವಂತೆ ಕಾಣುತ್ತದೆ. ಆದರೆ ತೆರೆಗಳಲ್ಲಿ ಅಸಮತೆ ಕಾಣುತ್ತದೆ. ಅದರಂತೆ ಭೂಮಿಯ ಮೇಲ್ಮೈ ಅಸಮವಾಗಿರುತ್ತದೆ. ಅಳತೆಗೆ ಸಿಗುತ್ತದೆ. ಸಾಗರ ಅಮೇಯ ಅಂದರೆ ಅಳೆಯಲಾಗದು. ಹೀಗೆ ಜಗತ್ತಿನಲ್ಲಿ ಚಲಾಚಲಗಳು, ಸಮಾಸಮಗಳು, ಮೇಯಾಮೇಯಗಳು ಒಂದಕ್ಕೊಂದು ಸೇರಿಕೊಡಿರುತ್ತವೆ. ಪರಸ್ಪರ ಈ ಸೇರುವಿಕೆಯಿಂದಲೇ ಜಗತ್ತು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತದೆ. ಸೇರಿ ಬದುಕುವುದೇ ರುಚಿ ಎಂಬುದನ್ನು ನಮಗೆ ಸದಾ ಬೋಧಿಸುತ್ತದೆ. 'ಸಂಗಚ್ಛಧ್ವಂ ಸಂವದಧ್ವಂ' ವೇದಗಳು ಸಾರುವುದೂ ಇದನ್ನೇ ಅಲ್ಲವೇ?

---

## ॥ ಕ್ಷೇತ್ರ ಸಂಸ್ಥಾಪಕರ ದಿನ ॥

ಲೇ: ಸಾವಿತ್ರಿ ಹೆಗಡೆ, ಬಸವನಬೆಟ್ಟ

ಕಾಯಕದ ನಿಷ್ಠೆಯ ಜೀವನ
ಗಣೇಶ ಭಟ್ಟರ ನೆನಪಿನ ಈ ದಿನ!
ಶ್ರೀಕ್ಷೇತ್ರ ಸಂಸ್ಥಾಪಕರ ಸುದಿನ!
ಜೀವನ ಸಾರ್ಥಕತೆಯ ಸುಮಧುರ ಕ್ಷಣ!

ಸವಿ ನುಡಿಯನಾಡುತಲಿ
ಮನವ ತಣಿಸುತಲಿ
ಬಡವ ಬಲ್ಲಿದ ಭೇಧವಿಲ್ಲದೆ
ಭಕ್ತ ಜನರ ಕಷ್ಟಗಳ
ನಿವಾರಿಸಿದ ಮಹಾನುಭಾವ

ಜೀವನದ ಮೌಲ್ಯಗಳು
ಅವರ ನಡೆ ನುಡಿಯ
ಭಾವದಲಿ ಲೀನವಾದಾಗ
ದೇವನಲಿ ಲೀನವಾದ ಜೀವ
ಇಲ್ಲದಿದ್ದರೂ ಇದ್ದಂತೆ ತೋರುವ ಸಾರ್ಥಕವಾದ ಜೀವನ!!





ಡಿ ಆರ್ ಡಿ ಓ ದ ಸಿಇಓ — ಎಸ್. ಕ್ರಿಸ್ಟೋಫರ್

ವಚನಭಾಗವತ

# ನಾಭಾಗ

ಲೇ: ತ. ಸು. ಶಾಮರಾಯ

ವೈವಸ್ವತಮನು ಹರಿಕೃಪೆಯಿಂದ ಪಡೆದ ಹತ್ತು ಮಕ್ಕಳಲ್ಲಿ ಎಂಟನೆಯವನು ನಭಗ. ಈ ನಭಗರಾಜನ ಹಲವು ಮಕ್ಕಳಲ್ಲಿ ಕಿರಿಯನಾದವನು ನಾಭಾಗ. ಅವನಿಗೆ ವಿದ್ಯೆಯ ಗೀಳು ಹೆಚ್ಚು ಬಹು ಕಾಲದವರೆಗೆ ವಿದ್ಯಾಭ್ಯಾಸ ಮಾಡುತ್ತಾ, ಗುರುಕುಲದಲ್ಲಿಯೇ ನಿಂತುಬಿಟ್ಟ. ಅವನ ಅಣ್ಣಂದಿರು ತಮ್ಮ ತಂದೆಯು ತಪಸ್ಸಿಗೆ ಹೋಗುತ್ತಲೆ, ನಾಭಾಗನನ್ನು ಬಿಟ್ಟು ತಮ್ಮ ತಮ್ಮಲಿಯೆ ರಾಜ್ಯವನ್ನು ಹಂಚಿಕೊಂಡರು. ಇದಾದ ಬಹುಕಾಲದ ಮೇಲೆ ನಾಭಾಗ ಗುರುಕುಲದಿಂದ ಹಿಂದಿರುಗಿ, ತನ್ನ ಭಾಗದ ರಾಜ್ಯವನ್ನು ಕೊಡುವಂತೆ ಅವರನ್ನು ಕೇಳಿದ. ಅವರು 'ತಮ್ಮ, ನಿನಗೆ ಪಾಲು ಕೊಡಬೇಕೆಂಬುದು ನಮಗೆ ಮರತೋಯಿತು. ಈಗ ಮಡುವುದೇನು ? ನಮ್ಮ ತಂದೆಯನ್ನೆ ನೀನು ನಿನ್ನ ಪಾಲಿಗೆ ತೆಗೆದುಕೊ' ಎಂದರು. ಅವನು ಹಾಗೆಯೇ ಆಗಲೆಂದು ತಂದೆಯ ಬಳಿಗೆ ಹೋಗಿ, ಅದನ್ನು ಆತನಿಗೆ ತಿಳಿಸಿದ. ಅದನ್ನು ಕೇಳಿ ನಭಗನು 'ಮಗು, ಅವರು ನಿನಗೆ ಮೋಸ ಮಾಡಿದ್ದಾರೆ. ಅವರ ಮಾತನ್ನು ನಂಬಬೇಡ. ಹೋಗಲಿ, ನಿನ್ನ ಪಾಲಿಗೆ ಅವರು ನನ್ನನ್ನು ಕೊಟ್ಟಿರುವುದರಿಂದ ನಿನಗೆ ಹೊಟ್ಟೆ ಹೊರೆಯುವ ಉಪಾಯವನ್ನು ನಾನು ನಿನಗೆ ಹೇಳಿಕೊಡುತೇನೆ. ಇಲ್ಲಿಗೆ ಹತ್ತಿರದಲ್ಲಿಯೇ ಅಂಗಿರಸರೆಂಬ ಋಷಿಗಳು ಹನ್ನೆರಡು ದಿನಗಳು ನಡೆಯಬೇಕಾದ ಸತ್ರಯಾಗವೊಂದನ್ನು ಪ್ರಾರಂಭಿಸಿದ್ದಾರೆ. ಅವರು ಬಹು ದೊಡ್ಡ ಪಂಡಿತರಾದರೂ ಆರನೆಯ ದಿನದ ಕರ್ಮವನ್ನು ಹೇಗೆ ಮಾಡಬೇಕೆಂದು ಅವರಿಗೆ ಗೊತ್ತಿಲ್ಲ. ಅಂದು ಅವರು ಮುಂದೋರದೆ ಮರುಳರಂತೆ ಕುಳಿತುಕೊಳ್ಳುತ್ತಾರೆ. ಆಗ ನೀನು ಅಲ್ಲಿಗೆ ಹೋಗಿ, ಅವರಿಗೆ ಅಗತ್ಯವಾಗಿ ಬೇಕಾಗುವ ಎರಡು ಮಂತ್ರಗಳನ್ನು ಹೇಳಿಕೊಡು. ಅವರು ಯಾಗದ ಕೊನೆಯಲ್ಲಿ ಸ್ವರ್ಗಕ್ಕೆ ಹೋಗುವ ಮುನ್ನ ತಮ್ಮ ಯಾಗದಲ್ಲಿ ಉಳಿದ ಅಪಾರವಾದ ಧನವನ್ನು ನಿನಗೆ ಕೊಟ್ಟು ಹೋಗುತ್ತಾರೆ' ಎಂದು ಹೇಳಿದ. ನಾಭಾಗನು ಹಾಗೆಯೇ ಮಾಡಿದನು. ಆದರಿಂದ, ತಂದೆ ಹೇಳಿದಂತೆಯೆ ಅವನಿಗೆ ಅಪಾರವಾದ ಧನ ದೊರೆಯಿತು.

ನಾಭಾಗನು ಯಾಗಶಾಲೆಯಿಂದ ಹಣದೊಡನೆ ಹೊರ ಹೊರಡಬೇಕೆನ್ನುವಷ್ಟರಲ್ಲಿಯೇ ಕಪ್ಪು ದೇಹದ ಮಹಾಪುರುಷನೊಬ್ಬ ಅಲ್ಲಿ ಕಾಣಿಸಿಕೊಂಡು 'ನಿಲ್ಲು, ಯಾಗದಲ್ಲಿ ಉಳಿದುದೆಲ್ಲವೂ ನನಗೆ ಸೇರಬೇಕು' ಎಂದು ಆತ ಗರ್ಜಿಸಿದ. ಯಜ್ಞಮಾಡಿದವನೇ ಅದನ್ನು ತನಗೆ ಕೊಟ್ಟಿರುವನೆಂದು ನಾಭಾಗ ತಿಳಿಸಿದರೂ ಅವನು ಒಪ್ಪಲಿಲ್ಲ. ಕೊನೆಗೆ ಆ ಮನುಷ್ಯ 'ಅಯ್ಯಾ ನಾಭಾಗ, ಈ ವಿಚಾರವಾಗಿ ನಾವು ಕಿತ್ತಾಡುವುದು ಬೇಡ. ನಿಮ್ಮ ತಂದೆಯ ಹತ್ತಿರವೇ ಹೋಗಿ ಕೇಳೋಣ. ಆತನ ತೀರ್ಮಾನದಂತೆ ನಾವಿಬ್ಬರೂ ನಡೆದುಕೊಳ್ಳೋಣ' ಎಂದು ತಿಳಿಸಿದ. ಇಬ್ಬರೂ ನಭಗನ ಬಳಿಗೆ ಬಂದರು. ಆತನು ಅವರ ವಿವಾದವನ್ನು ಕೇಳಿ, ಕಡೆಯಲ್ಲಿ ಮಗನೊಡನೆ 'ಮಗು, ನಿನ್ನ ಎದುರಾಳಿ ಸಾಕ್ಷಾತ್ ರುದ್ರದೇವರು. ಹಿಂದೆ ದಕ್ಷನು ಯಾಗ ಮಾಡಿದಾಗ, ಯಾಗದಲ್ಲಿ ಉಳಿದುದೆಲ್ಲ ರುದ್ರನಿಗೆ ಸಲ್ಲತಕ್ಕುದೆಂದು ಋಷಿಗಳು ತೀರ್ಮಾನಿಸಿದರು. ಆದ್ದರಿಂದ ಈಗ ನಿನಗೆ ದೊರೆತ ಹಣವೆಲ್ಲ ಆತನಿಗೆ ಸಲ್ಲುತಕ್ಕುದೆ' ಎಂದನು. ಈ ಮಾತನ್ನು ಕೇಳುತ್ತಲೆ ನಾಭಾಗನು ರುದ್ರನಿಗೆ ಅಡ್ಡಬಿದ್ದು, ಹಣವನ್ನೆಲ್ಲ ಒಪ್ಪಿಸಿ, ತನ್ನನ್ನು ಕ್ಷಮಿಸುವಂತೆ ಬೇಡಿಕೊಂಡನು. ಇದನ್ನು ಕಂಡು ರುದ್ರನಿಗೆ ಅತ್ಯಂತ ಸಂತೋಷವಾಯಿತು. ಆತನು ' ನಾಭಾಗ, ನಿನ್ನ ಸತ್ಯಕ್ಕೂ ನಿಮ್ಮಪ್ಪನ ಧರ್ಮಬುದ್ಧಿಗೂ ನಾನು ಮೆಚ್ಚಿದ್ದೇನೆ. ಈ ಹಣವನ್ನು ನೀನೇ ತೆಗೆದುಕೊ. ಇದರ ಜೊತೆಗೆ ನಿನಗೆ ನಾನು ಬ್ರಹ್ಮಜ್ಞಾನವನ್ನೂ ಉಪದೇಶಿಸುತ್ತೇನೆ. ನೀನು ಎಂತಹ ಕಷ್ಟವೇ ಬರಲಿ, ಸತ್ಯವನ್ನು ಬಿಡಬೇಡ. ಸತ್ಯ ನನಗೆ ಅತ್ಯಂತ ಪ್ರಿಯ ಎಂದು ಹೇಳಿ, ಅವನಿಗೆ ಉಪದೇಶವನ್ನು ಕೊಟ್ಟು ಮಾಯವಾದನು.

---

ಆನೋ ಭದ್ರಾಃ ಕೃತವೋಯಂತು ವಿಶ್ವಥಃ

ಅಂತರ್ಜಾಲದಿಂದ ಪಡೆದದ್ದು

# ಕೋಣಮರಿ ಆಗಬೇಡಿ, ಜಾಣಮರಿಯಾಗಿ ಮಕ್ಕಳೇ

ಒಳ್ಳೆಯದನ್ನು ಮಾಡುವುದು ಕಷ್ಟ, ಕೆಟ್ಟದ್ದನ್ನು ಮಾಡುವುದು, ಹಾಳುಮಾಡುವುದು ಸುಲಭ. ಯಾವುದೇ ಒಂದನ್ನು ಸೃಷ್ಟಿ ಮಾಡುವುದು ಕಷ್ಟಮಾತ್ರವಲ್ಲ, ಸಾಕಷ್ಟು ಸಮಯಾವಕಾಶ ಬೇಕು. ನಾಶ ಮಾಡುವುದಕ್ಕೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ. ಬ್ರಹ್ಮನ ಹಲವಾರು ದಿನಗಳ, ತಿಂಗಳ, ವರ್ಷಗಳ ಸೃಷ್ಟಿಯನ್ನು ಕಾಲದೇವ ನಿಮಿಷಮಾತ್ರದಲ್ಲಿ ನೊಣೆದು ನುಂಗಿ ತೇಗಿಬಿಡುತ್ತಾನೆ. ತಾಯಿಯ ಗರ್ಭದಲ್ಲಿ ಅಂಕುರಿಸಿದ ಭ್ರೂಣ ಪೂರ್ಣ ಮಗುವಿನ ರೂಪದಲ್ಲಿ ಜನ್ಮತಳೆಯಲು ಒಂಭತ್ತು ತಿಂಗಳು ಬೇಕಾಗುತ್ತದೆ. ಬೆಳೆದು ದೊಡ್ಡವರಾಗಲು ಅನೇಕ ಹಂತಗಳನ್ನು ದಾಟಬೇಕಾಗುತ್ತದೆ. ವರ್ಷ ವರ್ಷಗಳನ್ನು ಕಳೆಯಬೇಕಾಗುತ್ತದೆ. ತಿಳಿಗೇಡಿಗಳು, ಕೊಲೆಗಡುಕರು, ಭಯೋತ್ಪಾದಕರು ಕ್ಷಣಮಾತ್ರದಲ್ಲಿ ಜೀವವನ್ನು ತೆಗೆದುಬಿಡುತ್ತಾರೆ.

ಪ್ರಾಕೃತಿಕ ಸಂಪತ್ತುಗಳು ರೂಪುಗೊಂಡು ಸಮೃದ್ಧವಾಗಿ ಬೆಳೆಯಲು ಕೋಟ್ಯಂತರ ವರ್ಷಗಳೇ ಬೇಕು. ಇಂತಹ ಪ್ರಕೃತಿ ಸಂಪನ್ಮೂಲಗಳನ್ನು ಮನುಷ್ಯ ತನ್ನ ದುರಾಸೆಯಿಂದ ಕೆಲವೇ ವರ್ಷಗಳಲ್ಲಿ ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದಾನೆ. ಒಕ್ಕಲು



ಇನ್ಫೋಸಿಸ್ ಕಂಪನಿಯ ಸಿಇಓ – ಸಲಿಲ ಪಾರೇಖ್

ಮಾಡಲು, ಹೊಲ, ಗದ್ದೆ, ತೋಟವನ್ನು ಅಭಿವೃದ್ಧಿಗೊಳಿಸಲು ಹಾಗೂ ಮನೆ, ಮಠ, ಸಂಸ್ಥೆ ಮುಂತಾದವನ್ನು ಕಟ್ಟಿ ಬೆಳೆಸಲು ಹೆಚ್ಚಿನ ಪರಿಶ್ರಮ ಬೇಕು, ಕಾಲಾವಕಾಶವೂ ಬೇಕೇ ಬೇಕು. ನಾಶಮಾಡಲು ಹೆಚ್ಚಿನ ಸಮಯ ಬೇಕಿಲ್ಲ. ಪ್ರವಾಹ, ಬರಗಾಲ, ಭೂಕಂಪ, ಸುನಾಮಿಯಂತಹ ಪ್ರಕೃತಿ ವಿಕೋಪಗಳು ಅಂತೆಯೇ ಮದ, ಮತ್ಸರ, ಮೋಹ, ಕಾಮ, ಕ್ರೋಧ ಮುಂತಾದ ದುರ್ಗುಣಗಳು ಕ್ಷಣಮಾತ್ರದಲ್ಲಿ ಎಲ್ಲವನ್ನೂ ಕೊಚ್ಚಿಕೊಂಡು ಹೋಗುವಂತೆ ಮಾಡಿಬಿಡುತ್ತವೆ.

ಕುಂಬಾರನಿಗೆ ಮಡಕೆಯನ್ನು ಮಾಡಲು ಸಾಕಷ್ಟು ಸಮಯ ಬೇಕು. ಆದರೆ ಅದೇ ಒಂದು ದೊಣ್ಣೆಯು ಕೇವಲ ಒಂದು ನಿಮಿಷದಲ್ಲಿ ಅದನ್ನು ಒಡೆದು ಬಿಡುತ್ತದೆ. ಈ ಗಾದೆಯ ಗೂಢಾರ್ಥವೆಂದರೆ ಜನರ ಮನದಲ್ಲಿ ವಿಶ್ವಾಸವನ್ನು ಗಳಿಸಲು ಅಥವಾ ಏನಾದರೂ ಸಂಪಾದಿಸಲು ಬಹಳಷ್ಟು ಕಷ್ಟಪಡಬೇಕಾಗುತ್ತದೆ. ಆದರೆ ಒಬ್ಬರ ವಿಶ್ವಾಸ ಮುರಿಯಲು ಯಾವುದಾದರೂ ಒಂದು ಘಟನೆ ಸಾಕು. ಅಂದರೆ ಒಬ್ಬರ ದೃಷ್ಟಿಯ ಮುಂದೆ ಮೇಲೇರಲು ಬಹಳಷ್ಟು ಕಷ್ಟವಾಗುತ್ತದೆ. ಆದರೆ ಅವರ ದೃಷ್ಟಿಯ ಮುಂದೆ ಕೆಳಗೆ ಬೀಳಲು ಕೆಲ ಕ್ಷಣಗಳು ಸಾಕು. ಉದಾಹರಣೆಗೆ ಒಬ್ಬ ಹುಡುಗನಿದ್ದ ಆತನ ಹೆಸರು ಸಚಿನ್. ಆತನು ಉತ್ತಮ ಚಿತ್ರಗಾರನಾಗಿದ್ದ. ಇಡೀ ಶಾಲೆಯಲ್ಲಿ ಆತನ ಚಿತ್ರಗಳ ಬಗ್ಗೆಯೇ ಚರ್ಚೆಯಾಗುತ್ತಿತ್ತು. ಹೀಗಿರಲು ಒಂದು ದಿನ ಅವನು ರೋಹಿತ್‌ನ ಬಳಿ ಬಣ್ಣದ ಪೆನ್ಸಿಲುಗಳನ್ನು ನೋಡಿದ. ಅದು ತನ್ನ ಬಳಿ ಇದ್ದರೆ ಚೆನ್ನಾಗಿ ಚಿತ್ರ ಬಿಡಿಸಬಹುದು ಎಂದು ಆಲೋಚಿಸಿ ಅವನ ಬಳಿ ಇದ್ದ ಬಣ್ಣದ ಪೆನ್ಸಿಲುಗಳನ್ನು ಕದಿಯುತ್ತಾನೆ ಹಾಗೂ ಈ ವಿಷಯ ಎಲ್ಲರಿಗೂ ತಿಳಿಯುತ್ತದೆ. ಅಧ್ಯಾಪಕರು ಅವನಿಗೆ ಶಿಕ್ಷೆಯನ್ನು ಕೊಡುತ್ತಾರೆ. ಸಚಿನ್ ತಂದೆಯ ಬಳಿ ಬಂದು ನಡೆದ ವಿಷಯವನ್ನು ಹೇಳುತ್ತಾನೆ. ಆಗ ತಂದೆಯು ಆತನ ಬಳಿ ನಿನ್ನ ಬಳಿಯಿರುವ ಉತ್ತಮವಾದ ಚಿತ್ರವನ್ನು ತರಲು ಹೇಳುತ್ತಾರೆ ಹಾಗೂ ಸಚಿನ್ ಅದನ್ನು ತಂದ ಬಳಿಕ ಆ ಸುಂದರವಾದ ಚಿತ್ರದ ಮೇಲೆ ಕಪ್ಪಿನ ಚುಕ್ಕೆಯನ್ನು ಹಾಕುತ್ತಾರೆ. ಆಗ ಮಗನು ಯಾಕೆ ಈ ರೀತಿ ಮಾಡಿದ್ದೀರಿ ಎಂದು ಕೇಳಲು ನಿನಗೆ ಈ ಇಡೀ ಚಿತ್ರ ಬಿಡಿಸಲು ಎಷ್ಟೊಂದು ಸಮಯ ಬೇಕಾಯಿತು. ಆದರೆ ನೀನು ಮಾಡಿದ ಒಂದು ಕಳ್ಳತನ ನಿನ್ನ ಜೀವನದಲ್ಲಿ ಇದೇ ರೀತಿ ಕಪ್ಪು ಚುಕ್ಕೆಯಾಗಿದೆ. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬ ಗಾದೆಮಾತಿದೆ. ಅದೇ ರೀತಿ ನಿನ್ನ ಖ್ಯಾತಿಯು ಕಳ್ಳತನದಿಂದಾಗಿ ಮಸುಕಾಗಿ ಹೋಯಿತು ಎಂದಾಗ ಮಗನಿಗೆ ತನ್ನ ತಪ್ಪಿನ ಮನವರಿಕೆಯಾಯಿತು.

## ಔಷಧೀಯ ಸಸ್ಯ ಸಂಪತ್ತು

**ಆಡು ಸೋಗೆ**

ರಕ್ತ ಉಗುಳುವಿಕೆಗೆ

ಲೇ : ಶ್ರೀ ಪಿ. ಎಸ್. ವೆಂಕಟರಾವ್ ದೈತೋಟ.



**ಹೆಸರುಗಳು:**

ಕನ್ನಡ: ಆಡುಸೋಗೆ, ಅಡ್ಡಸರ, ಅಡ್ಡಲಸ,
ಆಡು ಮುಟ್ಟದ ಸೊಪ್ಪು; ಕರ್ಾಡ: ಆಡ್ಲೋಡು;
ತುಳು: ಆಡ್‌ಲೋಡು, ಏಡ್ ಮುಟ್ಟಂದಿ ಸಪ್ಪು;
ಮರಾಠಿ: ಅಡುಳ್‌ಸ; ಮಲಯಾಳಂ: ಆಟಲೋಟಕಂ;
ತಮಿಳು: ಆಡದೊಡ್ಡೈ; ಹಿಂದಿ: ಅರೂಷ;
ತೆಲುಗು: ಅಡಸಾರಮು; ಸಂಸ್ಕೃತ: ವಾಸಾ;
ಇಂಗ್ಲಿಷ್: ;
ಸಸ್ಯಶಾಸ್ತ್ರೀಯ: *Justicia adhatoda* L.
ಕುಟುಂಬ: Acanthaceae;
ಉಪಯೋಗ: ಪಂಚಾಂಗಗಳು ಜೊತೆಯಾಗಿ
ಹಾಗೂ ಪ್ರತ್ಯೇಕವಾಗಿ.

**ಮೂಲಿಕಾ ಪರಿಚಯ**

ಹೆಸರಾಂತ ಆಯುರ್ವೇದೀಯ ಮೂಲಿಕೆ. ರಾಸಾಯನಿಕ ಗೊಬ್ಬರಕ್ಕಿಂತ ಹೆಚ್ಚು ಪೋಷಕಾಂಶ ನೀಡಬಲ್ಲ ಹಸುರೆಲೆ ಗೊಬ್ಬರದ ಗಿಡ. ಪರಿಣಾಮಕಾರಿ ಕೀಟ ನಿವಾರಕ ಸಸ್ಯ. ಉತ್ತಮ ಗುಣದ ಇದ್ದಲಿ ಹಾಗೂ ಇಂಧನವಾಗಬಲ್ಲ ಕ್ಷುಪ. ಇವೆಲ್ಲ ಹೆಗ್ಗಳಿಕೆಯನ್ನು ಪಡೆದುದೇ ಹಿತ್ತಲ ಬೇಲಿಯ 'ಆಡುಸೋಗೆ'. ಎಲ್ಲಾ ವಿಧದ ಭೂಮಿಗಳಲ್ಲೂ ಕಾಣಿಸುವ ಬಿಳಿ ಹೂಗಳ ಸಾಮಾನ್ಯ ಸಸ್ಯ. ಹಿಮಾಲಯದ ಕೆಳತಪ್ಪಲು ಹಾಗೂ ದಕ್ಷಿಣದ ಕರಾವಳಿಯಲ್ಲಿ ಸಾಕಷ್ಟು ಬೆಳೆಯುತ್ತದೆ. ಗೋರಟೆ ವರ್ಗಕ್ಕೆ ಸೇರಿದ ಚಿಕ್ಕ ಮರವೆಂದರೂ ಸರಿ. 'ಸರ್ವ ಸಸ್ಯಭಕ್ಷಕ' ಆಡು ಇದನ್ನು ಮೂಸಿ ಕೂಡ ನೋಡದು. ಔಷಧ ರೂಪದಲ್ಲಾದರೂ ಇದರ



ಓ ಸಿ ಎಸ್ ಕಂಪನಿಯ ಸಿಇಓ – ರಾಜೇಶ್ ಗೋಪಿನಾಥನ್

ಸೇವನೆಯಾದರೆ ಸಂತಾನಶಕ್ತಿಯನ್ನೇ ಕಳಕೊಳ್ಳುತ್ತವೆಂಬುದು ಹಿರಿಯರ ಅನುಭವ. ಇದರಿಂದಲೇ ಆಡುಗಳ ಸಂಖ್ಯೆ ಹೆಚ್ಚಾದಲ್ಲಿ ಇದರ ಬೇಲಿಯ ಬಳಕೆ ಬಂದಿದೆ. ಮಣ್ಣು ಸವೆತ ತಡೆಯುವುದು. ಶ್ವಾಸಕೋಶಕ್ಕೆ ಸಂಬಂಧಿಸಿದ ಉಬ್ಬಸ, ಕ್ಷಯ, ಉರಃಕ್ಷತ ಮೊದಲಾದವುಗಳಿಗೆ, ರಕ್ತಪಿತ್ತ, ವಾಂತಿ, ಚರ್ಮರೋಗಗಳಿಗೆ ಆಯುರ್ವೇದದಲ್ಲಿ ಪ್ರಮುಖ ಔಷಧ. ಸಿದ್ಧ ಪದ್ಧತಿಯಲ್ಲೂ ಬಳಕೆಯಿದೆ. ಹೆಚ್ಚಿನ 'ಕೆಮ್ಮು ಸಿರಪ್'ಗಳಲ್ಲಿ ಇದರ ಸತ್ವ ಸೇರಿದೆ. ಬೇರಿನ ತೊಗಟೆ, ಎಲೆಗಳಲ್ಲಡಗಿದ 'ವಾಸಿಸಿನ್' ಇದರ ಔಷಧವಸ್ತು ಸಾರ. ಜಾನುವಾರು ಔಷಧವಾಗಿಯೂ ಈ ಸಸ್ಯ ಬಳಕೆಯಾಗುತ್ತದೆ. ಎಲೆಗಳ ವಿಷಸಾರ ಧಾನ್ಯಗಳಿಗೆರಗುವ ಕೀಟ ನಿವಾರಕವೆಂದೂ ಮನುಷ್ಯರಿಗೆ ಅಪಾಯರಹಿತವೆಂದೂ ಸಿದ್ಧವಾಗಿದೆ. ಸಸ್ಯದ ಚಿಕ್ಕ, ದೊಡ್ಡ ಎರಡು ಭೇದಗಳೂ ಔಷಧಕ್ಕಾಗುತ್ತವೆ. ಸಾಮಾನ್ಯ ಎಲೆಹೋಲಿಕೆಯ ಇದೇ ವರ್ಗದ ಬೇರೆ ಸಸ್ಯಗಳೂ ಇವೆ.

**ಉಪಯೋಗಗಳು**

**ರಕ್ತ ಷ್ಠೀವನಕ್ಕೆ:** (ಲಕ್ಷಣಗಳು: ಬಳಲಿಕೆ, ಸೂಸುಗೆಮ್ಮು, ಉಗುಳಿದಾಗ ರಕ್ತಛಾಯೆ) ಆಡುಸೋಗೆ ಎಲೆಗಳನ್ನು ಕೆಂಡದಲ್ಲಿ ಬಾಡಿಸಿ, ಉಗಿಯಲ್ಲಿ ಬೇಯಿಸಿ ಹಿಂಡಿದ ರಸ 4 ಚಮಚ, 2 ಚಮಚ ಜೇನಿನೊಂದಿಗೆ ಕಲಸಿ ಬೆಳಿಗ್ಗೆ ಬರಿಹೊಟ್ಟೆಯಲ್ಲಿ ಸೇವನೆ, 2 ವಾರ.

ಸೂಚನೆ: ಎಲ್ಲಾ ವಿಧದ ಕೆಮ್ಮುಗಳಿಗೂ ಇದೇ ಚಿಕಿತ್ಸೆ ಪರಿಣಾಮಕಾರಿ. 3–6 ದಿನ.

**ಯಾವುದೇ ವಿಧದ ರಕ್ತಸ್ರಾವಕ್ಕೆ:** ಮೇಲಿನಂತೆಯೇ ತಯಾರಿಸಿದ ಎಲೆಯ ಸ್ವರಸ 10 ಚಮಚ, 1 ಚಮಚ ತೇದ ಶ್ರೀಗಂಧ, 4 ಚಮಚ ಕಲ್ಲುಸಕ್ಕರೆ ಪುಡಿ ಕದಡಿ ಬೆಳಿಗ್ಗೆ ಸೇವನೆ. 3 ದಿನ.

ಸೂಚನೆ: ಗಾಯಗಳ ರಕ್ತಸ್ರಾವಕ್ಕೆ ಒಮ್ಮೆ ಮಾತ್ರ ಸಾಕಾಗುವುದು.

ಸುಂದರಕಾಂಡದ ಸೌಂದರ್ಯ

# ಶ್ರೀ ವೀರಾಂಜನೇಯ

**ಲೇ: ರಾಮಕೃಷ್ಣ ಎನ್. ಹೆಗಡೆ**

ವಾಯುಪುತ್ರನಾದ ಹನುಮಂತನು ಲಂಕೆಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಶ್ರೀರಾಮ ಮತ್ತು ಲಕ್ಷ್ಮಣರಿಗೆ ವಿವರಿಸಿ ಹೇಳುತ್ತಾನೆ. ಹಾಗೆಯೇ ತಾನು ಕಂಡಿರುವುದು ಸತ್ಯವೆನ್ನುವ ಗುರುತಿಗಾಗಿ ಸೀತೆಯು ನೀಡಿರುವ ಚೂಡಾಮಣಿಯನ್ನು ಶ್ರೀರಾಮನಿಗೆ ಸಮರ್ಪಣೆ ಮಾಡುತ್ತಾನೆ. ಬುದ್ಧಿವಂತನಾದ ಹನುಮಂತನು ತನ್ನ ಮಾತಿನ ಚಾತುರ್ಯ ಹಾಗೂ ಕೃತಿಗಳಿಂದ ತನ್ನ ಸ್ವಾಮಿಯನ್ನು ಮೆಚ್ಚಿಸುವ ಜೊತೆಗೆ ಅಮೂಲ್ಯವಾದ ಗುರುತಿನ ವಸ್ತುವನ್ನು ಕೂಡ ತನ್ನ ಜೊತೆಗೆ ತಂದಿರುವುದು ವಿಶೇಷ. ಇಂತಹ ವಿಶೇಷ ಸಂದರ್ಭವನ್ನು ಸುಂದರಕಾಂಡದಲ್ಲಿ ವಾಲ್ಮೀಕಿ ಮಹರ್ಷಿಗಳು ಸುಂದರವಾಗಿ ವರ್ಣಿಸುತ್ತಾರೆ.

ತೌ ಜಾತಾಶ್ವಾಸಾ ರಾಜಪುತ್ರಾ ವಿದಿತ್ವಾ
ತಚ್ಚಾಭಿಜ್ಞಾನಂ ರಾಘವಾಯ ಪ್ರದಾಯ।
ದೇವ್ಯಾಚಾಖ್ಯಾತಂ ಸರ್ವಮೇವಾಸು ಪೂರ್ವ್ಯಾತ್
ವಾಚಾ ಸಂಪೂರ್ಣಂ ವಾಯುಪುತ್ರಃ ಶಶಂಸ॥

ಪ್ರಾರಂಭದಲ್ಲಿ ಹನುಮಂತನು ರಾಮ–ಲಕ್ಷ್ಮಣರಲ್ಲಿ ಹೇಳಬೇಕಾದ ವಿಷಯವನ್ನು ತನ್ನ ಮಾತಿನ ಚಾತುರ್ಯದಿಂದ ನಂಬಿಕೆ ಬರುವಂತೆ ವಿವರಿಸಿ ಹೇಳುತ್ತಾನೆ. ಹಾಗೆಯೇ ತಾನು ಸೀತೆಯ ಕುರಿತಾಗಿ ಹೇಳಿರುವ ಮಾತುಗಳು ವಿಶ್ವಾಸವನ್ನುಂಟುಮಾಡಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳುತ್ತಾನೆ. ತಾನು ಹೇಳಿರುವ ಎಲ್ಲಾ ಮಾತುಗಳಿಗೂ ಪುಷ್ಠಿ ಬರುವಂತೆ ಅಭಿಜ್ಞಾನ ರೂಪವಾಗಿರುವ ಚೂಡಾಮಣಿಯನ್ನು ನೀಡುತ್ತಾನೆ. ಹನುಮಂತನು ಸೀತೆಯ ಕುರಿತಾಗಿ ಆಡಿರುವ ಮಾತುಗಳು, ಸೀತೆಯ ಸಂದೇಶ ಹಾಗೂ ಈ ಚೂಡಾಮಣಿ ಇವೆಲ್ಲವುಗಳಿಂದ ಸೀತೆಯ ಕುರಿತಾಗಿ ಶ್ರೀರಾಮನು ಹೀಗೆ ಚಿಂತಿಸುತ್ತಾನೆ.

ಸೀತೆಯು ದೂರದ ಪ್ರದೇಶದಲ್ಲಿದ್ದರೂ ಕೂಡ ಈ ಚೂಡಾಮಣಿಯನ್ನು ಭದ್ರವಾಗಿ ಇಟ್ಟುಕೊಂಡಿದ್ದಾಳೆ. ಹಾಗೆಯೇ ಅದನ್ನು ಯೋಗ್ಯವಾದ ವ್ಯಕ್ತಿಯ ಮೂಲಕವಾಗಿ ನನಗೆ ತಲುಪಿಸಿ ಅವಳ ನೆನಪು ಇನ್ನಷ್ಟು ಹೆಚ್ಚುವಂತೆ ಮಾಡಿರುವಳು. ಹೀಗೆ ಸೀತೆಯ ನೆನಪನ್ನು ಮಾಡಿಕೊಳ್ಳುತ್ತಾ ಶ್ರೀರಾಮನು ಅಳುವುದಕ್ಕೆ ಪ್ರಾರಂಭಿಸುತ್ತಾನೆ.

ಏವಮುಕ್ತೋ ಹನುಮತಾ ರಾಮೋ ದಶರಥಾತ್ಮಜಃ।
ತಂ ಮಣಿಂ ಹೃದಯೇ ಕೃತ್ವಾ ಪ್ರರುದೋದ ಸಲಕ್ಷ್ಮಣಃ॥

ಅಂದರೆ ಅತಿಯಾದ ಸೀತೆಯ ನೆನಪಿನಿಂದಾಗಿ ಶ್ರೀರಾಮನು ಆ ಚೂಡಾಮಣಿಯನ್ನು ಎದೆಗಪ್ಪಿಕೊಂಡು ಲಕ್ಷ್ಮಣನೊಂದಿಗೆ ಅಳತೊಡಗಿದನು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಶ್ರೀರಾಮನು ಅವತಾರ ಪುರುಷನಾಗಿದ್ದಾನೆ ಆದರೆ ಮನುಷ್ಯಸಹಜವಾದ ಗುಣಗಳಿಂದಲೇ ಕಂಡುಬಂದಿದ್ದಾನೆ. ದುಃಖದ ಸಮಯದಲ್ಲಿ ಮನುಷ್ಯನಿಗೆ ಅಳು ಬರುವುದು ಸಹಜ. ಇಲ್ಲಿ



ಬಿ ಇ ಎಲ್ ನ ಸಿಇಓ – ಎಮ್.ವಿ. ಗೌತಮ್

ಅವತಾರ ಪುರುಷನಾಗಿರುವ ಶ್ರೀರಾಮನೂ ಕೂಡ ಸಾಮಾನ್ಯ ಮನುಷ್ಯರಂತೆ ಅಳುತ್ತಿರುವುದು ವಿಶೇಷವಾಗಿದೆ. ಮಾನವನಾಗಿ ಬಂದ ಮೇಲೆ ಮಾನವಸಹಜವಾದ ಗುಣಗಳೂ ಆವರಿಸುತ್ತವೆನ್ನುವುದನ್ನು ಇದರಿಂದ ತಿಳಿಯಬಹುದಾಗಿದೆ. ಈ ಚೂಡಾಮಣಿಯ ವಿಷಯವಾಗಿ ಇನ್ನಷ್ಟು ವಿಷಯಗಳು ಇಲ್ಲಿ ಕಂಡುಬರುತ್ತವೆ.

ಯಥೈವ ಧೇನುಃ ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ।
ತಥಾ ಮಮಾಪಿ ಹೃದಯಂ ಮಣಿರತ್ನಸ್ಯ ದರ್ಶನಾತ್॥

ವಾತ್ಸಲ್ಯಮಯಿಯಾದ ಹಸುವು ತನ್ನ ಕರುವನ್ನು ಕಂಡೊಡನೆ ಹಾಲನ್ನು ಸ್ರವಿಸುವಂತೆ ಅತ್ಯುತ್ತಮವಾಗಿರುವ ಈ ಚೂಡಾಮಣಿಯನ್ನು ಕಂಡೊಡನೆ ಶ್ರೀರಾಮನ ಹೃದಯವು ದ್ರವಿಸುವುದಕ್ಕೆ ಪ್ರಾರಂಭಿಸಿತು. ಸೀತೆಯು ದೂರದ ಲಂಕೆಯಲ್ಲಿದ್ದರೂ ಸಹ ಚೂಡಾಮಣಿಯ ಆಗಮನದಿಂದಾಗಿ ತುಂಬಾ ಹತ್ತಿರವಾದಂತಾಯಿತು. ಮಾವನಾದ ಜನಕ ಮಹಾರಾಜನು ಸೀತೆಯ ವಿವಾಹದ ಸಮಯದಲ್ಲಿ ಅವಳ ತಾಯಿಯ ಮೂಲಕವಾಗಿ ತಂದೆಯಾದ ದಶರಥನ ಎದುರಿಗೆ ಅವಳಿಗೆ ತೊಡಿಸಿದ್ದನು. ಇಂತಹ ಚೂಡಾಮಣಿಯನ್ನು ಅವಳು ಶಿರಸ್ಸಿನಲ್ಲಿ ಧರಿಸಿದಾಗ ಆ ಮಣಿಯ ಶೋಭೆಯು ಇನ್ನೂ ಹೆಚ್ಚಾಗಿತ್ತು.

**ಮುಂದುವರೆಯುವುದು...**

## ಸಂದೇಶ

ಲೇ: ಎಂ. ಎಸ್. ಮಂಜುಳ, ರಾಮ್‌ಪುರ.



ಅಂಚೆಯ ಅಣ್ಣ ಬರುತ್ತಿದ್ದ ಅಜ್ಜನ ನಮ್ಮಪ್ಪನ ಕಾಲಕ್ಕೆ,
ಇನಿಯನ ಒಲವಿನ ಓಲೆ, ಮಕ್ಕಳ ಮನಿಯಾರ್ಡರಿನ ನಿರೀಕ್ಷೆಯಲಿ,
ಮಧ್ಯಾನ್ಹ ಸುಡು ಬಿಸಿಲಿನ ಸಮಯ, ಅಂಚೆಯ ಅಣ್ಣ ಕುಶಲವಾ.. ಕ್ಷೇಮವಾ.,
ಎಂಬ ಓಲೆಯ ಹಿಡಿದು..ಮನೆಯಂಗಳವ ಮೆಟ್ಟಿದರೆ.. ಮನೆಮಂದಿಯೆಲ್ಲಾ
ಓಡಿ ಬರುವರು ಕಾತುರದಿ! ಅಂಚೆಯ ಅಣ್ಣ.. ಬಂದಿಹನಣ್ಣ ಅನ್ನುವರು ಹರುಷದಿ!



ಇನಿಯನ ಒಲವಿನ ಪತ್ರ..
ಎದೆಯಾಳದಲಿ ಬಚ್ಚಿಟ್ಟು.. ಕದ್ದು ಮುಚ್ಚಿ.. ರಾತ್ರಿ,
ಬಿಚ್ಚಿದಾಗ.. ನವಿರಾಗಿ ತನು ಬೆವರಿತು.. ಸ್ವಪ್ನಲೋಕದಲಿ ತೇಲಿ!
ಮಕ್ಕಳ ಮೊಮ್ಮಕ್ಕಳ ನಗು.. ಅಳು.. ತುಂಟಾಟ.. ಪುಂಢಾಟ,
ಎಲ್ಲದರ ವರ್ಣನೆಯ.. ಜೊತೆಗೆ.. ಅಪ್ಪ ಅಮ್ಮನಿಗೆ ಮನಿಯಾರ್ಡರ್ ಬಂದ ಕ್ಷಣ..
ಮುದಿಮನಸುಗಳು ಅರಳಿದವು ..ಒಡಲ ಕುಡಿಗಳ ನೆನೆದು.. ಮತ್ತೆ ಕಾದರು..
ಅಂಚೆಯ ಅಣ್ಣನ ನೆನಪಲಿ ಬರುವ ಮತ್ತೊಂದು ಸಂದೇಶಕ್ಕಾಗಿ!

ಅದೇ ಈಗ ಜಾಗತೀಕರಣದ ಸುಂಟರಗಾಳಿಯಲಿ,
ತೇಲಿಬಂದವು ಕ್ಷಣ ಕ್ಷಣಕೂ.. ವಾಟ್ಸಪ್ಗಳೂ..ಟ್ವಿಟ್ಟರ್ಗಳೂ.. ಫೇಸ್ಬುಕ್ಗಳೂ!
ಮರೆತೇ ಹೋಯಿತು ಓಲೆಯ ಕಲೆ! ಕನ್ನಡ ಭಾಷೆಯ ಸೊಗಡು..?
ಸೋಷಿಯಲ್ ಮೀಡಿಯಾದ ಅಬ್ಬರದಲಿ..ಕೊಚ್ಚಿಹೋಯಿತು ತಾಯಿಬೇರಿನಭಾಷೆ..
ಹುಟ್ಟಿದಾ ಕಂದನಿಗೂ ಮೊಬೈಲ್ ಆಸೆ! ಫಿನಿಕ್ಸ್ ಪಕ್ಷಿಯಂತೆ ಪುಟಿದೇಳಲಿ.. ಎದೆಯಾಳದಲಿ ಕನ್ನಡದಭಾಷೆ!

## ಆಮಂತ್ರಣ

ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರ ಜನ್ಮದಿನದಂದು ನಾಣ್ಯ ತುಲಾಭಾರ ಸೇವೆ ನಡೆಯಲಿದೆ ಹಾಗೂ ಇದೇ ಸುಸಂದರ್ಭದಲ್ಲಿ ಶ್ರೀ ದೇವರಿಗೆ ಫಲಪಂಚಾಮೃತಾಭಿಷೇಕ, ಸ್ವರ್ಣಾಭರಣ ಪೂಜೆ, ರುದ್ರಾಭಿಷೇಕ ಹಾಗೂ ವಿಶೇಷ ಸೇವೆಗಳು ನಡೆಯಲಿದೆ. ಸರ್ವಭಕ್ತಾದಿಗಳು ಸಹ ಈ ಸೇವೆಗಳಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

~ ಸರ್ವರಿಗೂ ಆದರದ ಸ್ವಾಗತ ~

ದಿನಾಂಕ : 09-02-2019, ಶನಿವಾರ.
ಸ್ಥಳ : ಶ್ರೀಕ್ಷೇತ್ರ ಬಂಗಾರಮಕ್ಕಿ.

**ಸೇವಾರ್ಥಿಗಳು : ಶ್ರೀ ಆರ್. ವೆಂಕಟೇಶಲು (ಬಳ್ಳಾರಿ ಮಾಸ್ತ್ರು) ಮತ್ತು ಕುಟುಂಬದವರು, ಬಳ್ಳಾರಿ.**



ಫೇಸ್ ಬುಕ್ ಕಂಪನಿಯ ಸಿಇಓ – ಮಾರ್ಕ್ ಜುಗರಬರ್ಗ

# ನಾಲಿಗೆ ವಶದಲ್ಲಿದ್ದರೆ ಲೋಕವೇ ವಶ

(ಸಂಗ್ರಹ) ಎಂ. ಚನ್ನಕೇಶವಪ

"ಅನುದ್ವೇಗಕರಂ ವಾಕ್ಯಂ, ಸತ್ಯಂಪ್ರಿಯಹಿತಂಚಯಾತ್", ಅಂದರೆ ಇತರರಿಗೆ ನೋವು ಕೊಡದಂಥ, ಸತ್ಯವಾದ, ಹಿತವಾದಮಾತುಗಳನ್ನೇ ಆಡುವುದು, ಇಂತಹವರಿಂದ ಮಾತನಾಡಲ್ಪಡುವಿಕೆ ಒಂದು ರೀತಿ ತಪಸ್ಸೇ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಒಳ್ಳೆಯದೋ ಕೆಟ್ಟದ್ದೋ ಅದು ನಮ್ಮ ನಡತೆಯಿಂದ ಇತರರ ಅವಗಾಹನೆಗೆ ಬರುವುದು. ನಮ್ಮ ಮಾತಿನಿಂದಲೇ ನಮ್ಮ ನಾಲಿಗೆ ಎರಡು ರೀತಿ ಕೆಲಸಕ್ಕೆ ಬರುತ್ತದೆ. ಮೊದಲನೆಯದು ನಮ್ಮನ್ನು ಆರೋಗ್ಯವಾಗಿಡಲು, ಬೇಕಾದ ಆಹಾರ ರುಚಿ ನೋಡಿ ಅರಗಿಸಿಕೊಳ್ಳಲು, ಎರಡನೆಯದಾಗಿ ಪರಮಾತ್ಮನನ್ನು ಭಕ್ತಿಯಿಂದ ಜಪಿಸಿ, ಪಠಿಸಿ ಧನ್ಯತೆ ಪಡೆಯಲು.

ಪ್ರಿಯವಾದ ಮಾತುಗಳು ಯಾವಾಗಲೂ ಅಮೃತಧಾರೆಯಂತೆ ಅಂತಃ ಸುಖ ಕೊಡುತ್ತದೆ. ನಾಲಿಗೆ ಯಾರು ವಶದಲ್ಲಿಟ್ಟುಕೊಳ್ಳುವರೋ, ಅವರಿಗೆ ಲೋಕವೇ ವಶದಲ್ಲಿರುತ್ತದೆ.

"ಲೋಕವಾರ್ತಾನುಗಮನೇ ಜಿಹ್ವಾಪ್ಯೆಕುಸಹಸ್ರಧಾ
ಈಶವಾರ್ತಾನುಗಮನೇ ದ್ವಾತ್ರಿಂಶದ್ದಂತಕೀಲಿತಾ"

ಅಂದರೆ ಲೌಕಿಕ ವಿಷಯಗಳನ್ನು ಮಾತನಾಡುವಾಗ ನಾಲಿಗೆ ನೂರಾರು ರೂಪವಾಗಿ ವಿಜೃಂಭಿಸುತ್ತೆ, ಅದೇ ಭಗವಂತನ ಬಗ್ಗೆ ಹೇಳಬೇಕೆಂದರೆ ಮೂವತ್ತೆರಡು ಹಲ್ಲುಗಳ ಮಧ್ಯ ಬಚ್ಚಿಟ್ಟುಕೊಳ್ಳುವುದು. ಒಳ್ಳೆಯ ಮಾತುಗಳು ಚಂದ್ರನ ಶೀತಲಕ್ಕಿಂತಲೂ, ತಂಪು ನೀರಿಗಿಂತಲೂ, ಮರದ ನೆರಳಿಗಿಂತಲೂ ಮನಸ್ಸನ್ನು ಆಹ್ಲಾದಪಡಿಸುತ್ತದೆ, ಆದುದರಿಂದಲೇ ನಮ್ಮ ಜೀವನದಲ್ಲಿ "ವಾಗ್ಭೂಷಣಂ ಭೂಷಣಮ್" ಎಂದಿದ್ದಾರೆ ಭರ್ತೃಹರಿ. ಚರಾಚರ ಜೀವರಾಶಿಗಳಲ್ಲಿ ಈ ವಾಕ್ ಸಂಪತ್ತಿನಿಂದಾಗಿ ಮಾನವಜನ್ಮ ಅಮೂಲ್ಯ ಮತ್ತು ಉತ್ಕೃಷ್ಟ ಜನ್ಮವೆಂದು ಭಾವಿಸಲಾಗಿದೆ.

"ಪ್ರಿಯವಾಕ್ಯಪ್ರದಾನೇನ ಸರ್ವೇತುಷ್ಯಂತಿ ಜಂತವಃ"
ಒಳ್ಳೆಯ ಮಾತನ್ನಾಡುವುದರಿಂದ ಎಲ್ಲರೂ ಸಂತೋಷಪಡುತ್ತಾರೆ.
"ಮನಸಃ ಆನಂದಕಾರಕಂ ವಾಕ್ಯಂ ಪ್ರಿಯವಾಕ್ಯಂ ಭವತಿ"
ಮನಸ್ಸಿಗೆ ಆನಂದಕರವಾದ ಮಾತೇ ಪ್ರಿಯವಾಕ್ಯ ಎನಿಸಿಕೊಳ್ಳುತ್ತದೆ.

ಒಳ್ಳೆಯ ಮನುಷ್ಯನು ತನ್ನ ಅಂತರಂಗದ ಒಳಿತಿನ ಭಂಡಾರದಿಂದ ಒಳಿತನ್ನು ಹೊಮ್ಮಿಸುತ್ತಾನೆ, ಕೆಟ್ಟ ಮನುಷ್ಯನು ತನ್ನ ಅಂತರಂಗದ ಕೆಡುಕಿನ ಭಂಡಾರದಿಂದ ಕೆಟ್ಟ ಮಾತುಗಳನ್ನು ಹೊಮ್ಮಿಸುತ್ತಾನೆ.

"ಹೊಲಬನರಿಯದ ಮಾತು ತಲೆಬೇನೆ ಇದ್ದಂತೆ
ಹೊಲಬರಿತು ಒಂದು ನುಡಿದರೆ ಅದು ದಿವ್ಯ ಫಲಪಕ್ವದಂತೆ ಸರ್ವಜ್ಞ"

ಎಂದಿದ್ದಾರೆ ಸರ್ವಜ್ಞರು.

ನಾವು ಮತ್ತೊಬ್ಬರಿಗೆ ಮಾತಿನಿಂದ ನೆಮ್ಮದಿ, ಸಂತೋಷ ನೀಡಿದರೆ ಅವು ಹತ್ತುಪಟ್ಟು ನಮ್ಮನ್ನು ಸೇರುತ್ತವೆ. ಸಂತೋಷವೆಂಬುದು ಖರೀದಿಸುವುದಲ್ಲ. ಅದು ನಮ್ಮ ಮಾತು, ವರ್ತನೆಯಿಂದ ಸ್ಫುರಿಸುವಂಥದ್ದು. ಇದನ್ನು ಮನಗಂಡೇ ಡಿ.ವಿ.ಜಿ.ಯವರು,

"ನಗು ಮನದಿ ಲೋಗರ ವಿಕಾರಂಗಳನು ನೋಡಿ।
ಬಿಗಿ ತುಟಿಯ ದುಡಿವಂದು, ನೋವಪಡುವಂದು॥
ಪೊಗು, ವಿಶ್ವಜೀವನದ ಜೀವಾಂತರಂಗದಲಿ।
ನಗುನಗುತ ಬಾಳ್, ತೆರಳು–ಮಂಕುತಿಮ್ಮ॥

ಎಂದಿದ್ದಾರೆ. "ನುಡಿದರೆ ಮುತ್ತಿನಹಾರದಂತಿರಬೇಕು" ಎಂದು ಬಸವಣ್ಣನವರು ಹೇಳಿದ್ದಾರೆ. ಶುದ್ಧನಡತೆ, ಸವಿಮಾತು ಅದರಂತೆ ಆಚರಣೆಯೇ ಜೀವನದ ಪವಿತ್ರತೆ. ಈ ಸತ್ಯ ಅರಿತು ಮುತ್ತಿನಂಥ ಮಾತುಗಳನ್ನು ಆಡುತ್ತಾ ನಮ್ಮ ನಮ್ಮ ಜೀವನ ಸಾರ್ಥಕಗೊಳಿಸೋಣ.

## ಜ್ವರ ಬಂದಾಗ



* ದಂಟಿನ ಸೊಪ್ಪಿನ ಸಾರನ್ನು ಜ್ವರ ಬಂದವರು ಸೇವಿಸಿದರೆ ಬೇಗ ಗುಣಮುಖರಾಗುವರು.
* ತುಳಸಿ ರಸದಲ್ಲಿ ಕಾಳುಮೆಣಸಿನ ಚೂರ್ಣವನ್ನು ಬೆರೆಸಿ ಸೇವಿಸುವುದರಿಂದ ಜ್ವರ ನಿಲ್ಲುವುದು.
* ಬೇವಿನ ಮರದ ಒಣ ತೊಗಟೆಯನ್ನು ನೀರಿನಲ್ಲಿ ಕುದಿಸಿ, ಕಷಾಯಮಾಡಿ, ಪ್ರತಿದಿನವೂ ಸೇವಿಸುತ್ತಿದ್ದರೆ ಜ್ವರ ಕಡಿಮೆ ಆಗುವುದು
* ಮೆಣಸಿನ ಕಷಾಯವನ್ನು ಕನಿಷ್ಠ ಪ್ರಮಾಣದಲ್ಲಿ ಜೇನುತುಪ್ಪ ಬೆರೆಸಿ ಉಪಯೋಗಿಸುತ್ತಿದ್ದರೆ ಜ್ವರ ನಿಲ್ಲುವುದು.



ಐಫೋನ್ ಕಂಪನಿಯ ಸಿಇಓ – ಟೀಮ್ ಕುಕ್

# ಅಭಿನಂದನೆಗಳು



ಶ್ರೀ ಮಾರುತಿ ರೆಸಿಡೆನ್ಶಿಯಲ್ ಸ್ಕೂಲ್‌ನ ವಿದ್ಯಾರ್ಥಿಗಳು ಜನವರಿ 17, 18 ಮತ್ತು 19 ರಂದು ಹುಬ್ಬಳ್ಳಿಯಲ್ಲಿ 'ಅಗಸ್ತ್ಯ ಜಾಗತಿಕ ಸಂಸ್ಥೆ' ಏರ್ಪಡಿಸಿದ ರಾಷ್ಟ್ರ ಮಟ್ಟದ ವಿಜ್ಞಾನ ಮಾದರಿ ರಚನೆ ಸ್ಪರ್ಧೆ 'ಜಿಜ್ಞಾಸ 2019' ರಲ್ಲಿ ಭಾಗವಹಿಸಿದ್ದು, ಕಿರಿಯ ವಿಭಾಗದಲ್ಲಿ ಕು. ತನ್ಮಯ ನಾಯ್ಕ ಮತ್ತು ಕು. ಸೌರಭ ಹೆಗಡೆ 'Micro Hydro Generator'('ಸೂಕ್ಷ್ಮ ಜಲವಿದ್ಯುತ್ ಘಟಕ') ಹಾಗೂ ಹಿರಿಯರ ವಿಭಾಗದಲ್ಲಿ ಕು. ಶ್ರೀನಿಧಿ ಪೈ, ಕು. ರಿಶಾ ಪಿಂಟೊ 'Plasto Tiles' ಎನ್ನುವ ಮಾದರಿಗಳನ್ನು ಪ್ರದರ್ಶಿಸಿದರು. ಇವುಗಳಲ್ಲಿ ಕಿರಿಯರ ವಿಭಾಗದ ವಿಜ್ಞಾನ ಮಾದರಿ 'ಸೂಕ್ಷ್ಮ ಜಲವಿದ್ಯುತ್ ಘಟಕ' ವಿಶೇಷ ಬಹುಮಾನವನ್ನು ಹಾಗೂ ಪ್ರಶಸ್ತಿ ಮೊತ್ತ 3000/– ಪಡೆದುಕೊಂಡಿದೆ. ಈ ಸಾಧನೆಗೆ ಸಹಕರಿಸಿದ ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ ಬಿ. ಕೆ. ಹಾಗೂ ಪಾಲಕರ ಸಂಘದ ಉಪಾಧ್ಯಕ್ಷರಾದ ಶ್ರೀ ನರೇಂದ್ರ ನಾಯ್ಕರನ್ನು ಹಾಗೂ ಮಕ್ಕಳನ್ನು ಆಡಳಿತ ಮಂಡಳಿ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು, ಶಾಲಾ ಆಡಳಿತ ಮಂಡಳಿ, ಕಾರ್ಯದರ್ಶಿಗಳು, ಆಡಳಿತ ನಿರ್ದೇಶಕರು, ಪ್ರಾಂಶುಪಾಲರು ಸಿಬ್ಬಂದಿ ವರ್ಗದವರು ಹಾಗೂ ಪಾಲಕರು ಶುಭ ಹಾರೈಸಿ ಅಭಿನಂದಿಸಿದ್ದಾರೆ.

# ಪದಬಂಧ–41

**–ಶ್ರೀ ಗುರು ದಾಸ.**

**ಎಡದಿಂದ ಬಲಕ್ಕೆ :–**

1. ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯಂದು ಆಚರಿಸುವ ಹಬ್ಬ –5
3. ಎಲ್ಲರ ಕಾಲನ್ನು ಎಳೆಯುವ ಸಮಯ –2
4. ಕೈಲಾಗದವರು ಸುಮ್ಮನೆ ನುಣುಚಿಕೊಳ್ಳುತ್ತಾರೆ –3
5. ಗುರು ಶಿಷ್ಯನಿಗೆ ಅದ್ವಿತೀಯನಾಗು ಎಂದು ಮಾಡಿದ ಆಶೀರ್ವಾದ –5
7. ಮಜುಗರ ಉಂಟಾಗುವುದು –3
9. ಇನ್ನೊಬ್ಬರ ಶೈಲಿಯನ್ನು ಅನುಸರಣೆ ಮಾಡುವುದು –5
10. ಸುಡುವ ಜ್ವಾಲೆ –2
11. ಹಿಡಿದ ಕೆಲಸ ಬಿಡಲಾರೆನೆಂದು ಮುಗಿಸುವುದು –4
13. ಕಿರು ವಯಸ್ಸಿನ ಹುಡುಗ –3
14. ನಗೆಯಾಡುತ್ತಿರುವ ಉಗುರು –2

| | | | | | | | |
|---|---|---|---|---|---|---|---|
| 1 | | | | 2 | ■ | 3 | |
| | ■ | ■ | ■ | 4 | | | ■ |
| 5 | | | 6 | | ■ | | ■ |
| | ■ | ■ | | ■ | 7 | | 8 |
| ■ | 9 | | | | | ■ | |
| 10 | | ■ | | ■ | | ■ | |
| | ■ | 11 | | 12 | | ■ | |
| 13 | | | ■ | | ■ | 14 | |

**ಮೇಲಿಂದ ಕೆಳಕ್ಕೆ :–**

1. ಜ್ಞಾನವನ್ನು ಪರೀಕ್ಷಿಸುವ ಚುಟುಕು ಪ್ರಶ್ನೆಗಳು –4
2. ತಾರೆಗಳೆಲ್ಲ ಥಳಥಳಿಸುತ್ತಿವೆ –3
3. ದೇಹಕ್ಕೆ ಶಕ್ತಿ ನೀಡುವ ದ್ವಿದಳಧಾನ್ಯಗಳು –4
6. ಹೆಸರಿಡುವ ಸಮಾರಂಭ –5
7. ನದಿಯ ಹರಿಯುವ ನೀರಿಗೆ ಕಟ್ಟಿದ ಕಟ್ಟು –4
8. ಅಶ್ವದ ಮುಖವನ್ನು ಹೋಲುವ ಪರ್ವತ ಶ್ರೇಣಿ –5
9. ಪಡಿಯಚ್ಚಿನಲ್ಲಿ ಎರಕ ಹೊಯ್ದು ತೆಗೆದ ಪ್ರತಿರೂಪ –2
10. ಮನೆಯೊಳಗಿಂದ ಪ್ರಪಂಚ ತೋರಿಸುವ ಕಿಂಡಿ –3
11. ನನ್ನ ಪಕ್ಕದಲ್ಲಿ ಇನ್ನು ಯಾರು ಇಲ್ಲ –2
12. ಹೆಸರು ಬೇಳೆ ಹಾಕಿ ಮಾಡಿದ ಒಂದು ಬಗೆಯ ಸಾರು –2

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

ಪದಬಂಧ–40ರ ಉತ್ತರ

**ಎಡದಿಂದ ಬಲಕ್ಕೆ:–** 1.ನಾಗರಿಕ, 3.ವಿಚಿತ್ರ, 5.ದಟ್ಟವಾದ, 7.ಗುಂಗುರು, 8.ನಂದಿಗುಡಿ, 9.ರತ್ನಾಕರ, 12.ಯತ್ರಿಕ್ಷ(ಕ್ಷತ್ರಿಯ), 13.ಸಂಕ್ರಾಂತಿ, 14.ಕದಲದೆ. ***** **ಮೇಲಿಂದ ಕೆಳಕ್ಕೆ:–** 1.ನಾರದ, 2.ಕಸದಗುಂಡಿ, 3.ವಿಶ್ವಗುರು, 4.ತ್ರಯಂಬಕೇಶ್ವರ, 6.ಟ್ಟಬೆದಿನಂ(ನಂದಿಬೆಟ್ಟ), 9.ರಕ್ಷಕ, 10.ಕಮಲ, 11.ತೆಸಂ(ಸಂತೆ), 12.ಯತಿ.